ಸಜ್ಜನರ ಸಂಗಾತಿ www.sanmarga.com

ಸಂಪುಟ: 33
ಸಂಚಿಕೆ: 25
ಬೆಲೆ ರೂ. 8.00
ಮಂಗಳೂರು

# ಸನ್ಮಾರ್ಗ ವಾರಪತ್ರಿಕೆ

2010 ಸೆಪ್ಟೆಂಬರ್ 05 – 11
1431 ರಮಝಾನ್ 25 – ಶವ್ವಾಲ್ 01




# ರೋಗ ಪತ್ತೆಯಾಗಿದೆ ಇನ್ನಾದರೂ ಮದ್ದು ಮಾಡಿ

■ ಏಯೆಸ್ಸೆಸ್

ಇತ್ತೀಚೆಗೆ ಹಿರಿಯ ಪೊಲೀಸ್ ವರಿಷ್ಠಾಧಿಕಾರಿಗಳ ಸಭೆಯಲ್ಲಿ ಪ್ರಧಾನಿ ಮನಮೋಹನ್ ಸಿಂಗ್‌ರು ಮಾಡಿದ ಭಾಷಣವು ಏಕಕಾಲದಲ್ಲಿ ರಾಜ ತಾಂತ್ರಿಕನ ವಿವೇಕಪೂರ್ಣ ವಿಶ್ಲೇಷಣೆ ಮತ್ತು ತಪ್ಪೊಪ್ಪಿಗೆಯಾಗಿತ್ತು. ದೇಶದಲ್ಲಿ ಶ್ರೀಮಂತರು ಮತ್ತು ಬಡವರ ಅಂತರವು ಹೆಚ್ಚಿರುವುದರಿಂದ ಅಪರಾಧ ಕೃತ್ಯದಲ್ಲಿ ಏರಿಕೆಯಾಗಿದೆಯೆಂದು ಅವರು ಹೇಳಿದರು. 2003ರಿಂದ ಭಾರತದ ಅರ್ಥ ವ್ಯವಸ್ಥೆಯು ಅಭಿವೃದ್ಧಿ ಪಥದಲ್ಲಿದೆ. ಅದೇ ವೇಳೆ 5 ವರ್ಷಕ್ಕಿಂತ ಕೆಳಗಿನ ಮಕ್ಕಳಲ್ಲಿ ಹಸಿವೆ ಹೆಚ್ಚುತ್ತಿದೆ. ಈ ವಿಷಯದಲ್ಲಿ ಬಡ ಆಫ್ರಿಕನ್ ರಾಷ್ಟ್ರಗಳ ಸ್ಥಿತಿಯು ನಮಗಿಂತ ಉತ್ತಮವಾಗಿದೆ. ಇತ್ತೀಚೆಗಿನ ಅಂಕಿ ಅಂಶಗಳು ಭಾರತದ ಆರ್ಥಿಕ ಅಸಮಾನತೆಯ ತೀವ್ರತೆಯನ್ನು ಸ್ಪಷ್ಟಪಡಿಸಿವೆ. ಭಾರತದ ಸುಮಾರು 50 ಶ್ರೀಮಂತರ ಒಟ್ಟು ಸಂಪತ್ತು 2008ರಲ್ಲಿ ದೇಶದ ಉತ್ಪಾದನೆಯ (ಜಿ.ಡಿ.ಪಿ.) 31% ಇತ್ತು. ಅದೇ ವೇಳೆ 49 ಭಾರತೀಯ ಕೋಟ್ಯಾಧಿಪತಿಗಳ ಒಟ್ಟು ಸಂಪತ್ತು 3,41,000 ಕೋಟಿ ಡಾಲರ್ ಆಗಿದೆ. ಜಿಡಿಪಿಯ ಈ ಪ್ರಭುತ್ವವು ಅಮೇರಿಕದ ಬಿಲಿಯಾಧಿಪತಿಗಿಂತ ಮೂರು ಮತ್ತು ಚೀನಾದ ಹತ್ತು ಪಟ್ಟು ಅಧಿಕವಿದೆ. ಒಟ್ಟಲ್ಲಿ ಘೋಷಿತ ಬಂಡವಾಳಶಾಹಿತ್ವವು, ಕಮ್ಯೂನಿಸ್ಟ್ ರಾಷ್ಟ್ರಗಳನ್ನು ಏಕಪ್ರಕಾರ ಹಿಂದೆ ಹಾಕಿ ಭಾರತದ ಅಸಮಾನತೆಯು ಹೆಚ್ಚುತ್ತಿದೆ. ಭಾರತದ ವಾಣಿಜ್ಯ ಕೇಂದ್ರವಾಗಿರುವ ಮುಂಬೈಯಲ್ಲಿ ಜಾಗತಿಕ ಮಟ್ಟದ ಶ್ರೀಮಂತರ ಮೂಗಿನಡಿಯಲ್ಲಿ 60 ಲಕ್ಷ ದಟ್ಟ ದರಿದ್ರರು ಬದುಕುತ್ತಿದ್ದಾರೆ. ಒಟ್ಟು ಭಾರತೀಯರಲ್ಲಿ 37.2% ಹಸಿವು ಪೀಡಿತರೆಂದು ಹೊಸ ಅಂಕಿಅಂಶಗಳು ಹೇಳುತ್ತವೆ. 2004–05ಕ್ಕೆ ಹೋಲಿಸಿದಾಗ 11 ಕೋಟಿ ಜನರನ್ನು ಬಡವರ ಯಾದಿಗೆ ಹೆಚ್ಚುವರಿಯಾಗಿ ಸೇರಿಸಲಾಗಿದೆ. ಬಡತನ ನಿರ್ಣಯದ ಮಾನದಂಡಗಳ ಬದಲಾವಣೆಯು ಈ ಏರಿಕೆಗೆ ಕಾರಣವಾಗಿದ್ದರೂ, ಬಡತನ ಬೆಳೆಯುತ್ತಿದೆ. ಕೋಟ್ಯಾಧಿಪತಿಗಳ ಜತೆ ಲಕ್ಷಾಧಿಪತಿಗಳೂ ಹೆಚ್ಚುತ್ತಿದ್ದಾರೆ. ಸುಮಾರು 30 ಅತಿ ಶ್ರೀಮಂತ ಕುಟುಂಬಗಳ ಸಂಪತ್ತನ್ನು ಕಳೆದರೆ ಭಾರತದ ಜಿಡಿಪಿ 7.9ರಿಂದ 6%ಕ್ಕೆ ಕುಸಿಯುತ್ತದೆ. 115 ಕೋಟಿ ಜನ ರಿರುವ ದೇಶದಲ್ಲಿ ಸುಮಾರು 100 ಮಂದಿಯ ಸೊತ್ತು ಇಷ್ಟೊಂದು ಭಾರವಾಗಿದೆ.

ದೇಶದಲ್ಲಿ ವೃದ್ಧಿಸುತ್ತಿರುವ ಅಪರಾಧ ಕೃತ್ಯಗಳಿಗೆ ಹೇತುವೆಂಬ ಪ್ರಧಾನಿಯ ಈ ವಿಶ್ಲೇಷಣೆಯಲ್ಲಿ ತಪ್ಪೊಪ್ಪಿಗೆಯ ಸೂಚನೆಯಿದೆ. ಅರ್ಥಾತ್ 1991ರಲ್ಲಿ ಆರಂಭಿಸಿದ್ದ ನವ ಆರ್ಥಿಕ ವ್ಯವಸ್ಥೆಯು ಕೇವಲ ಶ್ರೀಮಂತರಿಗೆ ಉಪಯುಕ್ತ ವಾಯಿತು. ಮನಮೋಹನ ಸಿಂಗ್‌ರು ಜಾಗತೀಕರಣ, ಖಾಸಗೀಕರಣ ಮತ್ತು ಜಾಗತೀಕರಣದ ವಿಕಾಸಶೀಲ ಆರ್ಥಿಕತೆಯ ವಕ್ತಾರ ಮತ್ತು ಪ್ರಾಯೋಜಕರಾಗಿದ್ದರಷ್ಟೆ. (ಕೊನೆಯ ಪುಟಕ್ಕೆ)




## ಈದನ್ನು ಉರಿಸುವ ಪಂಜನ್ನು ನಂದಿಸಿ

**ವಿಶೇಷ ಸಂಪಾದಕೀಯ**

ಈ ಬಾರಿಯ ರಮಝಾನ್ ಹಬ್ಬವನ್ನು ಹಿಂಸೆಯ ಹಬ್ಬವಾಗಿಸಲು ಮತ್ತು ಖುಷಿಯನ್ನು ಕಬಳಿಸಲು ಸಂಘಪರಿವಾರ ಭರ್ಜರಿ ತಯಾರಿಯಲ್ಲಿ ತೊಡಗಿಕೊಂಡಿದೆ. ಸೆಪ್ಟೆಂಬರ್ 2ನೇ ವಾರದಲ್ಲಿ ಈದ್ ಆಗುವಂತೆಯೇ ಬಾಬರೀ ಮಸೀದಿ ಒಡೆತನದ ಬಗ್ಗೆ ಅಲಹಾಬಾದ್ ಹೈಕೋರ್ಟಿನ ತೀರ್ಪು ಹೊರಬೀಳುವ ಸಾಧ್ಯತೆಯೂ ಇದೆ. ಒಂದು ವೇಳೆ ತೀರ್ಪು ತಮ್ಮ ವಿರುದ್ಧವಾದರೆ ಒಪ್ಪುವುದಕ್ಕೆ ಸಾಧ್ಯವೇ ಇಲ್ಲ ಎಂದು ಸಂಘಪರಿವಾರ ಈಗಾಗಲೇ ಘೋಷಿಸಿದೆ. ನಿಜವಾಗಿ ಸಂಘಪರಿವಾರ ಈ ವರೆಗೆ ಈ ದೇಶದ ಮುಂದೆ ಏನೆಲ್ಲಾ ಹೇಳಿಕೊಂಡು ತಿರುಗಿತ್ತೋ ಅವೆಲ್ಲ ಪುರಾವೆ ಇಲ್ಲದ, ತರ್ಕಕ್ಕೆ ನಿಲುಕದ ಬಡಾಯಿಗಳೆಂಬುದನ್ನು ಈ ಘೋಷಣೆಯೇ ಸಾಬೀತುಪಡಿಸುತ್ತದೆ. ಒಂದು ವೇಳೆ ಅಯೋಧ್ಯೆಯಲ್ಲಿರುವುದು ರಾಮಮಂದಿರ ಎಂದಾಗಿದ್ದರೆ ಮತ್ತು ಮುಸ್ಲಿಮರ ಒಡೆತನಕ್ಕೆ ಬಾಬರಿ ಸಮುಚ್ಚಯ ಸೇರಿಲ್ಲವಾದರೆ, ತೀರ್ಪಿಗಿಂತ ಮೊದಲೇ ಭೀತಿಯ ಹೇಳಿಕೆ ಹೊರಡಿಸುವ ಅಗತ್ಯವಾದರೂ ಏನಿತ್ತು? ವಾದದ ಬಗ್ಗೆ ಸೂಕ್ತ ಪುರಾವೆ ಇರುವವರು ತೀರ್ಪಿನ ಬಗ್ಗೆ ಅನುಮಾನ ಪಡುತ್ತಾರೆಯೇ? ಇಷ್ಟಕ್ಕೂ ಕೋರ್ಟು ಇರುವುದಾದರೂ ಯಾತಕ್ಕೆ? ಕೋರ್ಟ್‌ನ ತೀರ್ಪು ಹೀಗೆಯೇ ಬರಬೇಕು, ಇಲ್ಲದಿದ್ದರೆ ಪರಿಣಾಮ ಎದುರಿಸಬೇಕಾದೀತು ಎನ್ನುವುದನ್ನು ದೇಶ ವಿರೋಧಿಗಳಿಂದಲ್ಲದೇ ದೇಶ ಪ್ರೇಮಿಗಳಿಂದ ನಿರೀಕ್ಷಿಸಲು ಸಾಧ್ಯವೇ? ಮುಸ್ಲಿಮರು ಈ ದೇಶವನ್ನು ಪ್ರೀತಿಸಬೇಕು, ಈ ದೇಶದ ಕಾನೂನನ್ನು ಗೌರವಿಸಬೇಕು ಎಂದು ಬಾರಿಬಾರಿಗೂ ಬುದ್ಧಿ ಹೇಳುವ ಬಿಜೆಪಿ ಮತ್ತು ಪರಿವಾರ, ಕಾನೂನನ್ನು ಗೌರವಿಸಬೇಕಾದ ಸಂದರ್ಭ ಬಂದಾಗಲೆಲ್ಲಾ ಧಿಕ್ಕರಿಸುವುದು ಯಾವ ಬಗೆಯ ದೇಶಪ್ರೇಮ? (2ನೇ ಪುಟಕ್ಕೆ)

## ಕಾಶ್ಮೀರ: ಮತಾಂತರ ಸುದ್ದಿ
### ಜಮಾಅತ್ ಖಂಡನೆ

ನವದೆಹಲಿ: ಕಾಶ್ಮೀರದಲ್ಲಿ ಶಂಕಿತ ಉಗ್ರರು ಸಿಕ್ಖರನ್ನು ಇಸ್ಲಾಮ್ ಸ್ವೀಕರಿಸಲು ಅಥವಾ ಕಣಿವೆ ತೊರೆಯಲು ಒತ್ತಾಯಿಸಿದ್ದಾರೆಂಬುದನ್ನು ಜಮಾಅತೆ ಇಸ್ಲಾಮಿ ಹಿಂದ್ ತೀವ್ರವಾಗಿ ಖಂಡಿಸಿದೆಯಲ್ಲದೆ, ಅದನ್ನೊಂದು ಘೋರ ಸಂಚಿನ ಅಂಗವಾಗಿದೆ ಎಂದು ಬಣ್ಣಿಸಿದೆ.

ಜಮಾಅತ್ ಕೇಂದ್ರ ಕಚೇರಿಯಿಂದ ಹೊರಡಿಸಲಾದ ಹೇಳಿಕೆಯೊಂದರಲ್ಲಿ ಜಮಾಅತೆ ಇಸ್ಲಾಮಿ ಹಿಂದ್‌ನ ಪ್ರಧಾನ ಕಾರ್ಯದರ್ಶಿಯವರಾದ ನುಸ್ರತ್ ಅಲಿಯವರು, “ಭಯೋತ್ಪಾದಕರು, ನೀಡಿರುವಂತಹ ಹೇಳಿಕೆಯು ಅಜ್ಞಾನ ಜನ್ಯ ಮತ್ತು ಇಸ್ಲಾಮೇತರವಾದ ವಿಷಯವಾಗಿದೆ. ಇಂತಹ ಯಾವುದೇ ಒತ್ತಾಯ–ಬಲಾತ್ಕಾರವನ್ನು ಇಸ್ಲಾಮ್ ಮತ್ತು ಅದರ ಶಿಕ್ಷಣವು ಎಂದೂ ಬೆಂಬಲಿಸುವುದಿಲ್ಲ” ಎಂದು ಈ ಕುರಿತು ಪ್ರತಿಕ್ರಿಯಿಸಿದ್ದಾರೆ.

“ಈ ಹೇಳಿಕೆಯು ಕಪೋಲ ಕಲ್ಪಿತವಾಗಿದ್ದು, ಇಸ್ಲಾಮಿನ ಶಿಕ್ಷಣಕ್ಕೆ ವಿರುದ್ಧವಾಗಿದೆ. ಇದು ಇಸ್ಲಾಮ್ ವಿರೋಧಿ ಶಕ್ತಿಗಳ ಸಂಚಾಗಿದ್ದು, ಕಾಶ್ಮೀರ–ಪಂಜಾಬ್ ಸಹಿತ ದೇಶದಾದ್ಯಂತದ ಜನಸಾಮಾನ್ಯರಂತೆಯೇ ಮುಸ್ಲಿಮ್–ಸಿಕ್ಖರ ನಡುವೆ ಇರುವ ಸಾಹೋದರ್ಯ ಸಂಬಂಧವನ್ನು ಕೆಡಿಸುವ ಹುನ್ನಾರವಾಗಿದೆ. ಆದ್ದರಿಂದ ಉಭಯ ಧರ್ಮಗಳ ಅನುಯಾಯಿಗಳು ಎಚ್ಚರಿಕೆಯಿಂದಿರಬೇಕು” ಎಂದು ಅವರು ಹೇಳಿದರು.

ಭಯೋತ್ಪಾದಕರ ನೆಪ ಮಾಡಿಕೊಂಡು ಸಮಾಜದಲ್ಲಿ ಒಡಕನ್ನುಂಟು ಮಾಡುವ ದುಷ್ಟಶಕ್ತಿಗಳ ಹುನ್ನಾರವನ್ನು ವಿಫಲಗೊಳಿಸುವಲ್ಲಿ ಜನತೆ ಮತ್ತು ಸರಕಾರ ಎರಡೂ ಕರ್ತವ್ಯನಿಷ್ಠವಾಗಬೇಕಾಗಿದೆ ಎಂದು ಪ್ರಸ್ತುತ ಖಂಡನಾ ಹೇಳಿಕೆಯಲ್ಲಿ ವಿನಂತಿಸಲಾಗಿದೆ.

## ಸಂಬಳ ಹೆಚ್ಚಳಕ್ಕೆ ಅರ್ಹತೆ ಬೇಡವೇ?

■ ಬಿ.ಎ. ಸಲೀಮ್

ಸಂಸತ್ತಿನಲ್ಲಿ ಆಕಳಿಕೆ ಬಿಡುತ್ತಿದ್ದ ಸಂಸದರೆಲ್ಲಾ ಸೇರ್‍ಕೊಂಡು ತಮಗೆ ಬೇಕಾದಂತೆ ತಮ್ಮ ಸಂಬಳವನ್ನು ಮೂರು ಪಟ್ಟು ಹೆಚ್ಚಿಸಿಕೊಂಡಿದ್ದಾರೆ. ಅವರ ಸಾರ್ಥಕ ಬದುಕನ್ನು ನೋಡಿ ಎಚ್ಚೆತ್ತ ನಮ್ಮ ಶಾಸಕ ಮಹಾಶಯರುಗಳು ತಮ್ಮ ಸಂಬಳವನ್ನೂ ಹೆಚ್ಚಿಸಬೇಕೆಂಬ ಕ್ಯಾತೆ ತೆಗೆದಿದ್ದಾರೆ. ಸಂಸದರಿಗಿಂತ ನಾವೇನು ಕಮ್ಮಿ ಎನ್ನುತ್ತಾ ಸಂಬಳದ ಜೊತೆಗೆ ಒಂದು ಲಕ್ಷ ಭತ್ತೆ ನೀಡಬೇಕೆಂದೂ ಆಗ್ರಹಿಸುವ ತರಾತುರಿಯಲ್ಲಿದ್ದಾರೆ. ಪ್ರಸ್ತುತ ಶಾಸಕರ ತಿಂಗಳ ವೇತನ 10 ಸಾವಿರ, ಅಂಚೆವೆಚ್ಚ, ಆಪ್ತ ಸಹಾಯಕ ಹಾಗೂ ಕೊಠಡಿ ಸೇವಕರ ವೇತನ, ದೂರವಾಣಿ ವೆಚ್ಚ, ಭತ್ಯೆ ಎಲ್ಲ ಒಟ್ಟು ಸೇರಿ 44 ಸಾವಿರ ಬರುತ್ತದೆ. ಇದು ಸಾಕಾಗುತ್ತಿಲ್ಲವೆಂಬುದು ಇವರ ವಾದ.

ಜನರಿಂದ ಆರಿಸಿ ಹೋದ ಶಾಸಕರು ವಿಧಾನ ಸಭೆಗೆ ಹೋಗಿ ಮಾಡಿದ್ದಾದರೂ ಏನು? ಆರಿಸಿ ಬಂದ ಹೆಚ್ಚಿನ ಶಾಸಕರು ಸ್ವಾರ್ಥ ಹಿತಾಸಕ್ತಿಗಳಲ್ಲಿಯೇ ಮುಳುಗಿದ್ದಾರೆ. ಜನತೆಯ ಹಿತಾಕಾಂಕ್ಷೆಯಿರುವ ಶಾಸಕರು ವಿರಳ. ಇಲ್ಲಿ ಚಿತ್ರನಟರನ್ನು ಆರಿಸಿ ಕಳಿಸಲಾಗುತ್ತದೆ. ಇಂತಹವರು ತಮ್ಮ ಕ್ಷೇತ್ರದ ಬಗ್ಗೆ ತಿರುಗಿ ನೋಡಿದ್ದು ಬಹಳ ಅಪರೂಪ. ಚುನಾವಣೆಯ ಸಂದರ್ಭ ಜನರ ಕಾಲಿಗೆ ಬೀಳುವ ಇವರು ನಂತರ ಹಿಂದಿರುಗಿ ನೋಡುವುದೂ ಇಲ್ಲ. ಅದೇ ರೀತಿ ಇಲ್ಲಿ ಅನೇಕ ಶಾಸಕರ ಚಾರಿತ್ರ್ಯವೂ ಹರಣಗೊಂಡಿದೆ. ಶಾಸಕರು ಸಂಬಳದ ಕುರಿತು ಮಾತನಾಡುವಾಗ, ಅವರ ಕಾರ್ಯವೈಖರಿಯ ಕುರಿತು ಪ್ರಶ್ನಿಸುವ ಅಗತ್ಯವಿದೆ. ತಮಗೆ ಓಟು ನೀಡಿದ್ದಕ್ಕಾಗಿ ಅವರು ಈ ಜನರನ್ನು ಸ್ಮರಿಸುತ್ತಾರೆಯೇ? ಸರಕಾರ ಬಿಕ್ಕಟ್ಟು ಎದುರಿಸುವಾಗ ಆಪರೇಶನ್ ಎಂಬ ಎಂಜಲಿಗೆ ನಾಲಗೆಯೊಡ್ಡಿ ತಮ್ಮನ್ನೇ ಮಾರುತ್ತಿರುವ ಶಾಸಕರ ಕುರಿತು ಬೇರೆ ಹೇಳಬೇಕಾಗಿಲ್ಲ. ಜನಪ್ರತಿನಿಧಿಗಳೆನಿಸಿಕೊಂಡವರು ಲೈಂಗಿಕ ಹಗರಣದಲ್ಲಿ ಸಿಲುಕಿ ಒದ್ದಾಡುವುದು, ಅವರ ಹೆಂಡತಿ ಶಂಕಾಸ್ಪದ ರೀತಿಯಲ್ಲಿ ಸಾಯುವುದು, ನರ್ಸ್ ಹಗರಣ- ಈ ರೀತಿಯ ಹಲವು ಉದಾಹರಣೆಗಳು ಈ ನಾಡಿನಲ್ಲಿ ಸಂಭವಿಸಿದೆ. ಲೋಕಾಯುಕ್ತರಿಗೆ ಸಿಕ್ಕಿಬಿದ್ದ ಸಂಪಂಗಿಯನ್ನು ರಕ್ಷಿಸುತ್ತಾ ನಮ್ಮ ಸಂಪಂಗಿ ಅಂತಹವನಲ್ಲ ಎಂದು ಕ್ಲೀನ್‌ಚಿಟ್ ಕೊಟ್ಟ ಮಂತ್ರಿಮಂಡಲದಿಂದ ಭ್ರಷ್ಟಾಚಾರ ನಿರ್ಮೂಲನೆ ಹೇಗೆ ಸಾಧ್ಯ?

ವಿಶ್ವಾಸಮತದ ಸಂದರ್ಭ ಎದುರಾದಾಗ ರೆಸಾರ್ಟ್‌ಗಳಲ್ಲಿ ಬೀಡು ಬಿಡುವ ಈ ಶಾಸಕ ಮಹಾಶಯರುಗಳಲ್ಲಿ ಸ್ವಪಕ್ಷೀಯ ನಾಯಕರುಗಳಿಗೆ ನಂಬಿಕೆ ಇಲ್ಲದ ಮೇಲೆ ಈ ಜನತೆ ಇವರ ಮೇಲೆ ನಂಬಿಕೆಯಿರಿಸುವುದಾದರೂ ಹೇಗೆ? ಇಲ್ಲಿ ತಮಗಾಗದವರನ್ನು ವರ್ಗಾಯಿಸುವುದು, ತಮ್ಮ ಆಪ್ತರನ್ನು ನೇಮಿಸುವುದು ಮಾಮೂಲಾಗಿ ಬಿಟ್ಟಿದೆ. (ಕೊನೆಯ ಪುಟಕ್ಕೆ)

### ನಿರೀಕ್ಷಿಸಿರಿ.....

ಮಾನವ ಜನಾಂಗಕ್ಕೆ ಸನ್ಮಾರ್ಗದರ್ಶಕವಾದ ಸತ್ಯಾಸತ್ಯ ವಿವೇಚಕ ಗ್ರಂಥ ಕುರ್‌ಆನ್ ಅವತೀರ್ಣವಾದ ರಮಝಾನ್ ನಮ್ಮನ್ನಗಲುತ್ತಿದೆ. ಆದರೆ ಅದರೊಂದಿಗೇ ಉಪವಾಸ ಪಾರಣೆಯ ಹಬ್ಬವೆಂಬ ಉಡುಗೊರೆಯನ್ನು ಬಿಟ್ಟು ಹೋಗುತ್ತಿದೆ. ಈದ್‌ನ ಮಹತ್ವ ಸಾರುವ...

**ಈದ್ ವಿಶೇಷಾಂಕ** ಮುಂದಿನ ವಾರ ನಿಮ್ಮ ಕೈಯಲ್ಲಿ

ವ್ಯವಸ್ಥಾಪಕ: 9449591561 Website: www.sanmarga.com

ಪರಮ ದಯಾಮಯ-ಕರುಣಾಳುವಾದ ಅಲ್ಲಾಹನ ನಾಮದಿಂದ

## ಸಂಪಾದಕೀಯ

# ಈದನ್ನು ಉರಿಸುವ ಪಂಜನ್ನು ನಂದಿಸಿ

(ಮುಖಪುಟದಿಂದ)

1949 ಡಿಸೆಂಬರ್ 22-23ರಂದು ಬಾಬರೀ ಮಸೀದಿಯೊಳಗೆ ವಿಗ್ರಹಗಳನ್ನು ಸ್ಥಾಪಿಸಲಾಯಿತು. 1950ರಲ್ಲಿ ಉತ್ತರ ಪ್ರದೇಶದ ಜಿಲ್ಲಾ ನ್ಯಾಯಾಲಯ ಮತ್ತು 1955ರಲ್ಲಿ ರಾಜ್ಯ ಹೈಕೋರ್ಟು ವಿಗ್ರಹಗಳ ಸ್ಥಳಾಂತರವನ್ನು ತಡೆಯಿತಲ್ಲದೆ ಮಸೀದಿ ಬಳಿ ಪೂಜೆಗೂ ಅನುಮತಿ ನೀಡಿತು. ವಿಶೇಷ ಏನೆಂದರೆ ಈ ಎಲ್ಲ ಸಂದರ್ಭಗಳಲ್ಲಿ ಸಂಘಪರಿವಾರ ನ್ಯಾಯಾಲಯದ ಪರವಾಗಿತ್ತು. ನೆಲದ ಕಾನೂನನ್ನು ಗೌರವಿಸುವಂತೆ ಮುಸ್ಲಿಮರಿಗೆ ಕರೆಕೊಟ್ಟಿತ್ತು. ಮುಸ್ಲಿಮರು ಕೋರ್ಟು ತೀರ್ಪು ತಮ್ಮ ಪರವಾಗಿದ್ದರೆ ಮಾತ್ರ ಒಪ್ಪಿಗೆ ಎಂದು ಅಂದೂ ಹೇಳಿರಲಿಲ್ಲ. ಇಂದೂ ಹೇಳುತ್ತಿಲ್ಲ. ಈ ದೇಶವನ್ನು ಪ್ರೀತಿಸುವುದರಲ್ಲಿ ಮತ್ತು ಕಾನೂನನ್ನು ಗೌರವಿಸುವುದರಲ್ಲಿ ಸಂಘಪರಿವಾರಕ್ಕಿಂತ ಈ ದೇಶದ ಮುಸ್ಲಿಮರೇ ಎಷ್ಟೋ ಪಾಲು ಮುಂದಿದ್ದಾರೆ ಎನ್ನುವುದಕ್ಕೆ ಇದಕ್ಕಿಂತ ಉತ್ತಮ ಉದಾಹರಣೆಯ ಅಗತ್ಯವಿದೆಯೇ? 1955ರಲ್ಲಿ ಕೋರ್ಟು ತೀರ್ಪನ್ನು ಒಪ್ಪುವ ಸಂಘಪರಿವಾರ, ಯಾಕೆ 2010ರಲ್ಲಿ ಒಪ್ಪುತ್ತಿಲ್ಲ? ಅದರ ಉದ್ದೇಶವೇನು? ಕಾನೂನನ್ನು ಧಿಕ್ಕರಿಸುವುದು, ಹಿಂಸೆಯ-ಭೀತಿಯ ಬಗ್ಗೆ ಬಹಿರಂಗ ಹೇಳಿಕೆ ಕೊಡುವುದು ಸಂವಿಧಾನ ಬಾಹಿರವಲ್ಲವೇ? ನಿಜವಾಗಿ ದೇಶದ್ರೋಹ, ಭಯೋತ್ಪಾದನೆ ಅಂದರೆ ಕೇವಲ ಬಾಂಬು ಸ್ಫೋಟಿಸುವುದು, ಈ ದೇಶದ ರಹಸ್ಯಗಳನ್ನು ವೈರಿಗಳೊಂದಿಗೆ ಹಂಚಿಕೊಳ್ಳುವುದು ಮಾತ್ರ ಅಲ್ಲ. ಒಂದು ದೇಶವನ್ನು ಅರಾಜಕ ಸ್ಥಿತಿಗೆ ತಳ್ಳುವೆನೆಂದು ಘೋಷಿಸುವುದು ಕೂಡ ಭಯೋತ್ಪಾದನೆಯೇ. ನೆಲದ ಕಾನೂನಿನಲ್ಲಿ ನಂಬಿಕೆ ಇಲ್ಲದಿರುವ ಕಾರಣದಿಂದಾಗಿಯೇ ದಾವೂದ್ ಇಬ್ರಾಹೀಮ್, ಚೋಟಾ ರಾಜನ್, ರವಿ ಪೂಜಾರಿ ಮುಂತಾದವರೆಲ್ಲಾ ಹೊರದೇಶಗಳಲ್ಲಿ ಅಡಗಿಕೊಂಡಿದ್ದಾರೆ. ತಮ್ಮ ಪರವಾಗಿ ತೀರ್ಪು ಕೊಡುವ ಭರವಸೆಯನ್ನು ಕೋರ್ಟುಗಳು ನೀಡುವುದಾದರೆ ಅವರೂ ಈ ದೇಶದಲ್ಲಿ ಬಂದು ವಾಸಿಸಬಹುದು. ಈ ದೇಶವನ್ನು ಪ್ರೀತಿಸುವ, ಗೌರವಿಸುವ ಮಂದಿಗೆ ಅವರ ಭಾಷೆಯಲ್ಲಿ ಮಾತಾಡಲು ಸಾಧ್ಯವಾಗುವುದಾದರೂ ಹೇಗೆ? ಅವರಂತೆ ಧಮಕಿ ಕೊಡುವುದನ್ನು, ಕಾನೂನಿಗೆ ಅತೀತರಂತೆ ವರ್ತಿಸುವುದನ್ನು ಯಾಕೆ ದೇಶಪ್ರೇಮ, ಧರ್ಮಪ್ರೇಮ ಎಂದು ಪರಿಗಣಿಸಬೇಕು? ನಾಳೆ ಇನ್ನೊಂದು ಕೋಮಿನವರು ಪ್ರಕರಣವೊಂದನ್ನು ಮುಂದಿಟ್ಟುಕೊಂಡು ತಮ್ಮ ಭಾವನೆ, ಶ್ರದ್ಧೆ, ನಂಬಿಕೆಗಳೇ ಮೇಲು, ಕೋರ್ಟು ತಮ್ಮ ಪರವೇ ತೀರ್ಪು ನೀಡಬೇಕೆಂದು ಒತ್ತಾಯಿಸಿದರೆ ಏನಾದೀತು? ಸಂವಿಧಾನದ ಗೌರವ ಯಾವ ಮಟ್ಟಕ್ಕೆ ಮುಟ್ಟೀತು?

1992ರಲ್ಲಿ ಈ ದೇಶವನ್ನು ಉರಿಸಿದ್ದು ಮಸೀದಿಯೊಂದನ್ನು ಕೆಡಹಿ. ಕೆಡಹುವ ಚಳವಳಿಯನ್ನು ಹುಟ್ಟು ಹಾಕಿದವರಿಗೆ, ಅಯೋಧ್ಯೆಗಿಂತ ದೆಹಲಿಯ ಗದ್ದುಗೆಯಲ್ಲಿ ಕಣ್ಣಿತ್ತು. ಸಾವಿರಾರು ಜೀವಗಳು ಗದ್ದುಗೆಗಾಗಿ ಪ್ರಾಣ ತ್ಯಾಗ ಮಾಡಿದುವು. ಒಂದು ವೇಳೆ ಆ ಚಳುವಳಿ ಪ್ರಾಮಾಣಿಕವೇ ಆಗಿರುತ್ತಿದ್ದರೆ ಸಂಘಪರಿವಾರ ಈಗ ಒತ್ತಾಯಿಸುವಂತೆ, ಬಾಬರಿ ಮಸೀದಿಯ ಒಡೆತನದ ಹಕ್ಕನ್ನು ಹಿಂದೂಗಳಿಗೆ ಒಪ್ಪಿಸುವ ಮಸೂದೆಯನ್ನು ಬಿಜೆಪಿಗೆ ಪಾರ್ಲಿಮೆಂಟಲ್ಲಿ ಮಂಡಿಸಬಹುದಿತ್ತು. ಮಿತ್ರಪಕ್ಷಗಳು ಒಪ್ಪದೇ ಇದ್ದರೂ ತಾನಂತೂ ಮಂದಿರದ ಪರ ಎಂಬ ಸಂದೇಶವನ್ನಾದರೂ ದೇಶೀಯರಿಗೆ ರವಾನಿಸಬಹುದಿತ್ತು. ಆದರೆ ತನ್ನ ಅಧಿಕಾರದುದ್ದಕ್ಕೂ ಬಿಜೆಪಿ ಅಂಥದ್ದೊಂದು ಮಸೂದೆಯ ಬಗ್ಗೆ ಮಾತನ್ನೇ ಆಡಿಲ್ಲ. ಬಿಜೆಪಿ ಅಧಿಕಾರದಲ್ಲಿರುವ ವರೆಗೆ ಸಂಘಪರಿವಾರ ಅಂಥದ್ದೊಂದು ಒತ್ತಾಯವನ್ನು ಮಾಡಿದ್ದೂ ಇಲ್ಲ. ಇದೀಗ ದಿಢೀರಾಗಿ ಸಂಘಪರಿವಾರ ಅಂಥದ್ದೊಂದು ಮಸೂದೆ ರಚನೆಯ ಬಗ್ಗೆ ಮಾತಾಡುವುದನ್ನು ಮತ್ತು ಬಿಜೆಪಿ ಅದನ್ನು ಬೆಂಬಲಿಸುತ್ತಿರುವುದನ್ನು ಪ್ರಾಮಾಣಿಕ ಎಂದು ಹೇಳಲು ಸಾಧ್ಯವೇ? ಅಧಿಕಾರ ಇರುವಾಗ ಮಂದಿರವನ್ನು ಮರೆತವರು, ಅದು ಕೈ ತಪ್ಪಿ ಹೋದಾಗ ಭಕ್ತರ ವೇಷ ತೊಡುವುದನ್ನು ಕಪಟತನ ಎಂದಲ್ಲದೇ ಇನ್ನೇನೆಂದು ಕರೆಯಬೇಕು? ನಿಜವಾಗಿ ಬಿಜೆಪಿ ಮತ್ತು ಸಂಘಪರಿವಾರದ ಇಮೇಜು ಇವತ್ತು ಸಾಕಷ್ಟು ಕುಸಿದಿದೆ. ಪರಿವಾರದ ಪ್ರಮುಖರು ಒಬ್ಬೊಬ್ಬರಾಗಿ ಭಯೋತ್ಪಾದನಾ ಪ್ರಕರಣಗಳಲ್ಲಿ ಸಿಕ್ಕಿ ಬೀಳುತ್ತಿದ್ದಾರೆ. ಈ ದೇಶದ ಮಂದಿ ಬಿಜೆಪಿಯನ್ನು ಮತ್ತು ಅದರ ಗೊಂದಲಕಾರಿ ನಿಲುವುಗಳನ್ನು ಸತತವಾಗಿ ತಿರಸ್ಕರಿಸುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಸಂಘಪರಿವಾರದ ಸೆರಗಿನಲ್ಲಿ ಸೇರಿಕೊಂಡಿರುವ ಬಿಜೆಪಿ, ತೀರ್ಪಿಗಿಂತ ಮೊದಲು ಜನರ ಭಾವನೆಗಳನ್ನು ಬಡಿದೆಬ್ಬಿಸುವ ಪ್ರಯತ್ನಕ್ಕೆ ಇಳಿದಿರುವಂತಿದೆ. ಒಂದು ವೇಳೆ ಈ ಪ್ರಯತ್ನಕ್ಕೆ ಭರ್ಜರಿ ಪ್ರತಿಕ್ರಿಯೆ ಸಿಕ್ಕಿದರೆ ಇದನ್ನೇ ಮುಂದಿನ ಚಳವಳಿಯಾಗಿ ಪರಿಗಣಿಸಬಹುದೆಂಬ ಯೋಜನೆಯೂ ಅದಕ್ಕಿದೆ.

ನಿಜವಾಗಿ ನೆಹರೂರಿಂದ ಹಿಡಿದು ನರಸಿಂಹರಾವ್‌ರ ವರೆಗೆ ಕಾಂಗ್ರೆಸ್‌ನಿಂದ ಮುಸ್ಲಿಮರು ಗಿಟ್ಟಿಸಿಕೊಂಡದ್ದು ವಂಚನೆಯನ್ನೇ. ಇಷ್ಟಕ್ಕೂ ಕಾಂಗ್ರೆಸ್ ತಮ್ಮ ಪರ ಇರಬೇಕು ಎಂದು ಮುಸ್ಲಿಮರು ಎಂದೂ ಒತ್ತಾಯಿಸಿಲ್ಲ. ಕಾನೂನನ್ನು ಜಾರಿಗೊಳಿಸಿ ಎಂದಷ್ಟೇ ಬಯಸುತ್ತಿದ್ದಾರೆ. ಈ ದೇಶದ ಸಂವಿಧಾನವನ್ನೇ ಕಿತ್ತೊಗೆದು ಕಾನೂನನ್ನು ಅಪಹಾಸ್ಯ ಮಾಡಿದ 1992 ಡಿಸೆಂಬರ್ 6ರ ಘಟನೆಯಲ್ಲಿ ಕಾಂಗ್ರೆಸ್ ನೂರು ಶೇಕಡಾ ಪ್ರಾಮಾಣಿಕ ಖಂಡಿತ ಅಲ್ಲ. ಆ ಸಂಚಿನಲ್ಲಿ ಒಳಗೊಳಗೇ ಕೈಜೋಡಿಸಿದ ಕಾಂಗ್ರೆಸಿಗರಿದ್ದಾರೆ. ಅಪರಾಧಿಗಳನ್ನು ರಕ್ಷಿಸುವುದಕ್ಕಾಗಿ ಚಾರ್ಜ್ ಶೀಟನ್ನು ದುರ್ಬಲಗೊಳಿಸಿದವರಿದ್ದಾರೆ. ಈ ಕಾರಣದಿಂದಲೇ ಒಂದು ಹಂತದ ವರೆಗೆ ಮುಸ್ಲಿಮರು ಕಾಂಗ್ರೆಸ್ಸಿನ ಕೈ ಬಿಟ್ಟಿದ್ದರು. ಅಧಿಕಾರವೂ ಕೈತಪ್ಪಿ ಹೋಗಿತ್ತು. ಕೊನೆಗೆ ಕಾಂಗ್ರೆಸ್ ತನ್ನ ಕಾನೂನುಬಾಹಿರ ಒಳಸಂಚುಗಳಿಗಾಗಿ, ನಂಬಿಕೆ ದ್ರೋಹಕ್ಕಾಗಿ ಕ್ಷಮೆಯನ್ನೂ ಯಾಚಿಸಿತ್ತು. ಇದೀಗ ಕಾಂಗ್ರೆಸ್‌ನ ಮುಂದೆ ಮತ್ತೆ ಸವಾಲು ಎದುರಾಗಿದೆ. ಈ ದೇಶವನ್ನು ಉರಿಸುವ ಪಂಜಿನೊಂದಿಗೆ ಸಂಘಪರಿವಾರದ ನೇತೃತ್ವದಲ್ಲಿ ಬಿಜೆಪಿ ಎದ್ದು ನಿಂತಿರುವಾಗ ನರಸಿಂಹರಾವ್‌ರ ಧಾಟಿಯಲ್ಲಿ ಕಾಂಗ್ರೆಸ್ ಮಾತಾಡುತ್ತದೋ ಎನ್ನುವ ಅನುಮಾನ ಮುಸ್ಲಿಮರಲ್ಲಿದೆ.

ನಿಜವಾಗಿ ಭಾವನೆಗಳು ಕಾನೂನುಗಳನ್ನು ನಿಯಂತ್ರಿಸತೊಡಗಿದರೆ, ಆ ಬಳಿಕ ಸತ್ಯ ಸತ್ತು ಹೋಗಿ, ಸುಳ್ಳುಗಳೇ ಅಧಿಕಾರ ಚಲಾಯಿಸುತ್ತದೆ. ಕಾನೂನಿಗೆ ಭಾವನೆಗಳನ್ನು ನಿಯಂತ್ರಿಸುವ ಸಾಮರ್ಥ್ಯ ಸಿಕ್ಕಾಗ ಸುಳ್ಳು ಮತ್ತು ಹಿಂಸೆಗೆ ಸೋಲಾಗುತ್ತದೆ. ಸದ್ಯ ಈ ದೇಶವನ್ನು ಉರಿಸಲು ಹೊರಟಿರುವವರು ಭಾವನೆಗಳೆಂಬ ಬಹುವಿಧ ಆಯುಧವನ್ನು ಎತ್ತಿಕೊಂಡಿದ್ದಾರೆ. ಈ ಆಯುಧದ ಹೆಸರಲ್ಲಿ ಕಾನೂನನ್ನು, ಸತ್ಯವನ್ನು ಉಲ್ಲಂಘಿಸುವ, ಬೇಕಾದರೆ ಮನುಷ್ಯರ ರಕ್ತವನ್ನೂ ಹರಿಸುವ ಬೆದರಿಕೆ ಹಾಕುತ್ತಿದ್ದಾರೆ. ಇಷ್ಟಕ್ಕೂ ಭಾವನೆಗಳು ಯಾವುದಾದರೂ ಒಂದು ಧರ್ಮಕ್ಕೆ, ಧರ್ಮಾನುಯಾಯಿಗಳಿಗೆ ಸೀಮಿತವಲ್ಲವಲ್ಲ. ಎಲ್ಲರ ಭಾವನೆಗಳನ್ನು ಗೌರವಿಸುವ, ಕಾನೂನಿಗೆ ಬೆಲೆ ಕೊಡುವ ಕೆಲಸವನ್ನು ಕಾಂಗ್ರೆಸ್ ನಿರ್ವಹಿಸಬೇಕು. ಸೆಪ್ಟೆಂಬರ್, ಇನ್ನೊಂದು ಡಿಸೆಂಬರ್ 6 ಆಗದಂತೆ ನೋಡಿಕೊಳ್ಳಬೇಕಾದ, ಜನರನ್ನು ರಕ್ಷಿಸಬೇಕಾದ ಜವಾಬ್ದಾರಿ ಕಾಂಗ್ರೆಸ್‌ನದ್ದು. ಭರವಸೆ ಇರಿಸೋಣ.

## ವಿ ಚಾ ರ ಮ ಣಿ

ಸತ್ಯವನ್ನು ನಿಷೇಧಿಸುವವನ ನಿಷೇಧವು ನಿಮ್ಮನ್ನು ವ್ಯಥೆಗೀಡು ಮಾಡದಿರಲಿ. ಅವರಿಗೆ ಮರಳಿ ಬರಬೇಕಾದುದಂತೂ ನಮ್ಮ ಕಡೆಗೇ ಆಗಿದೆ. ಅನಂತರ ಅವರು ಏನೆಲ್ಲ ಮಾಡಿ ಬಂದಿರುವ ರೆಂದು ನಾವು ಅವರಿಗೆ ತೋರಿಸುವೆವು. ನಿಶ್ಚಯವಾಗಿಯೂ ಅಲ್ಲಾಹನು ಹೃದಯಗಳೊಳಗೆ ಅವಿತಿರುವ ರಹಸ್ಯಗಳನ್ನೂ ತಿಳಿದಿರುತ್ತಾನೆ. ನಾವು ಅವರಿಗೆ ಸ್ವಲ್ಪ ಕಾಲ ಭೂಮಿಯಲ್ಲಿ ಸುಖಪಡುವ ಅವಕಾಶ ನೀಡುತ್ತಿದ್ದೇವೆ. ಆ ಬಳಿಕ ಅವರನ್ನು ವಿವಶರನ್ನಾಗಿ ಮಾಡಿ, ಒಂದು ಕಠಿಣ ಯಾತನೆಯ ಕಡೆಗೆ ಎಳೆದೊಯ್ಯುವೆವು. ಆಕಾಶಗಳನ್ನೂ ಭೂಮಿಯನ್ನೂ ಸೃಷ್ಟಿಸಿದವರು ಯಾರು ಎಂದು ನೀವು ಇವರೊಡನೆ ಕೇಳಿದಾಗ, ಇವರು ಅಲ್ಲಾಹನೆಂದೇ ಹೇಳುವರು. 'ಅಲ್‌ಹಮ್ದುಲಿಲ್ಲಾಹ್' (ಅಲ್ಲಾಹನಿಗೆ ಸ್ತುತಿ) ಎನ್ನಿರಿ. ಆದರೆ ಇವರಲ್ಲಿ ಹೆಚ್ಚಿನವರು ತಿಳಿಯುವುದಿಲ್ಲ.

(ಪವಿತ್ರ ಕುರ್‌ಆನ್: 31: 23-25)

ಸಂಪಾದಕರಿಗೆ ಪತ್ರ ಸಂಪಾದಕರಿಗೆ ಪತ್ರ ಸಂಪಾದಕರಿಗೆ ಪತ್ರ ಸಂಪಾದಕರಿಗೆ ಪತ್ರ ಸಂಪಾದಕರಿಗೆ ಪತ್ರ ಸಂಪಾದಕರಿಗೆ ಪತ್ರ ಸಂಪಾದಕರಿಗೆ ಪತ್ರ




### ಸ್ಟಾಂಡರ್ಡ್ ಶಾಲೆಗಳು?

ಶೇಕಡ 25ರಷ್ಟು ಸೀಟನ್ನು ಆರ್ಥಿಕವಾಗಿ ಹಿಂದುಳಿದವರಿಗೆ, ಎಸ್ಸಿ ಎಸ್ಟಿ ಮಕ್ಕಳಿಗೆ ಎಲ್ಲಾ ಶಾಲೆಗಳು ನೀಡಬೇಕಾಗುತ್ತದೆ ಎಂಬ ಕೇಂದ್ರ ಸರಕಾರದ (ಆರ್‌ಟಿಇ) ನಿಯಮವನ್ನು ವಿರೋಧಿಸಿ ಖಾಸಗಿ ಶಾಲೆಗಳು, ಮಕ್ಕಳು ಮತ್ತು ಪೋಷಕರ ಹೇಳಿಕೆಯನ್ನು ದೈನಿಕವೊಂದರಲ್ಲಿ ಓದಿ ಮನಸ್ಸಿಗೆ ತುಂಬಾ ಬೇಸರವಾಯಿತು. ಆ ಮಕ್ಕಳು ನಮ್ಮ ಶಾಲೆಗೆ ಬಂದರೆ, ನಮ್ಮ ಶಾಲೆಯ ಸ್ಟಾಂಡರ್ಡ್ ಹಾಳಾಗುತ್ತದೆ ಎಂಬ ವಾದ ಶಾಲೆಯದ್ದು ಮತ್ತು ಅವರು ಎತ್ತಿಕಟ್ಟಿರುವ ಪೋಷಕ ಮತ್ತು ಮಕ್ಕಳದ್ದು. ಸಂಸ್ಕಾರ, ಸ್ವಚ್ಛತೆ, ಚಾರಿತ್ರ್ಯವನ್ನು ಕಲಿಸುವ ಕೇಂದ್ರಗಳಾಗಿವೆ ಶಾಲೆಗಳು. ವಿದ್ಯೆ ಎಂಬುದು ಕೇವಲ ದುಡಿಮೆಗೆ ಅಥವಾ ಹಣ ಗಳಿಸಲು ದಾರಿ ತೋರಿಸುವ ವಸ್ತು ಮಾತ್ರವೇ? ಮನುಷ್ಯನನ್ನು ಪ್ರಾಮಾಣಿಕನನ್ನಾಗಿಸಿ, ಸಂಸ್ಕರಿಸುವುದು ಕೂಡಾ ವಿದ್ಯೆಯ 'ಡೆಫಿನಿಶನ್'ನಲ್ಲಿ ಬರುತ್ತದೆ ಎಂಬುದು ಈ 'ಸ್ಟಾಂಡರ್ಡ್' ಶಾಲೆಗಳಿಗೆ ತಿಳಿದಿಲ್ಲವೇ? ಇಂತಹ ಶಾಲೆಗಳಿಂದ ದೇಶದ ಬಗ್ಗೆ ಚಿಂತಿಸುವ, ಭವಿಷ್ಯದಲ್ಲಿ ಉತ್ತಮ ಭಾರತವನ್ನು ನಿರ್ಮಿಸುವ, ಕೆಡುಕನ್ನು ಅಳಿಸಲು ಪ್ರಯತ್ನಿಸುವ ಮಕ್ಕಳು ಬೆಳೆದು ಬರಲು ಖಂಡಿತ ಸಾಧ್ಯವಿಲ್ಲ. ಮಕ್ಕಳಿಗೆ ಉತ್ತಮ ಸಂಸ್ಕಾರವನ್ನು, ಉತ್ತಮ ಚಾರಿತ್ರ್ಯವನ್ನು ಇಂದಿನ ಶಿಕ್ಷಣ ವ್ಯವಸ್ಥೆ ನೀಡಿದರೆ, ಆ ಮಕ್ಕಳು ಮನೆಯ ವಾತಾವರಣವನ್ನು, ಸಮಾಜವನ್ನು ಬದಲಾಯಿಸಲು ಪ್ರಯತ್ನಿಸುತ್ತಾರೆ. ಖಾಸಗಿ ಶಾಲೆಗಳು, 'ಸ್ಟಾಂಡರ್ಡ್' ಪೋಷಕರು ಇದರ ಬಗ್ಗೆ ಗಮನ ಹರಿಸಬೇಕು.

**ತೌಸೀಫ್ ಅಹಮ್ಮದ್ ಮಡಿಕೇರಿ**

### ಸರಿಯಲ್ಲ

ಸಂಚಿಕೆ 23ರಲ್ಲಿ ಪ್ರಕಟವಾದ 'ಆಂದೋಲನದ ಹರಿಕಾರರು' ಲೇಖನ ಮಾಲೆಯಲ್ಲಿ ಡಾ। ಸಾಹೇಬರ ಕುಟುಂಬ ಪರಿಚಯ ಮಾಡುತ್ತಾ, 'ಒಂದು ಗಂಡು, ಐದು ಹೆಣ್ಣು ಮಕ್ಕಳು, ಮತ್ತೋರ್ವಳು ಸಾಕು ಪುತ್ರಿ ಹೀಗೆ ಒಟ್ಟು 7 ಜನ ಮಕ್ಕಳು' ಎಂದು ಬರೆಯಲಾಗಿದೆ. ಅದರೆ ಇಸ್ಲಾಮಿನ ಪ್ರಕಾರ, ಸಾಕು ಪುತ್ರಿ ವ್ಯಕ್ತಿಯ ಸ್ವಂತ ಮಕ್ಕಳ ಸಾಲಿನಲ್ಲಿ ಸೇರುವುದಿಲ್ಲ. ಆದ್ದರಿಂದ ಆರು ಮಕ್ಕಳು ಮತ್ತು ಓರ್ವಳು ಸಾಕು ಪುತ್ರಿ ಎಂದು ಬರೆಯಬೇಕಿತ್ತು. ಯಾಕೆಂದರೆ ಪವಿತ್ರ ಕುರ್‌ಆನ್ ಹೇಳುತ್ತದೆ, "ಅವನು ನಿಮ್ಮ ದತ್ತು ಪುತ್ರರನ್ನು ನಿಮ್ಮ ಸ್ವಂತ ಪುತ್ರರನ್ನಾಗಿ ಮಾಡಿರುವುದೂ ಇಲ್ಲ. ಇವೆಲ್ಲ ನೀವು ನಿಮ್ಮ ಬಾಯಿಯಿಂದ ಹೊರಡಿಸಿ ಬಿಡುವ ಮಾತುಗಳು." (ಅಹ್‌ಝಾಬ್: 3)

**ತಲ್ಹಾ ಶಾಂತಪುರಮ್**

### ಸ್ವಾತಂತ್ರ್ಯ

ಮೊನ್ನೆ ತಾನೇ 64ನೇ ಸ್ವಾತಂತ್ರ್ಯವನ್ನು ಆಚರಿಸಿದ್ದೇವೆ. ಮಾನ್ಯ ಪ್ರಧಾನಿಯವರ ಅದೇ ಧಾಟಿಯ ಭಾಷಣ ಕೇಳಿದ್ದೇವೆ. ಅಂದು ನಾವು ಈಸ್ಟ್ ಇಂಡಿಯ ಕಂಪನಿಯ ಗುಲಾಮರಾಗಿದ್ದೆವು. ಇಂದು ನಮ್ಮ ದೇಶದ ರಾಜಕಾರಣಿಗಳ, ಬಂಡವಾಳಶಾಹಿಗಳ ಗುಲಾಮರಾಗಿದ್ದೇವೆ.

ಮೊನ್ನೆ ಕಾಂಗ್ರೆಸ್‌ನ ಪ್ರಧಾನ ಕಾರ್ಯದರ್ಶಿ ರಾಹುಲ್ ಗಾಂಧಿಯವರ ರಾಜ್ಯ ಪ್ರವಾಸದ ಸಂದರ್ಭದಲ್ಲಿ ಅವರು 3–4 ಪಟ್ಟಣದಲ್ಲಿ ಯುವ ಸಮುದಾಯದೊಂದಿಗೆ ಸಂವಾದವನ್ನು ಇಟ್ಟುಕೊಂಡಿದ್ದರು. ಯುವಶಕ್ತಿಯ ಅವಶ್ಯಕತೆ ಇಂದು ರಾಜಕೀಯಕ್ಕೆ ಇದೆ. ತಾವುಗಳೆಲ್ಲರೂ ರಾಜಕೀಯ ಪ್ರವೇಶಿಸಿ ಎಂದು ಅವರು ಕರೆ ನೀಡಿದಾಗ, ಭ್ರಷ್ಟಾಚಾರ ನಿರ್ಮೂಲನೆ ಮಾಡುವ ವರೆಗೆ ಈ ದೇಶ ಅಭಿವೃದ್ಧಿಯ ಪಥದಲ್ಲಿ ಸಾಗುವುದಿಲ್ಲ ಎಂದು ಯುವಕರು ಹೇಳಿದರು. ಇದರ ಮೂಲ ಯಾವುದು? ರಾಜಕಾರಣಿಗಳು. ಇದನ್ನು ಸರಿಪಡಿಸಲು ಏನು ಮಾಡಬೇಕು ಎಂದು ಕೇಳಿದಾಗ, ಯುವಕರ ಕೂಗು ರಾಜಕಾರಣಿಗಳನ್ನು ಕಂಡಲ್ಲಿ ಗುಂಡಿಟ್ಟು ಕೊಲ್ಲಬೇಕು ಎಂದಾಗಿತ್ತು. ಇದನ್ನು ಕೇಳಿದ ರಾಹುಲ್ ಗಾಂಧಿಯವರು ಅವಾಕ್ಕಾದರು ಎಂಬ ಸುದ್ದಿ ಪತ್ರಿಕೆಗಳಲ್ಲಿ ಬಂದಿವೆ.

ಅಂದು ಯುವಕರು ಬಿಳಿಯರ ವಿರುದ್ಧ ದಂಗೆ ಎದ್ದಿದ್ದರು. ಮುಂದೆ ಭ್ರಷ್ಟ ರಾಜಕಾರಣಿಗಳನ್ನು ಹೊಡೆದೋಡಿಸಲು ಯುವ ಸಮುದಾಯ ಎಚ್ಚರಗೊಳ್ಳುವಂತಹ ಸಮಯ ದೂರವಿಲ್ಲ.

**ಮುಹಮ್ಮದ್ ಇಲ್ಯಾಸ್ ಜೋಗ್‌ಫಾಲ್ಸ್**

### ಕಳ್ಳರಿಗಲ್ಲ...

ಸಂಚಿಕೆ 23ರ ಸಮೀರ್ ಎ.ರವರ 'ಪಾದಯಾತ್ರೆಯ...' ಲೇಖನವು ಇಂದಿನ ಪ್ರಚಲಿತ ರಾಜಕೀಯ ಸಮಸ್ಯೆಯ ಮೇಲೆ ಬೆಳಕು ಚೆಲ್ಲಿದೆ. ಬಿ.ಜೆ.ಪಿ. ಸರಕಾರ ಗೋಹತ್ಯೆ ನಿಷೇಧ ಮಸೂದೆಯನ್ನು ಮಂಡನೆ ಮಾಡಿದ್ದಲ್ಲ. ಬದಲಾಗಿ 'ಜಾನುವಾರು ಹತ್ಯೆ' ಮಸೂದೆಯನ್ನು ಮಂಡನೆ ಮಾಡಿದ್ದು. ಜಾನುವಾರುಗಳು ಎಂದರೆ ಬರೀ ಗೋ ಸಂತತಿ ಮಾತ್ರವಲ್ಲ. ಬದಲಾಗಿ ಸಮಗ್ರ ಜಾನುವಾರುಗಳು ಎಂದರ್ಥ. ಎತ್ತು, ಎಮ್ಮೆ, ಕೋಣ ಮತ್ತಿತರ ಪ್ರಾಣಿಗಳು. ಗುಜರಾತಿನಲ್ಲಿ ಗೋ ಸಂತತಿ ಹತ್ಯೆ ಮಾತ್ರ ನಿಷೇಧಿಸಲಾಗಿದೆ. ಸುಪ್ರೀಮ್ ಕೋರ್ಟು ಕೂಡಾ ಕೇವಲ ಗೋಹತ್ಯೆ ನಿಷೇಧಕ್ಕೆ ಮಾತ್ರ ಅನುಮತಿಯನ್ನು ನೀಡಿದೆ.

ಕಾನೂನು ವ್ಯವಸ್ಥೆ ದುರ್ಬಲಗೊಂಡರೆ ಅಪರಾಧ ಕೃತ್ಯಗಳೂ ಪ್ರಬಲಗೊಂಡು ಹತಾಶರಾದವರು ಕಾನೂನು ಕೈಗೆತ್ತಿಕೊಳ್ಳುವ ಸಂದರ್ಭವೂ ಉಂಟಾಗುತ್ತದೆ ಎನ್ನುವುದನ್ನು ಬಿ.ಎ. ಸಲೀಮ್ ಅವರ 'ಕಳ್ಳರಿಗಲ್ಲ ವ್ಯವಸ್ಥೆಗೆ!' ಎನ್ನುವ ಲೇಖನದಿಂದ ತಿಳಿದು ಬಂದಿತು.

**ಅಬ್ದುಲ್ ವಹ್ಹಾಬ್ ಮುಲ್ಲಾ, ಗಂಗಾವತಿ**

# ಸೆ. 11ರಂದು ಈದುಲ್ ಫಿತ್ರ್ ಬಾರದಿರಲಿ

**ಕಾಸಿಮ್ ಐ.ಆರ್.**

ಈ ವರ್ಷದ ಈದುಲ್ ಫಿತ್ರ್ ಸೆಪ್ಟೆಂಬರ್ 11ರಂದು ಬಾರದಿರಲಿ... ಇದು ಅಮೇರಿಕದ ಮುಸ್ಲಿಮರ ಹೃದಯಾಂತರಾಳದ ಪ್ರಾರ್ಥನೆ. ಯಾಕೆಂದರೆ ಅದು ವರ್ಲ್ಡ್ ಟ್ರೇಡ್ ಆಕ್ರಮಣದ 9ನೇ ವಾರ್ಷಿಕ ದಿನ. ಅಂದು ಹಬ್ಬ ಆಚರಿಸಿದರೆ 2001ರ ಭಯೋತ್ಪಾದಕ ಕೃತ್ಯದ ವಿಜಯೋತ್ಸವವೆಂದು ತಪ್ಪು ತಿಳಿಯಬಹುದೆಂಬ ಭೀತಿಯೇ ಅದಕ್ಕೆ ಕಾರಣ. ನಿಜವಾಗಿ ಅಂತದ್ದೊಂದು ಭೀತಿಗೆ ಅವಕಾಶ ಇರಬಾರದಿತ್ತು. ಆದರೆ ಗ್ರೌಂಡ್ ಝೀರೊ (ವರ್ಲ್ಡ್ ಟ್ರೇಡ್ ಸೆಂಟರ್ ಇದ್ದ ಜಾಗ) ಮಸೀದಿಯ ಹೆಸರಲ್ಲಿ ಭುಗಿಲೆದ್ದಿರುವ ವಿವಾದ ಮತ್ತು ಸಂಕುಚಿತ ಮನೋಸ್ಥಿತಿ ಅಂಥ ಪ್ರಾರ್ಥನೆಗೆ ಅವಕಾಶ ಮಾಡಿಕೊಟ್ಟಿದೆ.

ವಾಸ್ತವದಲ್ಲಿ ಗ್ರೌಂಡ್ ಝೀರೊ ಮಸೀದಿ ಯೋಜನೆ ಎಂದರೇನು? ಕುವೈಟ್‌ನಿಂದ ವಲಸೆ ಬಂದ ಇಮಾಮ್ ಫೈಝುಲ್ ಅಬ್ದುರ್ರವೂಫ್ ಮತ್ತು ಅವರ ಭಾರತೀಯ ಮೂಲದ ಪತ್ನಿ ಡೈಸಿ ಖಾನ್ ಸೇರಿ ನಿರ್ಮಿಸಲಾರಂಭಿಸಿದ್ದ 'ಕೊರ್ಡೋವ ಹೌಸ್' ಹೆಸರಿನ 100 ಮಿಲಿಯ ಡಾಲರ್ ವೆಚ್ಚದ ಕಟ್ಟಡ ಸಮುಚ್ಚಯ. ಜಿಮ್ನೇಶಿಯಮ್, ಥಿಯೇಟರ್, ಲೈಬ್ರರಿ, ರೆಸ್ಟೋರೆಂಟ್, ಪ್ರಾರ್ಥನಾ ಹಾಲ್ ಇತ್ಯಾದಿಗಳಿರುವ ಇಸ್ಲಾಮಿಕ್ ಸೆಂಟರ್. ಅಮೇರಿಕದಾದ್ಯಂತವಿರುವ ಯಹೂದಿ ಕಮ್ಯೂನಿಟಿ ಸೆಂಟರ್‌ಗಳಿಗೆ ಸಮಾನವಾದ ಈ ಸಾಂಸ್ಕೃತಿಕ ಸಮುಚ್ಚಯದ ನಿರ್ಮಾಣ ಪೂರ್ಣಗೊಂಡರೂ ಅದು ಗ್ರೌಂಡ್ ಝೀರೊದಿಂದ ಕಾಣಿಸದಷ್ಟು ದೂರದಲ್ಲಿದೆ. ನ್ಯೂಯಾರ್ಕಿನ ಖ್ಯಾತ ಅಮೇರಿಕನ್ ಸೊಸೈಟಿ ಫಾರ್ ಮುಸ್ಲಿಮ್ ಎಡ್ವಾನ್ಸ್‌ಮೆಂಟ್ ಎಂಬ ವೇದಿಕೆಯ ಜತೆಗೂಡಿ ಖಾಸಗಿ ಸ್ಥಳದಲ್ಲಿ ಈ ಸಾಂಸ್ಕೃತಿಕ ಕೇಂದ್ರವನ್ನು ನಿರ್ಮಿಸಲಾಗುತ್ತಿದೆ. ಆ ಯೋಜನೆಯ ಸಂಕಲ್ಪ ಶುದ್ಧಿ ಮತ್ತು ಕಾನೂನು ಬದ್ಧತೆಯನ್ನು ಮನಗಂಡು ನ್ಯೂಯಾರ್ಕ್‌ನ ಮೇಯರ್ ಮೈಕೆಲ್ ಬ್ಲೂಮರ್ಗ್ ಅದಕ್ಕೆ ಅನುಮತಿಸಿದ್ದರು. ಉಗ್ರವಾದಿಗಳು ಒಡೆದಿದ್ದ ಮನಸ್ಸುಗಳನ್ನು ಒಂದುಗೂಡಿಸುವುದೇ ಅಮೇರಿಕನ್ ಸರಕಾರದ ನಿಕಟವರ್ತಿಯಾಗಿರುವ ಇಮಾಮ್ ಅಬ್ದುರ್ರವೂಫ್‌ರ ಆಕಾಂಕ್ಷೆ.

ಧರ್ಮ, ಸಂಸ್ಕೃತಿ ಬೇಧವಿಲ್ಲದೆ ಎಲ್ಲರಿಗೂ ಕಲೆ ಮತ್ತು ಸಂಸ್ಕೃತಿಯ ಪೋಷಣೆಗೆ ಉಪಯೋಗಿಬಹುದಾದ ಕೇಂದ್ರ ಎಂಬುದು ಅವರ ಕಲ್ಪನೆ. 'ಮಿತವಾದಿ ಮುಸ್ಲಿಮ್' ಎಂದು ಸ್ವತಃ ವಾದಿಸುವ ಇಮಾಮ್ ಅಬ್ದುರ್ರವೂಫ್‌ರು ಇತ್ತೀಚೆಗೆ ಪ್ರಕಾಶನಗೊಳಿಸಿದ ತಮ್ಮ 'What's Right with islam, What's Right with America' ಎಂಬ ಕೃತಿಯಲ್ಲಿ, ಅಮೇರಿಕದ ಇಸ್ಲಾಮೀ ಸಮೂಹವನ್ನು ಮಾದರಿ ಸಮೂಹವೆಂದು ಸಮರ್ಥಿಸಿದ್ದಾರೆ.




ವೈಟ್ ಹೌಸ್ ಇವರನ್ನು ಅಮೇರಿಕನ್ ಸರಕಾರದ 'ರಿಲೀಜಿಯಸ್ ಔಟ್ ರೀಚ್ ಮಿಷನ್‌ನ' ಪ್ರತಿನಿಧಿಯಾಗಿ ಕತರ್, ಬಹರೈನ್, ಯು.ಎ.ಇ.ಗಳಿಗೆ ಕಳುಹಿಸಲು ಆಯ್ಕೆ ಮಾಡಿದೆ. ಪಶ್ಚಿಮದ ದ್ವಿಮುಖ ಧೋರಣೆ, ಸಂಕುಚಿತತೆ ಮತ್ತು ಕಾಪಟ್ಯವನ್ನು ಎದುರಿಸಬೇಕಾದ ಪ್ರಸಂಗ ಬಂದಾಗ ಸಾಕ್ಷಾತ್ ಬರಾಕ್ ಒಬಾಮರೇ ರವೂಫ್‌ರಿಗೆ ಬಹಿರಂಗ ಬೆಂಬಲ ನೀಡಬೇಕಾಯಿತು. ಈ ಹಿನ್ನೆಲೆಯಲ್ಲಿ ರಮಝಾನ್ ಪ್ರಥಮ ಶುಕ್ರವಾರ ವೈಟ್ ಹೌಸ್‌ನಲ್ಲಿ ಏರ್ಪಡಿಸಿದ್ದ ಇಫ್ತಾರ್ ಸಂಗಮದಲ್ಲಿ ಅಮೇರಿಕದ ಅಧ್ಯಕ್ಷರು ಇತರರಂತೆಯೇ ಮುಸ್ಲಿಮರಿಗೂ ಈ ದೇಶದಲ್ಲಿ ತಮ್ಮ ಧರ್ಮವನ್ನು ಆಚರಿಸುವ ಹಕ್ಕಿದೆಯೆಂದು ಒತ್ತಿ ಹೇಳಿದ್ದರು. ಲೋವರ್ ಮ್ಯಾನ್‌ಹಟ್ಟನ್‌ನ ಖಾಸಗಿ ಸ್ಥಳದಲ್ಲಿ ಸ್ಥಳೀಯ ಕಾನೂನಿನಂತೆ ಆರಾಧನಾಲಯ ಮತ್ತು ಸಮಾಜ ಭವನವನ್ನು ನಿರ್ಮಿಸುವ ಹಕ್ಕೂ ಅದರಲ್ಲಿ ಸೇರಿದೆ' ಎಂಬ ಅವರ ಹೇಳಿಕೆಯು ಮಸೀದಿ ವಿರೋಧಿಗಳನ್ನು ತಣಿಸಬಹುದೆಂದು ಒಬಾಮ ನಿರೀಕ್ಷಿಸಿದ್ದರು

ಆದರೆ, ರಿಪಬ್ಲಿಕನ್ ವಿರೋಧಿಗಳು ಮತ್ತು ಉಗ್ರ ಬಲಪಂಥೀಯ ನಿಯೋ ಕನ್ಸರ್ವೇಟಿವ್ ಒಕ್ಕೂಟವು ಅವರ ಮೇಲೆ ಬಹಿರಂಗವಾಗಿ ಮುಗಿಬಿತ್ತು. ಒಬಾಮರು ಅಮೇರಿಕದ ಮುಖ್ಯಧಾರೆಯಿಂದ ದೂರವಾಗಿದ್ದಾರೆ, ಮಸೀದಿ ನಿರ್ಮಾಣದಿಂದ ಸೆಪ್ಟೆಂಬರ್ 11ರ ವ್ರಣಗಳು ಪುನಃ ಉಲ್ಬಣವಾಗುವುದೆಂದು ರಿಪಬ್ಲಿಕನ್ ನಾಯಕ ಜಾನ್ ಕಾರ್ನಿಲ್ ಖಂಡಿಸಿದರು.

ಗ್ರೌಂಡ್ ಝೀರೊ ಮಸೀದಿಯ ಹೆಸರಲ್ಲಿ ಇಸ್ಲಾಮೊ ಫೋಬಿಯ ಹಬ್ಬಿಸಿ ರಾಜಕೀಯ ಕೊಯ್ಲಿಗೆ ರಿಪಬ್ಲಿಕನ್ ನಾಯಕರು ಟೊಂಕ ಕಟ್ಟಿದ್ದಾರೆ. ಅಲೆಗ್ಸಾಂಡ್ರಿಯದ ಮಾಜಿ ರಾಜ್ಯಪಾಲರಾಗಿದ್ದ

## ಅಮೇರಿಕನ್ ಮುಸ್ಲಿಮರ ಪ್ರಾರ್ಥನೆ

ರಿಪಬ್ಲಿಕನ್ ನಾಯಕ ಸಾರಾ ಪಾಲ್ ಆರಂಭದಿಂದಲೇ ತನ್ನ 'ಚಹಾಕೂಟ'ದಿಂದ ಮಸೀದಿ ವಿರೋಧಿ ಭಾವನೆಯನ್ನು ಕೆರಳಿಸಲು ಶ್ರಮಿಸುತ್ತಿದ್ದರು. 3000 ಅಮೇರಿಕನ್ ಪೌರರನ್ನು ಬಲಿ ತೆಗೆದುಕೊಂಡ ಆ ದುರಂತ ಸ್ಥಳದಲ್ಲಿ ಮಸೀದಿ ನಿರ್ಮಾಣವು ಹೃದಯಗಳನ್ನು ಘಾಸಿಗೊಳಿಸಬಹುದು. ಆದ್ದರಿಂದ ಮುಸ್ಲಿಮರೇ ಆ ಶ್ರಮವನ್ನು ವಿಫಲಗೊಳಿಸಬೇಕೆಂಬುದು ಅವರ ವಾದ.

ಮಾಜಿ ಸ್ಪೀಕರ್ ನ್ಯೂಟ್‌ಗ್ರಿನ್ ತಮ್ಮಿಂದಾದಷ್ಟು ವಿಷ ಕಾರಿದರು. 13 ಮಹಡಿಯ ಕಟ್ಟಡ ನಿರ್ಮಿಸ ಹೊರಟವರು ನಮ್ಮ ನಾಗರಿಕತೆಯೊಡನೆ ಯುದ್ಧ ಸಾರಿದವರೆಂಬುದು ಅವರ ಸಂಶೋಧನೆ. ಫ್ಲೋರಿಡಾ ಚರ್ಚ್ ಮೇಧಾವಿ ಬಿಷಪ್ ಟೆರ್ರಿ ಜಾನ್ಸ್ ಇನ್ನೂ ಮುಂದೆ ಹೋಗಿ, ಸೆಪ್ಟೆಂಬರ್ 11ರಂದು ಗ್ರೌಂಡ್ ಝೀರೊದಲ್ಲಿ ಕುರ್‌ಆನ್ ಉರಿಸಿ 'ವಿಶ್ವ ಕುರ್‌ಆನ್ ಉರಿಸುವ ದಿನ' ಆಚರಿಸಬೇಕೆಂದು ಕರೆ ನೀಡಿದ್ದಾರೆ. ಫೋಕ್ಸ್ ನ್ಯೂಸ್ ಹಾಗೂ ಇತರ ಟಿವಿ ಚಾನೆಲ್‌ಗಳು ಈ ಬಗ್ಗೆ ಏರ್ಪಡಿಸಿದ್ದ ಎಲ್ಲ ಸಂವಾದ ಕಾರ್ಯಕ್ರಮಗಳು ಧಾರ್ಮಿಕ ವಿದ್ವೇಷ ಪ್ರಚಾರಕವಾಗಿದ್ದುವು. ಮಸೀದಿ ನಿರ್ಮಾಣದಲ್ಲಿ ಭಯೋತ್ಪಾದಕರ ಕೈವಾಡವಿದೆಯೆಂಬ ಭಾವನೆ ಮೂಡಿಸುವುದೇ ಆ ಚಾನೆಲ್‌ಗಳ ಕುಪ್ರಚಾರದ ಮರ್ಮ. ರಿಪಬ್ಲಿಕನ್ ಟಿವಿ ಜಾಹೀರಾತೊಂದರಲ್ಲಿ ಸೆಪ್ಟೆಂಬರ್ 11ರಂದು ಹತರಾದವರ ಸಾವು ಆಚರಿಸಲಿಕ್ಕಾಗಿ ಮುಸ್ಲಿಮರು ಸ್ಮಾರಕ ನಿರ್ಮಿಸುತ್ತಿರುವರೆಂಬ ಪ್ರಚಾರಕ್ಕೂ ಹೇಸಿಲ್ಲ.

ಸಿಎನ್ನೆನ್ ನಡೆಸಿದ ಸಮೀಕ್ಷೆಯಲ್ಲಿ 70% ಮಂದಿ ಮುಸ್ಲಿಮ್ ಕಮ್ಯೂನಿಟಿ ಸೆಂಟರ್ ನಿರ್ಮಾಣವನ್ನು ವಿರೋಧಿಸಿದ್ದರು. ಮಸೀದಿ ನಿರ್ಮಾಣಕ್ಕೆ ಸೌದಿ ಅರೇಬಿಯ ಮತ್ತು ಫೋರ್ಡ್ ಫೌಂಡೇಶನ್‌ನ ಸಹಕಾರವಿದೆಯೆಂಬ ಕಾರಣ ನೀಡಿ ಸಮುಚ್ಚಯ ನಿರ್ಮಾಣವನ್ನು ಡಿಫಮೇಶನ್ ಲೀಗ್ ವಿರೋಧಿಸುತ್ತಿದೆ. ಸೆಪ್ಟೆಂಬರ್ 11ರ ಹತ್ತನೇ ವಾರ್ಷಿಕ ದಿನದಂದೇ ಮಸೀದಿಯ ಉದ್ಘಾಟನೆಯೆಂದೂ ಲೀಗ್ ನಾಯಕರು ಪ್ರಚಾರ ಮಾಡುತ್ತಿದ್ದಾರೆ. ಅಸಹಿಷ್ಣುತೆ ಮೇರೆ ಮೀರಿರುವುದನ್ನು ಕಂಡು ಜಿಗುಪ್ಸೆಗೊಂಡ ಖ್ಯಾತ ಪತ್ರಕರ್ತ ಮತ್ತು 'ನ್ಯೂವೀಕ್ಸ್' ಪತ್ರಿಕೆಯ ಸಂಪಾದಕ ಝಕರಿಯ್ಯ 2005ರಲ್ಲಿ 'ಡಿಫಮೇಶನ್ ಲೀಗ್' ನೀಡಿದ ಹ್ಯೂಬರ್ಟ್ ಫಸ್ಟ್ ಎಮೆಂಡ್‌ಮೆಂಟ್ ಪ್ರೈಸ್ (10,000 ಡಾಲರ್ ನಗದು ಮತ್ತು ಸನ್ಮಾನ ಪತ್ರ) ಮರಳಿಸಿದ್ದಾರೆ. ಐದು ವರ್ಷಗಳ ಹಿಂದೆ ಸಂಘಟನೆಯು ಪುರಸ್ಕರಿಸಿದಾಗ ಅವರು ಪುಳಕಗೊಂಡಿದ್ದರು. ಆದರೆ, 'ಇಂದು ಅದನ್ನು ಬಳಿಯಿರಿಸಲು ನನ್ನ ಆತ್ಮಸಾಕ್ಷಿ ಒಪ್ಪುವುದಿಲ್ಲ'ವೆಂಬ ಅವರ ದಿಟ್ಟ ಮಾತನ್ನು ಅಮೇರಿಕದ ಮಾಧ್ಯಮಗಳು ನಿರ್ಲಕ್ಷಿಸುವಂತಿಲ್ಲ. 2001 ಸೆಪ್ಟೆಂಬರ್ 11ರ ಪಾತಕಕ್ಕಾಗಿ ಇಸ್ಲಾಮ್ ಮತ್ತು ಮುಸ್ಲಿಮರನ್ನು ಸಾರಾಸಗಟಾಗಿ ಕಟಕಟೆಯಲ್ಲಿ ನಿಲ್ಲಿಸಿ, ಕೆಲವು ಉಗ್ರ ಮನಸ್ಸುಗಳ ಕೃತ್ಯವನ್ನು ಜಗತ್ತಿನ 160 ಕೋಟಿ ವಿಶ್ವಾಸಿಗಳ ಮೇಲೆ ಹೊರಿಸುವ ಔಚಿತ್ಯವನ್ನು ನಿಷ್ಪಕ್ಷ ವಿಶ್ಲೇಷಕರು ಮತ್ತು ಮಾಧ್ಯಮಗಳು ಪ್ರಶ್ನಿಸುತ್ತಿವೆ. ಗ್ರೌಂಡ್ ಝೀರೊ ಸಮೀಪದಲ್ಲಿ ಮಸೀದಿ ನಿರ್ಮಿಸಬಾರದೆಂಬ ವಿಕಟ ವಾದದ ಮೂಲಕ ವರ್ಲ್ಡ್ ಟ್ರೇಡ್ ಸೆಂಟರನ್ನು ಆಕ್ರಮಿಸಿದ ಕೆಲವು ಯುವಕರ ಅವಿವೇಕಕ್ಕೆ ಇಡೀ ಸಮುದಾಯವನ್ನು ದಂಡಿಸಲಾಗುತ್ತಿದೆ. ಉಗ್ರವಾದಿಗಳನ್ನು ಮತ್ತು ಅವರನ್ನು ವಿರೋಧಿಸುವ ಬಹುಸಂಖ್ಯಾತ ಮಿತವಾದಿಗಳನ್ನು ಒಂದೇ ಗಣದಲ್ಲಿ ನಿಲ್ಲಿಸಿ ಅಪಮಾನಿಸುವ ಈ ಕುತಂತ್ರ ಆಘಾತಕಾರಿಯಾದೀತೆಂದು ನಿಷ್ಪಕ್ಷಮತಿಗಳು ಬೆಟ್ಟು ಮಾಡುತ್ತಿದ್ದಾರೆ.

# ಆರೋಪಿ ಅವರೊಬ್ಬರೇ ಏಕೆ?

**ಶಂಶೀರ್, ಬುಡೋಳಿ**

ಪ್ರತಿಕ್ರಿಯೆ



ಪ್ರಸ್ತುತ ಕೇರಳ ಹಾಗೂ ಕರ್ನಾಟಕದಲ್ಲಿ ಒಟ್ಟಾರೆ ರಾಷ್ಟ್ರಮಟ್ಟದಲ್ಲಿ ಚರ್ಚೆಯ ವ್ಯಕ್ತಿಯಾಗಿರುವ ಅಬ್ದುನ್ನಾಸಿರ್ ಮಅದನಿ ಈ ಹಿಂದೆ ಒಬ್ಬ ಧರ್ಮಗುರುವಾಗಿದ್ದವರು. ಆಗ ಅಡ್ವಾಣಿ, ನೇತೃತ್ವದಲ್ಲಿ ರಾಮ ಜನ್ಮಭೂಮಿ ಆಂದೋಲನ ನಡೆಯುತ್ತಿದ್ದ ಸಮಯವದು. ಅಡ್ವಾಣಿ ರಾಮ ಮಂದಿರ ನಿರ್ಮಾಣಕ್ಕಾಗಿ ದೇಶಾದ್ಯಂತ ಯಾತ್ರೆ, ಪ್ರವೀಣ್ ತೊಗಾಡಿಯಾ, ಮುತಾಲಿಕ್‌ರ ಭಾಷಣಗಳಲ್ಲಿ ಮುಸ್ಲಿಮರ ವಿರುದ್ಧ ದಂಗೆ ಏಳುವುದಕ್ಕೆ ಬೇಕಾದ ಎಲ್ಲವೂ ಇದ್ದುವು. ಮುಸ್ಲಿಮರ ವಿರುದ್ಧ ಸಾಮಾಜಿಕ ಹಾಗೂ ಆರ್ಥಿಕ ಬಹಿಷ್ಕಾರ ಹಾಕುವಂತೆ ಕರೆ ನೀಡಲಾಯಿತು. ಹೆಚ್ಚಿನ ಸ್ಥಳಗಳಲ್ಲಿ ಕೋಮು ವೈಷಮ್ಯಗಳು ಹೊಗೆಯಾಡತೊಡಗಿದವು.

ಇದೇ ಸಂದರ್ಭದಲ್ಲಿ ಮದನಿ ಇಸ್ಲಾಮಿಕ್ ಸೇವಕ್ ಸಂಘ ಸ್ಥಾಪಿಸಿದರು. ಅವರ ಭಾಷಣಗಳೂ ಕಡಿಮೆ ಪ್ರಚೋದಕ ಏನೂ ಆಗಿರಲಿಲ್ಲ. ಕೇರಳದಲ್ಲಿ ಅಲ್ಲಲ್ಲಿ ಇಸ್ಲಾಮಿಕ್ ಸೇವಕ್ ಸಂಘದ ಶಾಖೆಗಳು ಕಾರ್ಯಾಚರಿಸತೊಡಗಿದವು. ಇವು ಸಂಘ ಪರಿವಾರದ ಕೆಂಗಣ್ಣಿಗೆ ಗುರಿಯಾದವು. ಇದುವೇ ಒಂದು ದಿನ ಮನೆಯ ಸಮೀಪ ನಡೆದುಕೊಂಡು ಹೋಗುತ್ತಿದ್ದ ಮಅದನಿಯ ಮೇಲೆ ಬಾಂಬ್ ದಾಳಿ ನಡೆಸಲು ಮತ್ತು ಒಂದು ಕಾಲು ಕಳಕೊಳ್ಳಲು ಕಾರಣವಾಯಿತು.

ಆ ಬಳಿಕ ಬಾಬರಿ ಮಸೀದಿ ಧ್ವಂಸದ ಹಿನ್ನೆಲೆಯಲ್ಲಿ ಕೇಂದ್ರ ಸರಕಾರವು ಆರ್.ಎಸ್.ಎಸ್, ವಿ.ಹೆಚ್.ಪಿ. ಸಹಿತ ಇಸ್ಲಾಮಿಕ್ ಸೇವಕ್ ಸಂಘದ ಮೇಲೂ ನಿಷೇಧ ಹೇರಿತು.

(4ನೇ ಪುಟಕ್ಕೆ)



# ಫ್ರೀಡಮ್ ಫ್ಲೋಟಿಲ್ಲಾ: ಸೋಲೋ ಗೆಲುವೋ?

ವಿದೇಶರಂಗ

ರಾಶಿದುಲ್ ಗನೂಶಿ

**ಕ**ಳೆದ ಮೇ ಕೊನೆಯಲ್ಲಿ, ವಿವಿಧ ಧರ್ಮ ಮತ್ತು ವರ್ಣದ ಶಾಂತಿಪ್ರಿಯ ಕಾರ್ಯಕರ್ತರ ತಂಡವು ಹಡಗುಗಳಲ್ಲಿ ಗಾಝಾಕ್ಕೆ ಪರಿಹಾರ ವಸ್ತುಗಳನ್ನು ಸಾಗಿಸುತ್ತಿದ್ದ ವೇಳೆ ಇಸ್ರೇಲ್ ಆಕ್ರಮಣ ನಡೆಸಿತು. ನಾನು ಈ ಘಟನೆಯನ್ನು ಐತಿಹಾಸಿಕ ದಿಕ್ಸೂಚಿಯೆಂದೇ ಪರಿಗಣಿಸುತ್ತೇನೆ. ನಿರ್ದಿಷ್ಟ ಜನತೆ, ದೇಶ ಅಥವಾ ವಲಯದ ನಿರ್ಣಾಯಕ ತಿರುವುಗಳು ಈ ರೀತಿಯಲ್ಲಿಯೇ ಸಂಭವಿಸುತ್ತವೆ. ಆದರೆ ಆ ಕ್ರಮ ಕೈಗೊಂಡವರಿಗೆ ನಾವು ಇತಿಹಾಸದ ಅತಿ ದೊಡ್ಡ ದಿಕ್ಸೂಚಿಗೆ ನಾಂದಿ ಹಾಕಿರುವೆವೆಂಬುದು ಗೊತ್ತಿರಲಾರದು. ಆ ಕ್ರಮವು ಅತ್ಯಂತ ನಿರ್ಣಾಯಕವಾಗಿತ್ತೆಂದು ಮುಂದಿನ ಇತಿಹಾಸವು ದಾಖಲಿಸುವುದು. ಇಲ್ಲಿ ಒಂದೆಡೆ ಶಾಂತಿಪ್ರಿಯ ಸೇವಾ ಕಾರ್ಯಕರ್ತರ ತಂಡ, ಇನ್ನೊಂದೆಡೆ ಸರ್ವ ಶಸ್ತ್ರ ಸನ್ನದ್ಧ ಇಸ್ರೇಲಿ ಸೇನೆ. ಆದರೂ ವೈರಿಯ ವಿರುದ್ಧ ನಿರ್ಣಾಯಕ ವಿಜಯ ಸಾಧಿಸಲು ಸ್ವಯಂ ಸೇವಕರಿಗೆ ಸಾಧ್ಯವಾಯಿತು. ನಾನು ಗ್ರಹಿಸಿರುವಂತೆ ಇದಕ್ಕೆ, ಬದ್ರ್‌ಗಿಂತ ಮುಂಚೆ ಕುರೈಶಿ ವ್ಯಾಪಾರಿ ತಂಡವನ್ನು ತಡೆಯಲು ಹೊರಟ ಪ್ರವಾದಿ ಮತ್ತು ಅನುಯಾಯಿಗಳ ಕ್ರಮದೊಂದಿಗೆ ಸಾಮ್ಯತೆಯಿದೆ. ಆ ಕ್ರಮವು ಅಲ್ಲಿಗೆ ಕೊನೆಗೊಂಡಿರಲಿಲ್ಲ; ಅದು ನಿರ್ಣಾಯಕ ಯುದ್ಧ ಮತ್ತು ವಿಜಯಕ್ಕೆ ಪ್ರೇರಕವಾಯಿತು. ಅದು ವಿರೋಧಿಗಳಲ್ಲಿ ಗಟ್ಟಿಯಾಗಿ ನೆಲೆಯೂರಿದ್ದ ಸಾಮರ್ಥ್ಯದ ಹೆಮ್ಮೆಯನ್ನು ಬುಡಮೇಲುಗೊಳಿಸಿ, ಕುರೈಶಿ ಪ್ರಭುತ್ವದ ಅಂತ್ಯಕ್ಕೆ ನಾಂದಿ ಹಾಡಿತು. ಇಂಥ ಏನಾದರೂ ದಿಕ್ಸೂಚಿಗಳು ಫ್ಲೋಟಿಲ್ಲಾ ಹಡಗುಗಳ ಮೇಲೆ ದಾಳಿ ನಡೆಸಿದ ಘಟನೆಯಲ್ಲಿದೆಯೇ? ನಾವು ಪರಿಶೀಲಿಸೋಣ.

**ದಿಕ್ಸೂಚಿಗಳು**

1. ಈ ಮುಖಾಮುಖಿಯಲ್ಲಿ ಗೆದ್ದವರಾರು? ಸೋತವರ್‍ಯಾರು ಎಂಬ ಬಗ್ಗೆ ಇಂದು ಯಾರಿಗೂ ಸಂಶಯವಿಲ್ಲ. ಹಡಗಿನಲ್ಲಿ ಸಂಚರಿಸಿದ್ದ ವೀರ ಯೋಧರ ಆತ್ಮವಿಶ್ವಾಸ, ವಿಜಯ ನಿರೀಕ್ಷೆ ಮತ್ತು ಅಭಿಮಾನ ಪ್ರಜ್ಞೆ ಉನ್ನತವಾಗಿತ್ತು. ಅವರಿಗೆ ತಾಯಿ ನಾಡಿನಲ್ಲಿ ಜನರಿಂದ ಅದ್ಭುತ ಸ್ವಾಗತ ದೊರೆಯಿತು. ನೆರವಿನ ನೌಕೆಗಳಲ್ಲಿ ಹೋದ ಬಗ್ಗೆ ಅವರಿಗೆ ಸ್ವಲ್ಪವೂ ವಿಷಾದವಿಲ್ಲ. ಗಾಝಾಕ್ಕೆ



ತೆರಳುವ ಮುಂದಿನ ಹಡಗಿನಲ್ಲಿ ನಾವೂ ಇರುವೆವು ಎಂದು ಆ ಹಡಗಿನಲ್ಲಿ ಸಂಚರಿಸುತ್ತಿದ್ದ ಟರ್ಕಿ ದಂಪತಿಗಳು ಹೇಳುತ್ತಾರೆ. ಇಸ್ರೇಲಿ ಆಕ್ರಮಣದಲ್ಲಿ ಪತಿ ಹುತಾತ್ಮರಾದರು, ಅವರ ಮರಣಕ್ಕಾಗಿ ನನಗೆ ವ್ಯಥೆಯಿಲ್ಲ, ಅವರ ಪಯಣದಲ್ಲಿ ಸಹಭಾಗಿಯಾಗಲು ಸಾಧ್ಯವಾಗದ ಬಗ್ಗೆ ದುಃಖವಿದೆಯೆಂದು ವಿಧವೆಯಾದ ಆ ಧೀರ ಮಹಿಳೆ ಹೇಳಿದ್ದಾರೆ. ಆ ಮಹೋನ್ನತ ಹುತಾತ್ಮಗಿರಿ ದೊರೆಯಲಿಲ್ಲವಲ್ಲಾ ಎಂಬ ದುಃಖ! ಆದರೆ ಅಕ್ರಮವೆಸಗಿದ ಇಸ್ರೇಲಿ ಬಣದಲ್ಲಿ ಏನು ನಡೆಯುತ್ತಿದೆ? ಪರಸ್ಪರ ದೋಷಾರೋಪ, ತೆಗಳಿಕೆ, ಈ ಪಾಪ ಕಾರ್ಯದಲ್ಲಿ ನಾವು ಭಾಗಿಯಲ್ಲವೆಂದು ಜಾರಿಕೊಳ್ಳುವ ಪ್ರಯತ್ನ. ಆ ಬಗ್ಗೆ ತನಿಖಾ ತಂಡವನ್ನು ರಚಿಸಲು ನಿರ್ಧರಿಸಲಾಗಿದೆ. ಇಸ್ರೇಲ್ ಸೋತ ಎಲ್ಲ ಯುದ್ಧಗಳಲ್ಲಿಯೂ ಇದು ಸಾಮಾನ್ಯವಷ್ಟೆ. ಲೆಬನಾನಿನ ಕೇವಲ ನೂರು ಚಿಲ್ಲರೆ ಹೋರಾಟಗಾರರಿಂದ ಇಸ್ರೇಲ್ ನಿರಂತರ ಸೋಲನುಭವಿಸುವುದನ್ನು ನಾವು ನೋಡಿದ್ದೇವೆ. 2006ರಲ್ಲಿ ಹೋರಾಟಗಾರರಿಂದ ಅವರಿಗೆ ಭಾರೀ ಹೊಡೆತ ಬಿತ್ತು. ಲೆಬನಾನ್ ತೊರೆಯಲು ಅದೇ ಕಾರಣವಾಗಿತ್ತು. ಕಳೆದ ವರ್ಷ ಗಾಝಾದ ಮೇಲೆ ನಡೆಸಿದ ದಾಳಿಯೂ ಅಂತಾರಾಷ್ಟ್ರೀಯ ಪ್ರತಿಕ್ರಿಯೆಗಳ ದೃಷ್ಟಿಯಿಂದ ಇಸ್ರೇಲ್‌ಗೆ ಮುಖಭಂಗವೇ. ಒಟ್ಟಿನಲ್ಲಿ, ಇಸ್ರೇಲ್‌ಗೆ 1967ರಲ್ಲಿ ಸಿಕ್ಕ ವಿಜಯವೇ ಕೊನೆಯದ್ದು. ಅದುವೇ ಅವರ ಪ್ರಥಮ ಪೀಳಿಗೆಯು ಸಾಧಿಸಿದ ವಿಜಯವಾಗಿತ್ತು. ಈಗ ಕಾಲವು ತುಂಬಾ ಮುಂದೆ ಸಾಗಿದೆ. ಅವರ ಮತ್ತು ನಮ್ಮ ನದಿಗಳಲ್ಲಿ ಧಾರಾಳ ನೀರು ಹರಿದಿದೆ.

2. ಗಾಝಾ ದಾಳಿಯನ್ನು ಇಸ್ರೇಲಿ ಪತ್ರಿಕೆಗಳು ಹೀನಾಯ ಸೋಲೆಂದು ಬಣ್ಣಿಸಿವೆ. (ಜೂನ್ 4), ವಿನಾಶಕ್ಕೆ ಸೇನೆಯ ರವಾನೆ (ಜೂನ್ 7) ಎಂದು ಹಾರ್ಸ್ಟ್ ದೈನಿಕ ವಿಶ್ಲೇಷಿಸಿತ್ತು. ಕುಷ್ಠ ರೋಗಿಯಂತೆ ಇಸ್ರೇಲ್ ಅಸ್ಪೃಶ್ಯಗೊಂಡಿದೆ, ಗಾಝಾದ ದಿಗ್ಬಂಧನವನ್ನು ತೆರವುಗೊಳಿಸದೆ ನಿರ್ವಾಹವಿಲ್ಲ, ಇದು ಹಮಾಸ್‌ನ ವಿಜಯವೆಂದೂ ಪತ್ರಿಕೆ ಬರೆದಿದೆ.

3. ಸದಾ ಇಸ್ರೇಲಿನ ಜತೆಯಲ್ಲಿದ್ದ ಅವರ ಮಿತ್ರರೂ ಗಾಝಾ ದಾಳಿಯ ವಿಷಯದಲ್ಲಿ ಅಂತರ ಕಾಯ್ದುಕೊಂಡಿರುವುದು ಮತ್ತೊಂದು ಬೆಳವಣಿಗೆ. ಎಲ್ಲರೂ ಅದನ್ನು ಇಸ್ರೇಲಿನ ಮೂರ್ಖತನವೆಂದೇ ಪರಿಗಣಿಸಿದ್ದಾರೆ. ದಿಗ್ಬಂಧನವನ್ನು ತೆರವುಗೊಳಿಸಬೇಕೆಂದು ಯಾರೇ ಒತ್ತಾಯಿಸದಿದ್ದರೂ ಕಣ್ಣಿನಲ್ಲಿ ನೆತ್ತರಿಲ್ಲದ ಈ ದಿಗ್ಬಂಧನದ ಗೋಡೆಗೆ ದೊಡ್ಡ ಬಿರುಕು ಬಿದ್ದಿದೆ. ಈ ಅಪರಾಧ ಕೃತ್ಯದಲ್ಲಿ ಭಾಗಿಯಾಗಲು ಯಾರೂ ಸಿದ್ಧರಿಲ್ಲ. ಗಾಳಿಯ ದಿಕ್ಕನ್ನು ನೋಡಿ ಅಮೇರಿಕದ ಅಧ್ಯಕ್ಷ ಒಬಾಮರೂ ದಿಗ್ಬಂಧನವನ್ನು ಸಡಿಲುಗೊಳಿಸಬೇಕು, ಇದನ್ನು ಮುಂದುವರಿಸಲು ಸಾಧ್ಯವಿಲ್ಲವೆಂದು ಪ್ರತಿಕ್ರಿಯಿಸಿದ್ದಾರೆ.

ಕಿಂಚಿತ್ತೂ ನಾಚಿಕೆಯಿಲ್ಲದೆ ಗಾಝಾದ ಇನ್ನೊಂದು ಗಡಿಯಲ್ಲಿ ಉಕ್ಕಿನ ಗೋಡೆ ನಿರ್ಮಿಸುವ ಯೋಜನೆ ಹಾಕಿದವರೂ (ಈಜಿಪ್ಟ್) ತಮ್ಮ ನಿಯಂತ್ರಣದಲ್ಲಿದ್ದ ರಫಾಲ್ ಚೆಕ್‌ಪೋಸ್ಟ್ ತೆರೆಯಬೇಕಾಯಿತು. ಹಾಗಾದರೆ ಬದಲಾವಣೆಯಾಗಲಿಲ್ಲವೇ? ವಿಜಯದ ಬಿರುಗಾಳಿಯು ಆ ಚೆಕ್‌ಪೋಸ್ಟನ್ನು ತೆರೆಸಿತು. ಫ್ರೀಡಮ್ ಫ್ಲೋಟಿಲ್ಲಾದಲ್ಲಿ ಪಯಣಿಸಿದವರು ಈ ಪ್ರಚಂಡ ವಿಜಯದ ಕನಸು ಕಂಡಿರಲಾರರು. ಆದರೆ ಅದೇ ಸಂಭವಿಸಿತು.

2. ಇದರಿಂದ ಜಗತ್ತಿನ ಗಮನ ಫೆಲೆಸ್ತೀನ್‌ನಲ್ಲಿ ನಡೆಯುತ್ತಿರುವ ಅಕ್ರಮ ಮತ್ತು ಮಾನವ ಹಕ್ಕು ಉಲ್ಲಂಘನೆಗಳತ್ತ ತಿರುಗಿತು. ಮಾಧ್ಯಮಗಳು, ಅಂತಾರಾಷ್ಟ್ರೀಯ ಮಾನವ ಹಕ್ಕು ಸಂಘಟನೆಗಳು ಮತ್ತು ಪ್ರಾದೇಶಿಕ ಒಕ್ಕೂಟಗಳು ಸಮಸ್ಯೆಯನ್ನು ಕೈಗೆತ್ತಿಕೊಂಡುವು. ಫ್ರೀಡಮ್ ಫ್ಲೋಟಿಲ್ಲಾದ ಮೇಲಿನ ಆಕ್ರಮಣದ ವಿರುದ್ಧ ಜಗತ್ತಿನ ಎಲ್ಲೆಡೆ ಪ್ರತಿಭಟನೆ ನಡೆಯಿತು. ಸಮಸ್ಯೆಯು ಮಾನವೀಯ ಮತ್ತು ಧಾರ್ಮಿಕ ರೂಪು ತಾಳಿತು. ಸುಧಾರಣಾವಾದಿಗಳು ಮತ್ತು 'ಮೂಲಭೂತವಾದಿಗಳಿಗೆ' ಸಾರ್ವಜನಿಕ ಅಭಿಪ್ರಾಯ ರೂಪಿಸುವ ಶಕ್ತಿಯಾಗಿ ಮಾರ್ಪಟ್ಟಿತು.

5. ದಿಗ್ಬಂಧನದ ವಿರುದ್ಧ ಟರ್ಕಿಯು ಬಹಿರಂಗವಾಗಿ ರಂಗಕ್ಕಿಳಿದಿರುವುದು ಗಮನಾರ್ಹ. ಅಂಥ ರಾಷ್ಟ್ರ ತೀರಾ ವಿರಳ. ಟರ್ಕಿಯ ಹಸ್ತಕ್ಷೇಪವು ಫೆಲೆಸ್ತೀನ್‌ನ ಬಗ್ಗೆ ಜಗತ್ತು ಹೆಚ್ಚು ನ್ಯಾಯಪರವಾದ ಹೇಳಿಕೆಗಳನ್ನಾದರೂ ಕೊಡುವುದಕ್ಕೆ ನಿರ್ಬಂಧಿಸಿತು. ಇದು ಟರ್ಕಿ ಮತ್ತು ಇಸ್ರೇಲ್‌ಗಳ ಮಧ್ಯೆ ಶತಮಾನಗಳಿಂದ ಉಳಿದಿದ್ದ ಸಂಬಂಧ ಮತ್ತು ಸಾರ್ವಜನಿಕ ಹಿತಾಸಕ್ತಿಯನ್ನು ಘಾಸಿಗೊಳಿಸಿತು. ಟರ್ಕಿಯು ತನ್ನ ಪತಾಕೆಯಿದ್ದ ಹಡಗನ್ನು ಅಲ್ಲಿಗೆ ಕಳುಹಿಸಿತ್ತು. ಅದುವೇ ಇಸ್ರೇಲಿನ ಭೀಕರ ಸಿಟ್ಟಿಗೆ ಪ್ರಮುಖ ಕಾರಣವಾಗಿತ್ತು. ಇಸ್ರೇಲ್–ಟರ್ಕಿ ಸಂಬಂಧದಲ್ಲಿ ಭಾರೀ ಬಿರುಕು ಬಿದ್ದಿದೆ. ಫೆಲೆಸ್ತೀನ್ ಸಮಸ್ಯೆಗೆ ಓರ್ವ ಹೊಸ ಅಶ್ವಾರೂಢನ ಪ್ರವೇಶವಾಗಿದೆ. ಅರಬರು ಎಲ್ಲಿಯೂ ಚಿತ್ರದಲ್ಲಿಲ್ಲ. ಇಂಥ ನಿರ್ಣಾಯಕ ಸಂದರ್ಭದಲ್ಲಿಯೇ ಟರ್ಕಿ ಜನತೆಯು ಇಸ್ಲಾಮಿ ಇತಿಹಾಸಕ್ಕೆ ಪ್ರವೇಶಿಸಿತ್ತಷ್ಟೆ. ಅದನ್ನು ಪ್ರಸಿದ್ಧ ಇತಿಹಾಸಗಾರ ಅಬ್ದುಲ್ ರಹ್ಮಾನ್ ಬಿನ್ ಖಲ್ದೂನ್‌ರೇ ಹೇಳಲಿ:

"ಅರಬ್ ಸಂಸ್ಕೃತಿಯು ಆಡಂಬರದಲ್ಲಿ ಮುಳುಗಿದ್ದ ಕಾಲ. ಆ ಜನತೆಯು ಯಾವುದೇ ಸಾಮರ್ಥ್ಯವಿಲ್ಲದ ದುರಂತದಲ್ಲಿದ್ದರು. ಮುಸ್ಲಿಮರಲ್ಲದ ತಾರ್ತಾರಿಗಳೆಂಬ ಬಾಹ್ಯ ಶಕ್ತಿಯಿಂದ ಅಬ್ಬಾಸೀ ಸಾಮ್ರಾಜ್ಯ ಮತ್ತು ಅದರ ಮನೋಹರ ನಿರ್ಮಾಣವು ಕಿತ್ತೆಸೆಯಲ್ಪಟ್ಟಿತು. ಜನರು ಅಡಂಬರದಲ್ಲಿಯೇ ಮಗ್ನರಾಗಿ ಬಾಳಿದರು. ಇಚ್ಛಾಶಕ್ತಿ ಕುಸಿದು ಯಾವುದಕ್ಕೂ ಸಿದ್ಧವಿಲ್ಲದ ಆ ಸಮೂಹ ಸೋಮಾರಿಯಾಗಿ ಕುಳಿತಿತ್ತು. ಅಲ್ಲಾಹನ ಅಪಾರ ಕೃಪಾಕಟಾಕ್ಷಗಳಿಂದ ಅಲ್ಲಾಹನು ಪುನರುಜ್ಜೀವನಗೊಳಿಸುವನೆಂದು ಮಾತುಕೊಟ್ಟ ವಿಶ್ವಾಸವು ಒಂದು ಜನತೆಯ ಹೊಸ ರಕ್ತವನ್ನು ವಹಿಸಿಕೊಂಡಿತು. ಅವರೇ ಟರ್ಕಿ ಜನತೆ. ಅವರ ಸಂಘಶಕ್ತಿ ಅಪಾರವಾಗಿತ್ತು. ಅವರು ಇಸ್ಲಾಮಿಗೆ, ವಿಶ್ವಾಸದ ಮನೋಬಲ ಮತ್ತು ನಿಷ್ಕಳಂಕ ಗ್ರಾಮೀಣ ಸಂಸ್ಕೃತಿಯೊಂದಿಗೆ ಆಗಮಿಸಿದ್ದರು. ದೇಹೇಚ್ಛೆಗಳು ಅವರ ಸಹಜ ಸ್ವಭಾವದಲ್ಲಿ ಸೋಕಿರಲಿಲ್ಲ."

## ಆರೋಪಿ ಅವರೊಬ್ಬರೇ ಏಕೆ?

(3ನೇ ಪುಟದಿಂದ)

**ಇದರ ಬೆನ್ನಿಗೇ ಮಅದನಿಯವರು 'ಪೀಪಲ್ಸ್ ಡೆಮಾಕ್ರಾಟಿಕ್ ಪಾರ್ಟಿ' ಎಂಬ ರಾಜಕೀಯ ಪಕ್ಷ ಸ್ಥಾಪಿಸಿದರು. ಈ ಪಕ್ಷ ಚುನಾವಣೆಯಲ್ಲಿ ಸ್ಪರ್ಧಿಸಿದರೂ ನಿರೀಕ್ಷಿತ ಯಶಸ್ಸು ಸಿಗಲಿಲ್ಲ.**

**ತಮಿಳುನಾಡಿನ ಕೊಯಮತ್ತೂರಿನಲ್ಲಿ ಬಾಂಬ್ ಸ್ಫೋಟ ನಡೆದಾಗ ಮಅದನಿಯನ್ನು ಸಿಲುಕಿಸಿ ಜೈಲಿಗಟ್ಟಲಾಯಿತು. ಆಗ ಕೆಲವು ರಾಜಕೀಯ ಪಕ್ಷಗಳು, ಇವರ ಬಂಧನದಿಂದ ತಮ್ಮ ಪ್ರತಿಸ್ಪರ್ಧಿ ಪಕ್ಷ ನಿರ್ನಾಮವಾಯಿತು ಎಂದು ಸಂಭ್ರಮಪಟ್ಟರೇ ಹೊರತು ಮಅದನಿ ಆರೋಪಿಯಲ್ಲ ಎಂದು ಹೇಳಲು ಯಾರು ಮುಂದೆ ಬರಲಿಲ್ಲ. ಹಾಗೆ ಕೊಯಮತ್ತೂರು ಜೈಲಿನಲ್ಲಿ ಶಂಕಿತ ಆರೋಪಿಯಾಗಿಯೇ 9 ವರ್ಷಗಳನ್ನು ಕಳೆದ ಬಳಿಕ ನಿರಪರಾಧಿಯಾಗಿ ಬಿಡುಗಡೆಗೊಂಡರು.**

**ಅವರ ಬಿಡುಗಡೆ ಕೇರಳದಲ್ಲಿ ಪಿ.ಡಿ.ಪಿ. ಪಕ್ಷ ಮತ್ತೆ ಹೆಚ್ಚಿನ ಬಲವನ್ನು ಪಡೆಯಲು ಕಾರಣವಾಯಿತು. ಮಅದನಿಯವರಿಗೆ ಕೇರಳದಲ್ಲಿ ಅದ್ಧೂರಿ ಸ್ವಾಗತ ಸಿಕ್ಕಿತು. ಈ ಸಂದರ್ಭದಲ್ಲಿ ಕೇರಳದ ಸಿ.ಪಿ.ಎಂ. ಪಕ್ಷದ ನಾಯಕರೊಳಗೊಂಡಂತೆ ಗೃಹಸಚಿವ ಕೊಡಿಯೇರಿ ಬಾಲಕೃಷ್ಣನ್ ಮತ್ತು ಶಿಕ್ಷಣ ಸಚಿವ ಎಂ.ಎ. ಬೇಬಿ ಸ್ವಾಗತ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ಇದಾದ ಬಳಿಕ ನಿಜವಾಗಿ ಮಅದನಿಯ ರಾಜಕೀಯ ಜೀವನದ ಎರಡನೇ ಇನಿಂಗ್ಸ್ ಆರಂಭವಾಯಿತೆನ್ನಬಹುದು. ಮಅದನಿ ಎಡ ಪಕ್ಷಗಳ ಬೆಂಬಲಕ್ಕೆ ನಿಂತಾಗ ಮುಸ್ಲಿಮ್ ಲೀಗ್ ಹಾಗೂ ಕಾಂಗ್ರೆಸ್ಸಿಗರ ವಿರೋಧ ವ್ಯಕ್ತವಾದವು. ಚುನಾವಣೆಯಲ್ಲಿ ಸಿ.ಪಿ.ಎಂ. ನಾಯಕರು ಮಅದನಿಯ ಜೊತೆ ವೇದಿಕೆ ಹಂಚಿಕೊಂಡು ಜಂಟಿ ಪ್ರಚಾರ ಮಾಡಿದರು. ಇದು ಸಿ.ಪಿ.ಎಂ. ಪಕ್ಷದಲ್ಲಿ ಪರ ವಿರೋಧ ಅಭಿಪ್ರಾಯಗಳನ್ನು ಸೃಷ್ಟಿಸಿದವು. ಒಂದು ಕಡೆ ಮಅದನಿಯನ್ನು ಬಳಸಿಕೊಂಡ ಸಿ.ಪಿ.ಎಂ. ತನ್ನ ಆಂತರಿಕ ಕಾರಣಗಳಿಗಾಗಿ ಮಅದನಿಯನ್ನು ಅರ್ಧದಲ್ಲೇ ಕೈಬಿಟ್ಟಿತು. ಇಂತಹ ಸಂದರ್ಭದಲ್ಲಿ ಮುಸ್ಲಿಂ ಲೀಗ್ ಮತ್ತು ಕಾಂಗ್ರೆಸ್ ಹಾಗೂ ಬಿ.ಜೆ.ಪಿ. ಇದನ್ನೇ ಮುಂದಿಟ್ಟುಕೊಂಡು ಸಿ.ಪಿ.ಎಂ. ಹಾಗೂ ಮಅದನಿಯ ವಿರುದ್ಧ ಸಮರಕ್ಕಿಳಿದವು. ಈ ನಡುವೆ ಬೆಂಗಳೂರು ಬಾಂಬ್ ಸ್ಫೋಟದ ಹೆಸರಲ್ಲಿ ಪೊಲೀಸರು ನ್ಯಾಯಾಲಯಕ್ಕೆ ಸಲ್ಲಿಸಿದ ಹೆಚ್ಚುವರಿ ಆರೋಪ ಪಟ್ಟಿಯಲ್ಲಿ 31ನೇ ಆರೋಪಿಯಾಗಿ ಹೆಸರಿಸಲಾಯಿತು.**

**ನಿಜವಾಗಿ ಕೊಯಮತ್ತೂರು ಜೈಲಿನಿಂದ ಬಿಡುಗಡೆ ಹೊಂದಿದ ಮಅದನಿಯವರು ಕೇರಳ ಪ್ರವೇಶಿಸುತ್ತಿದ್ದಂತೆ ಅವರಿಗೆ ಇಬ್ಬರು ಕೇರಳ ಪೊಲೀಸ್ ಅಂಗರಕ್ಷಕರನ್ನು ನೇಮಿಸಲಾಗಿತ್ತು. ಇವರು ಮಅದನಿಯ ಜೊತೆ ಎಲ್ಲಾ ಸಮಯದಲ್ಲೂ ಪಾಳಿಯ ಆಧಾರದ ಮೇಲೆ ಕೆಲಸ ನಿರ್ವಹಿಸುತ್ತಿದ್ದರು. ಅಲ್ಲದೇ ಮಅದನಿಯವರ ಚಲನವಲನಗಳ ಬಗ್ಗೆ ಕೇರಳ ಸರಕಾರಕ್ಕೆ ಹಾಗೂ ಉನ್ನತ ಪೊಲೀಸ್ ಅಧಿಕಾರಿಗಳಿಗೆ ಅವರು ಮಾಹಿತಿ ನೀಡಬೇಕಾಗಿತ್ತು. ಹೀಗಿರುವಾಗ ಅಂಗರಕ್ಷರ ಕಣ್ಣು ತಪ್ಪಿಸಿ ಅವರು ಬೆಂಗಳೂರು ಸ್ಫೋಟದಲ್ಲಿ ಭಾಗವಹಿಸಲು ಹೇಗೆ ಸಾಧ್ಯ ಎನ್ನುವುದು ಪಿ.ಡಿ.ಪಿ. ನಾಯಕರ ವಾದ. ಇವರು ಸ್ಫೋಟದಲ್ಲಿ ಭಾಗವಹಿಸಿದ್ದಿದ್ದರೆ ಕೇರಳ ಪೊಲೀಸರು ಈ ಕುರಿತ ಮಾಹಿತಿಯನ್ನು ಸರಕಾರಕ್ಕೆ ನೀಡಿರಬೇಕಿತ್ತು. ನೀಡದಿದ್ದರೆ ಅವರು ಕರ್ತವ್ಯ ಲೋಪ ಎಸಗಿದಂತಲ್ಲವೇ? ಆದರೆ ಇದನ್ನು ಕೇರಳ ಪೊಲೀಸರು ಒಪ್ಪಲು ತಯಾರಿಲ್ಲ. ಕೇರಳ ಪೊಲೀಸರ ಬೆಂಗಾವಲಿದ್ದೂ ಮಅದನಿ ಒಂದು ಸ್ಫೋಟ ಪ್ರಕರಣ ದಲ್ಲಿ ಪಾಲ್ಗೊಂಡಿದ್ದಾರೆ ಎಂದು ವಾದಿಸುವುದಾದರೆ ಅವರ ಬೆಂಗಾವಲಿಗಿದ್ದ ಕೇರಳ ಪೊಲೀಸರು ಮತ್ತು ಅಲ್ಲಿನ ಗೃಹ ಸಚಿವರು ಕೂಡಾ ಇದರ ಆರೋಪವನ್ನು ಹೊತ್ತುಕೊಳ್ಳಬೇಕು. ಆದರೆ ಈ ಕುರಿತಂತೆ ತನಿಖಿ ಸುವವರೂ ಮಅದನಿ ಯನ್ನು ದೂರುವವರೂ ಚಕಾರ ಎತ್ತದಿರುವುದೇಕೆ?**

**chammu99@gmail.com**

**ಜಮಾಅತೆ ಇಸ್ಲಾಮಿ ಹಿಂದ್ ಅಖಿಲ ಭಾರತ ಉಪಾಧ್ಯಕ್ಷ ಪ್ರೊ ಸಿದ್ದೀಕ್ ಹಸನ್‌ರು ಮಾಧ್ಯಮಮ್ ದೈನಿಕದಲ್ಲಿ ಬರೆದಿರುವ ಈ ಲೇಖನ, ಕೇರಳಕ್ಕಷ್ಟೇ ಅಲ್ಲ, ಇಲ್ಲಿಗೂ ಸೂಕ್ತ. ಅಲ್ಲಿನ ರಾಜಕೀಯ ಬೆಳವಣಿಗೆ, ಒಳಸಂಚು, ಹಿಪಾಕ್ರಸಿಯನ್ನು ಆಪ್ತವಾಗಿ ಹಿಡಿದಿಟ್ಟ, ಕಳವಳ ವ್ಯಕ್ತಪಡಿಸಿದ ಈ ಬರಹದಿಂದ ಓದುಗರಿಗೆ ಕೇರಳವನ್ನು ಅರಿತುಕೊಳ್ಳಲು ಉಪಯುಕ್ತವಾದೀತು.**



# ದಯವಿಟ್ಟು ನಿಲ್ಲಿಸಿ, ಸುಡಬೇಡಿ!



**ಪ್ರೊ ಸಿದ್ದೀಕ್ ಹಸನ್**

ಇದು ಮಲೆಯಾಳದ ಅನ್ನ ಮತ್ತು ಉಪ್ಪು ತಿಂದು ಆರು ದಶಕಗಳಿಂದ ಅದರ ವಿಕಾಸ ಪ್ರಕ್ರಿಯೆಗಳನ್ನು ನೋಡಿ ಬೆಳೆದ ಓರ್ವ ಸಾಮಾನ್ಯ ಪೌರನ ಅಳಲು... ಪ್ರಾಯಶಃ ಇನ್ನೂ ಮೌನ ಪಾಲಿಸುವುದು ಆತ್ಮ ಘಾತುಕವಾದೀತೆಂಬ ನೋವೇ ಈ ಲೇಖನಕ್ಕೆ ಪ್ರೇರಣೆ. ಭಾರತದ ಭೂಪಟದಲ್ಲಿ ಮಲೆಯಾಳ ಮಣ್ಣಿಗೆ ವಿಶಿಷ್ಟ ಸ್ಥಾನವಿತ್ತು.

ಸಾಕ್ಷರತೆ, ಸಂಸ್ಕೃತಿ, ಸಮುದಾಯಗಳ ಪರಸ್ಪರ ಸಾಮರಸ್ಯಗಳಲ್ಲಿ ನಾವು ದೇಶದಲ್ಲಿ ಎಲ್ಲ ರಾಜ್ಯಗಳಿಗಿಂತ ಮುಂಚೂಣಿಯಲ್ಲಿದ್ದೆವು. ಭಾರತದ ಇತರೆಡೆಗಳಲ್ಲಿ ಗೋಚರಿಸದ ಒಗ್ಗಟ್ಟು ಮತ್ತು ಸೌಹಾರ್ದವು ಮಲೆಯಾಳಿ ಮಣ್ಣಿನ ಉಡುಗೆ ತೊಡುಗೆಯಾಗಿತ್ತು. ಒಂದೇ ಬೆಂಚಿನಲ್ಲಿ ಕುಳಿತು ಹಿಂದೂ ಮುಸ್ಲಿಮ್ ಮತ್ತು ಕ್ರೈಸ್ತರು ಕಲಿತರು. ಒಂದೇ ಜೀವನ ಸಂಸ್ಕೃತಿಯನ್ನು ಬೆಳೆಸಿದರು. ವಿವಿಧತೆಯಲ್ಲಿ ಏಕತೆಯು ರಾಜ್ಯದ ಉಸಿರಾಯಿತು. ಈ ಉತ್ತಮ ಬೆಳವಣಿಗೆಯಲ್ಲಿ ಎಲ್ಲ ವಿಭಾಗದ ಜನರೂ ಭಾಗಿಯಾದರು.

ಈಗ ಆ ಸುದಿನಗಳು ಸಾವಧಾನವಾಗಿ ಜಾರುತ್ತಿವೆಯೇ ಎಂಬ ಭೀತಿ ಮನಸ್ಸನ್ನು ಕಾಡುತ್ತಿದೆ. ಚಿಲ್ಲರೆ ಲಾಭಗಳಿಗಾಗಿ ರಾಜಕೀಯ ಪಕ್ಷಗಳು ಕೋಮು ಆಟವಾಡುತ್ತಿರುವುದು ಖೇದಕರವೆಂದೇ ಹೇಳಬೇಕಾಗಿದೆ. ರಾಜಕೀಯ ಇದಿರಾಳಿಯನ್ನು ಭಯೋತ್ಪಾದಕಗೊಳಿಸುವ ರೀತಿಯು ಇಲಿ ಕೊಲ್ಲಲಿಕ್ಕಾಗಿ ಗುಡಿಸಲು ಸುಟ್ಟಂತೆ. ವಿ.ಆರ್. ಕೃಷ್ಣ ಅಯ್ಯರ್‌ರ ಮಾತುಗಳಲ್ಲಿ ಹೇಳುವುದಿದ್ದರೆ: "ಬ್ರಿಟಿಷರ ಕಾಲದಲ್ಲಿ ಅವರು ರಾಷ್ಟ್ರದ್ರೋಹಿಗಳೆಂದು ಆರೋಪಿಸಿ ಕಾಂಗ್ರೆಸ್ಸಿಗರನ್ನು ಹಿಡಿದೊಯ್ದರು. ಕಾಂಗ್ರೆಸ್ಸಿಗರು ಅಧಿಕಾರಕ್ಕೆ ಬಂದಾಗ ಕಮ್ಯುನಿಸ್ಟರನ್ನು ದೇಶದ್ರೋಹಿಗಳೆಂದು ಸಾರಿ ಬಂಧಿಸಿ ಒಯ್ದರು. ಕಮ್ಯುನಿಸ್ಟರು ಅಧಿಕಾರಕ್ಕೆ ಬಂದಾಗ ನ್ಯಾಯ ಮತ್ತು ಮಾನವ ಹಕ್ಕುಗಳಿಗಾಗಿ ಹೋರಾಡುವ ಆದಿವಾಸಿಗಳು ಮತ್ತು ದಲಿತರನ್ನು, ನಕ್ಸಲರನ್ನು ಹಿಡಿದೊಯ್ದರು. ಒಂದು ಕಾಲದಲ್ಲಿ ಕಾಂಗ್ರೆಸ್ಸಿಗನಾಗುವುದು ರಾಷ್ಟ್ರ ದ್ರೋಹವಾಗಿದ್ದರೆ ಬಳಿಕ ಕಮ್ಯೂನಿಸ್ಟನಾಗುವುದು ರಾಷ್ಟ್ರ ದ್ರೋಹವಾಗಿತ್ತು. ಇಂದು ನಕ್ಸಲನಾಗುವುದು ರಾಷ್ಟ್ರ ದ್ರೋಹವಾಗಿದೆ. ನಕ್ಸಲಿಝಮ್ ಮತ್ತು ಭಯೋತ್ಪಾದಕತೆಯು ಇಂದು ಇದಿರಾಳಿಯನ್ನು ದಮನಿಸುವ ಅಸ್ತ್ರವಾಗಿರುವುದು ವಿಷಾದನೀಯ. ರಾಜಾಡಳಿತದಲ್ಲಿ ರಾಜನ ಇಚ್ಛೆಯೇ ನೀತಿಯಾಗಿತ್ತು.ಆದರೆ ಅರಸೊತ್ತಿಗೆ ಮತ್ತು ವಿದೇಶಿ ಗುಲಾಮಗಿರಿಯಿಂದ ಸ್ವತಂತ್ರಗೊಂಡು ಪ್ರಜಾಪ್ರಭುತ್ವ ರಾಷ್ಟ್ರವಾಗಿ ಮಾರ್ಪಟ್ಟ ಬಳಿಕವೂ ಹಕ್ಕು ಮತ್ತು ನ್ಯಾಯಕ್ಕಾಗಿ ಹೋರಾಡುವವರನ್ನು ರಾಷ್ಟ್ರ ದ್ರೋಹಿ ಮತ್ತು ಭಯೋತ್ಪಾದಕಗೊಳಿಸುವ ರೂಢಿಯು ಕ್ರೌರ್ಯವಾಗಿದೆ.

ಗುಜರಾತ್ ಗಲಭೆಯ ಸಂದರ್ಭದಲ್ಲಿ ಕೇರಳದಿಂದ ಪರಿಹಾರ ಕಾರ್ಯಗಳಿಗೆ ತೆರಳಿದ್ದ ಯುವಕರ ತಂಡದೊಡನೆ ಮರಳುತ್ತಿರುವಾಗ, ರೈಲಿನಲ್ಲಿ ಪರಿಚಯವಾದ ಓರ್ವ ಹಿಂದೂ ಯುವಕ ಹೇಳಿದ: "ಗಲಭೆಯ ದಿನಗಳಲ್ಲಿ ಮುಸ್ಲಿಮರನ್ನು ಎಲ್ಲಿ ಕಂಡರೂ ಕೊಲ್ಲಬೇಕೆಂದು ನನ್ನ ಭಾವನೆಯಾಗಿತ್ತು. ಯಾಕೆಂದರೆ, ಗಲಭೆಯ ತಿಂಗಳ ಹಿಂದೆ ಮುಸ್ಲಿಮರು ಹಿಂದೂ ಹುಡುಗಿಯರನ್ನು ಅಪಹರಿಸುವ ಮತ್ತು ಮಾನಭಂಗಗೊಳಿಸಿದ ನೂರಾರು ಕಥೆಗಳನ್ನು ವಾರ್ತಾ ಮಾಧ್ಯಮ ಮತ್ತು ಎಸ್ಸೆಮ್ಮೆಸ್‌ಗಳಲ್ಲಿ ಪ್ರಚಾರವಾಗುವುದನ್ನು ನೋಡಿ ರಕ್ತ ಕುದಿಯುತ್ತಿತ್ತು.

ಈ ಪ್ರಚಾರ ತಂತ್ರವು ರಾಜ್ಯಕ್ಕೆ ಇಂದು ಹೊಸ 'ಆತ್ಮಸಾಕ್ಷಿ'ಯನ್ನು ಕೊಡುಗೆ ನೀಡಿದೆ. ಪಾರ್ಲಿ ಮೆಂಟ್ ಧಾಳಿ ಪ್ರಕರಣದಲ್ಲಿ-ಅಫ್ಝಲ್ ಗುರುವನ್ನು ನೇಣಿಗೇರಿಸುವಂತೆ ಸರ್ವೋಚ್ಚ ನ್ಯಾಯಲಯವು ಬೆಟ್ಟು ಮಾಡಿದ, 'ಸಾರ್ವಜನಿಕ ಆತ್ಮ ಸಾಕ್ಷಿ'. ಇಂದು ಓರ್ವ ಅಫ್ಝಲ್ ಗುರು ಮಾತ್ರವಲ್ಲ, ಪ್ರತಿಯೊಬ್ಬ ಮುಸ್ಲಿಮನೂ ಸಾವಧಾನವಾಗಿ ಈ ಸಾರ್ವಜನಿಕ ಅತ್ಮ ಸಾಕ್ಷಿಯ ಮುಂದೆ ಅಪರಾಧಿಯಾಗಿದ್ದಾನೆ; ಆಗುತ್ತಲಿದ್ದಾನೆ.

ಮಾಲೆಗಾಂವ್ ಸ್ಫೋಟದಲ್ಲಿ ನೂರುಗಟ್ಟಲೆ ಮುಸ್ಲಿಮ್ ಯುವಕರನ್ನು ಬಂಧಿಸಿ ಪರೇಡ್ ನಡೆಸಿದ ಡಿ.ಐ.ಜಿ., ಆರೋಪಿಗಳನ್ನು ಗುರುತಿಸಿ ಅವರು ತಪ್ಪೊಪ್ಪಿರುವುದಾಗಿ ಸಾರಿದರು. ಅವರ ವಿರುದ್ಧ ಆರೋಪ ಪಟ್ಟಿ ಸಲ್ಲಿಸಲಾಯಿತು. ಅನಂತರ ಅವರಿಗೆ ಕಸ್ಟಡಿ ಮತ್ತು ಜೈಲಿನಲ್ಲಿ ಕ್ರೂರ ಮರ್ದನ. ಈಗ ಎಂಟು ವರ್ಷಗಳ ಬಳಿಕ, ಅವರು ಜೀವಚ್ಛವವಾದ ಬಳಿಕ, ಮಹಾರಾಷ್ಟ್ರ ಎಟಿಎಸ್ ಬಹಿರಂಗವಾಗಿ ಹೇಳುತ್ತಿದೆ, ಅದು ಹಿಂದೂ ಭಯೋತ್ಪಾದಕರ ಕೃತ್ಯ; ಮಾಲೆಗಾಂವ್ ಮಾತ್ರವಲ್ಲ ನಾಂದೇಡ್, ಹೈದರಾಬಾದ್‌ನ ಮಕ್ಕಾ ಮಸೀದಿ, ರಾಜಸ್ತಾನದ ಅಜ್ಮೇರ್, ಜೈಪುರ, ಪುಣೆ ಮತ್ತು ಸಂಜೋತಾ ಎಕ್ಸ್ ಪ್ರೆಸ್; ಈ ಎಲ್ಲ ಕಡೆಗಳಲ್ಲಿ ಬಾಂಬು ಇರಿಸಿದ್ದು ಹಿಂದೂ ಭಯೋತ್ಪಾದಕರೆಂದು. ಹಿಂದೆ ಈ ಆರೋಪದಲ್ಲಿ ಬಂಧಿತರಾದವರು ಮತ್ತು ಪೀಡಿತರು ಈಗಲೂ ಜೈಲುಗಳಲ್ಲಿ ಕೊಳೆಯುತ್ತಿದ್ದಾರೆ. ಪ್ರತಿಯೊಂದು ಘಟನೆಯ ತಕ್ಷಣವೇ ಪೊಲೀಸ್, ಅಧಿಕಾರಿಗಳು ಮತ್ತು ಮಾಧ್ಯಮಗಳು 'ಹುಜಿ' ಮತ್ತು 'ಸಿಮಿ'ಯ ಹೆಸರು ಹೇಳಿ ಹಬ್ಬ ಆಚರಿಸುತ್ತಿವೆ. 2008ರಲ್ಲಿ ಅನೆಕ್ಸ್‌ನಲ್ಲಿ ಜರುಗಿದ ಸಮ್ಮೇಳನವೊಂದರಲ್ಲಿ ಭಾಗವಹಿಸಿದ ಪ್ರಧಾನಿಯವರು ಹೀಗೆ ಹೇಳ ಬೇಕಾಯಿತು, 1984ರಲ್ಲಿ ಇಂದಿರಾ ಹತ್ಯೆಯ ಬಳಿಕ ಸಿಕ್ಖ್ ಸಮುದಾಯವು ಅನುಭವಿಸುತ್ತಿದ್ದ ಪರಿಸ್ಥಿತಿಯನ್ನು ಮುಸ್ಲಿಮ್ ಸಮುದಾಯ ಎದುರಿಸುತ್ತಿದೆಯೆಂದು. ಇಂಟೆಲಿಜೆನ್ಸ್, ಪೊಲೀಸ್ ಮತ್ತು ಮಾಧ್ಯಮಗಳು ಜತೆಯಾಗಿ ನಡೆಸುತ್ತಿರುವ ಬೇಟೆಯಲ್ಲಿ ಅಧಿಕಾರಿಗಳೂ ಶಾಮೀಲಾದರೆ ಏನಾದೀತೆಂದು ಸ್ವಲ್ಪ ಆಲೋಚಿಸಿ ನೋಡಿರಿ.

ಗುಜರಾತ್‌ಗಳು ಒಂದೇ ರಾತ್ರಿಯಲ್ಲಿ ಸಂಭವಿಸುವುದಿಲ್ಲ. ಅದು ಅನೇಕ ದಿನಗಳ ನಿರಂತರ ಯೋಜಿತ ಪ್ರಚಾರ ತಂತ್ರದ ಭಾಗವಾಗಿದೆ.ಹಳೆಯ ಪೂರ್ವಗ್ರಹಗಳನ್ನು ಬಲಪಡಿಸುವ ಪ್ರಚಾರಗಳು ಕೋಮು ಧ್ರುವೀಕರಣವನ್ನು ತೀವ್ರಗೊಳಿಸುತ್ತದೆ. ಅಪರೂಪದ ಘಟನೆಗಳನ್ನು ಧರ್ಮ ಮತ್ತು ಸಮುದಾಯದೊಂದಿಗೆ ಜೋಡಿಸಿ ಭಯೋತ್ಪಾದ ಕತೆಯೆಂದು ಪ್ರಚಾರಗೊಳಿಸುವ ತಂತ್ರವು ವ್ಯಾಪಕವಾಗುತ್ತಿದೆ. ತಮ್ಮನ್ನು ಬೆಂಬಲಿಸಿದರೆ ಜಾತ್ಯತೀತ ಮತ್ತು ಪ್ರಜಾಪ್ರಭುತ್ವವಾದಿ; ವಿರೋಧಿಯಾದಾಗ, ಭಯೋತ್ಪಾದಕಗೊಳಿಸುವ ವ್ಯವಸ್ಥೆಯಿಂದ ಚಿಲ್ಲರೆ ಲಾಭವಿರಬಹುದು. ಆದರೆ ದೂರ ದೃಷ್ಟಿಯಲ್ಲಿ ಅದು ದೇಶದ ಕೋಮು ವಾತಾವರಣವನ್ನು ಕೆಡಿಸಿ ದುಷ್ಟ ಶಕ್ತಿಗಳಿಗೆ **(12ನೇ ಪುಟಕ್ಕೆ)**

## ಪವಿತ್ರ ಕಾಲದ ಸ್ವಗತ

ಅದೆಷ್ಟು ಅವಸರದಲ್ಲಿ
ಉರುಳುತ್ತವೆ
ಕ್ಷಣಗಳು ಮತ್ತು ದಿನಗಳು
ನಾವು ಮರಳಿದರೂ ಮರಳದಿದ್ದರೂ
ಪವಿತ್ರ ದ್ವಾರದ ಬಳಿಗೆ

ನಮ್ಮನ್ನು ತೊರೆದು ಮುಂದೆ
ಸಾಗಿಯೇ ಬಿಡುತ್ತದೆ
ಆಯುಷ್ಯ ಇದ್ದವರಿಗೆ, ಕರ್ತನ ಮೋಹಿತರಿಗೆ
ಮಾತ್ರವೇ ಸಿಗುತ್ತದೆ
ಈ ಭಾಗ್ಯ-ಸೌಭಾಗ್ಯ

ಬೆಂಕಿಯನ್ನು ನಂದಿಸಿ
ತಂಪಿನ ಮನೆಗೆ ಧಾವಿಸಲು
ಹಾದಿ ತೋರಿಸುತ್ತದೆ
ಈ ಕ್ಷಣಗಳು, ಈ ದಿನಗಳು

ಕರುಣೆ, ಕ್ಷಮೆ, ಮೋಕ್ಷ
ಸುಲಭದಲ್ಲಿ ದಕ್ಕುವುದಿಲ್ಲ
ದಕ್ಕಿದರೂ ನಾವು ಹೆಕ್ಕುವುದಿಲ್ಲ
ಅದು ಬೇರೆ ಮಾತು!

ಮನುಷ್ಯ ಓಡುತ್ತಿದ್ದಾನೆ
ಆಶೆ-ಆಕಾಂಕ್ಷೆಗಳ ಹಿಂದೆ
ಮರೆತನೇ, ಸಾವಿದೆ ಮುಂದೆ

ಉಳಿದೇ ಬಿಡುತ್ತದೆ
ಬಯಕೆಗಳ ಆಗರ, ಅದು ಸಾವಿರ
ಅದೆಂದೂ ತಲುಪುವುದಿಲ್ಲ ತೀರ

ಈ ಕ್ಷಣಗಳಲ್ಲಿ, ಈ ದಿನಗಳಲ್ಲಿ
ಅರಿತರೆ ಅದೆಷ್ಟು ಚೆಂದ
ಬದುಕಿನ ಈ ಅನುಬಂಧ!!

**ಅಹ್ಮದ್ ಅನ್ವರ್**

## ಫಿತ್ರ್ ಝಕಾತ್

ಹಬ್ಬವು ಸಾಮಾಜಿಕ ಆನಂದ ಮತ್ತು ಆಹ್ಲಾದದ ದಿನವಾಗಿದೆ. ಅಂದು ಯಾರೂ ಹಸಿವೆ ಮತ್ತು ತಾಪತ್ರಯಗಳಿಂದ ದುಃಖಿಸುವಂತಾಗಬಾರದೆಂದು ಇಸ್ಲಾಮ್ ನಿರ್ಧರಿಸಿದೆ. ಅದಕ್ಕಾಗಿ ಏರ್ಪಡಿಸಲಾಗಿರುವ ವಿಶೇಷ ವ್ಯವಸ್ಥೆಯೇ ಫಿತ್ರ್ ಝಕಾತ್. ಬಡವರನ್ನು ಹಬ್ಬದ ದಿನ ಯಾಚಿಸದಂತೆ ಸ್ವಾವಲಂಬಿಗಳಾಗಿಸಬೇಕೆಂದು ಪ್ರವಾದಿ(ಸ) ಆದೇಶಿಸಿದ್ದಾರೆ. ರಮಝಾನ್ ವ್ರತ ಪೂರ್ಣವಾದಾಗ ಫಿತ್ರ್ ಝಕಾತ್ ಕಡ್ಡಾಯವಾಗುತ್ತದೆ.

ಉಪವಾಸದಲ್ಲಿ ಆಗಿರುವ ಲೋಪದೋಷಗಳ ಪರಿಹಾರವಾಗಿ ಮತ್ತು ಬಡವರು ಹಬ್ಬವನ್ನು ಕಷ್ಟವಿಲ್ಲದೆ ಆಚರಿಸಲಿಕ್ಕಾಗಿ ಈ ಕಡ್ಡಾಯ ದಾನವನ್ನು ನಿರ್ಣಯಿಸಲಾಗಿದೆ. ಅದನ್ನು ಹಬ್ಬದ ನಮಾಝ್‌ಗಿಂತ ಮುಂಚೆ ಕೊಡಬೇಕು.

ಹಬ್ಬದ ದಿನದ ರಾತ್ರಿ ಹಗಲುಗಳಲ್ಲಿ ತನ್ನ ಕುಟುಂಬಕ್ಕೆ ಬೇಕಾದ ಮಿತ ಆಹಾರಕ್ಕಿಂತ ಮಿಗತೆಯಿರುವವರು ಈ ಝಕಾತ್ ನೀಡಬೇಕಾಗಿದೆ. ಕುಟುಂಬದ ಮುಖ್ಯಸ್ಥನು ತನಗೆ ಮತ್ತು ತನ್ನ ಆಶ್ರಯದಲ್ಲಿರುವ ಮಾತಾಪಿತರು, ಪತ್ನಿ, ಮಕ್ಕಳು ಮತ್ತು ಕೆಲಸದವರ ಪರವಾಗಿ ಅದನ್ನು ಸಂದಾಯ ಮಾಡಬೇಕು. ಊರಿನ ಪ್ರಧಾನ ಆಹಾರ ವಸ್ತುಗಳನ್ನು ಫಿತ್ರ್ ಝಕಾತ್ ಆಗಿ ನೀಡಬೇಕು. ಕುಟುಂಬದ ಪ್ರತಿಯೊಬ್ಬ ಸದಸ್ಯರಿಗಾಗಿ ತಲಾ ಒಂದು ಸಾಅ್ ಪ್ರಮಾಣದಲ್ಲಿ ನೀಡಬೇಕು. ಒಂದು ಸಾಅ್ ಎಂದರೆ 2 ಕಿಲೋ 176 ಗ್ರಾಮ್ ಎಂದು ಯೂಸುಫ್ ಕರ್ಝಾವಿಯವರ ಅಭಿಪ್ರಾಯ. ರಮಝಾನ್‌ನ ಕೊನೆಯ ದಿನ ಸೂರ್ಯಾಸ್ತಮಾನದ ತನಕ ಬದುಕಿದವರಿಗೂ, ಅಸ್ತಮಾನಕ್ಕಿಂತ ಮುಂಚೆ ಹುಟ್ಟಿದವರಿಗಾಗಿಯೂ ಝಕಾತ್ ಸಂದಾಯ ಮಾಡಬೇಕಾದುದು ಕಡ್ಡಾಯವಾಗಿದೆ.

ರಮಝಾನ್‌ನ ಕೊನೆಯ ಹಗಲು ಅಸ್ತಮಿಸಿದ ಬಳಿಕ ಫಿತ್ರ್ ಝಕಾತ್ ಕಡ್ಡಾಯವಾಗುತ್ತದೆ. ಹಬ್ಬದ ದಿನ ಪ್ರಭಾತದಿಂದ ಕಡ್ಡಾಯವಾಗುವುದೆಂಬ ಅಭಿಪ್ರಾಯವೂ ಇದೆ. ಹಬ್ಬದ ನಮಾಝ್‌ನ ಬಳಿಕವೂ ಕೊಡದಿದ್ದರೆ ಕರ್ತವ್ಯ ನೆರವೇರುವುದಿಲ್ಲ. ಆದ್ದರಿಂದ ತಡವಾದರೂ ಅದನ್ನು ಕೊಡಲೇಬೇಕು. ಹಬ್ಬದ ಒಂದೆರಡು ದಿನ ಮುಂಚೆ ಕೊಡಬಹುದೆಂಬ ಬಗ್ಗೆ ವಿದ್ವಾಂಸರಲ್ಲಿ ಸರ್ವಾನುಮತವಿದೆ. ರಮಝಾನ್ ಆರಂಭದಿಂದಲೇ ನೀಡಬಹುದೆಂದು ಇಮಾಮ್ ಶಾಫಿಈ ಮತ್ತು ರಮಝಾನ್‌ಗಿಂತ ಮುಂಚೆ ನೀಡಬಹುದೆಂದು ಇಮಾಮ್ ಅಬೂ ಹನೀಫರ ಅಭಿಮತ. ಧಾನ್ಯದ ಬದಲಿಗೆ ಅದರ ಬೆಲೆ ನೀಡಿದರೂ ಸಾಕೆಂದು ಇಮಾಮ್ ಹನೀಫರ ದೃಷ್ಟಿಕೋನ. ಯೂಸುಫುಲ್ ಕರ್ಝಾವಿಯವರಂಥ ಕೆಲವು ಆಧುನಿಕ ವಿದ್ವಾಂಸರೂ ಈ ದೃಷ್ಟಿಕೋನವನ್ನು ಬೆಂಬಲಿಸಿದ್ದಾರೆ. ಪ್ರವಾದಿಯವರ ಮತ್ತು ಖಲೀಫರ ಕಾಲದಲ್ಲಿ ಫಿತ್ರ್ ಝಕಾತ್‌ನ ಸಂಗ್ರಹ ಮತ್ತು ವಿತರಣೆ ಸಾಮೂಹಿಕವಾಗಿ ನಡೆಯುತ್ತಿತ್ತು.ಈ ಮಾದರಿಯನ್ನೇ ನಾವೂ ಪಾಲಿಸಬೇಕು.

# ಅದು ಔದಾರ್ಯವಲ್ಲ, ಹೊಣೆಗಾರಿಕೆ

(ಕಳೆದ ಸಂಚಿಕೆಯಿಂದ)

ಬಡವರಿಗೆ ಏನಾದರೂ ನೀಡಿದರೆ ಸಾಕಾಗಲಾರದು. ಅವರು ಗರಿಷ್ಠ ಸ್ವಾವಲಂಬಿಯಾಗುವ ರೀತಿಯಲ್ಲಿ ನೀಡಬೇಕು. ಸ್ವಂತ ಮನೆ, ಗೃಹೋಪಕರಣಗಳು, ಸೇವಕ, ಕೆಲವೊಮ್ಮೆ ವಾಹನವಿರುವಾತನೂ ಬಡವ ಅಥವಾ ದರಿದ್ರನ ವ್ಯಾಖ್ಯೆಗೆ ಸೇರಬಾರದೆಂದಿಲ್ಲ. ಆತನಿಗೆ ಕುಟುಂಬದ ಆಹಾರ, ವಸ್ತ್ರ, ಚಿಕಿತ್ಸೆ ಶಿಕ್ಷಣ ಇತ್ಯಾದಿಗಳ ಬೇಡಿಕೆಯಿರಬಹುದು. ಸಾವಿರಾರು ದಿರ್ಹಮ್ ಬೆಲೆಯ ಮನೆ, ಸೇವಕ, ಕುದುರೆಗಳಿರುವವರಿಗೂ ಪ್ರವಾದಿಯ ಅನುಯಾಯಿಗಳು ಝಕಾತ್ ನೀಡಿದ್ದರು. ಕೃಷಿ ಭೂಮಿ ಮತ್ತು ಕೃಷಿಯಿದ್ದರೂ ಜೀವನ ನಿರ್ವಹಣೆಗೆ ಸಾಕಾಗದಿದ್ದರೆ, ಆತನು ಝಕಾತ್‌ಗೆ ಅರ್ಹನಾಗಿರುತ್ತಾನೆ. ಒಟ್ಟಿನಲ್ಲಿ ಯಾವುದೇ ಆದಾಯ ಮಾರ್ಗವಿಲ್ಲದವರಿಗೆ ಮಾತ್ರವಲ್ಲ, ಇರುವ ಆದಾಯವು ತನ್ನ ಮತ್ತು ಕುಟುಂಬದ ಖರ್ಚು ವೆಚ್ಚಗಳಿಗೆ ಸಾಕಾಗದವರಿಗೂ ಝಕಾತ್ ನೀಡಬಹುದಾಗಿದೆ. ಆದರೆ ಆರೋಗ್ಯವಿದ್ದರೂ ಉದ್ಯೋಗಕ್ಕೆ ಹೋಗದೆ ಕೇವಲ ನಮಾಝ್, ಉಪವಾಸ, ಕುರ್‌ಆನ್ ಪಾರಾಯಣ, ದಿಕ್ರ್‌ನಲ್ಲಿ ದಿನ ಕಳೆಯುವವರಿಗೆ ಝಕಾತ್ ನೀಡಬಾರದೆಂದು ಕರ್ಮಶಾಸ್ತ್ರಜ್ಞರು ನಿಷ್ಕರ್ಷಿಸಿದ್ದಾರೆ. ಬಡತನ ನಿವಾರಣೆಯಾಗಿ ಶಾಶ್ವತ ಸ್ವಾವಲಂಬನೆ ಸಾಧಿಸುವ ತನಕ ಝಕಾತ್ ನೀಡಬೇಕೆಂದು ಇಸ್ಲಾಮೀ ಶರೀಅತ್ ಆದೇಶಿಸುತ್ತದೆ. ಅರ್ಥಾತ್, ಯಾವುದಾದರೂ ವೃತ್ತಿನಿರತನಿಗೆ, ಅದರಿಂದ ಜೀವನ ಸಾಗಿಸಲು ಮತ್ತು ಅದನ್ನು ಮುಂದುವರಿಸಿ ಅಭಿವೃದ್ಧಿಗೊಳಿಸಲು ಅಗತ್ಯವಿರುವ ಉಪಕರಣ ಮತ್ತು ಅವಕಾಶವನ್ನು ಒದಗಿಸಬೇಕು. 'ನೀವು ನೀಡಿದರೆ



ಅವರನ್ನು ಸ್ವಾವಲಂಬಿಗೊಳಿಸಿರಿ' ಎಂದು ಉಮರ್(ರ) ಹೇಳಿದ್ದರು. 'ನಾನು ಓರ್ವರಿಗೆ ಸದಕಾ ನೀಡುತ್ತಲೇ ಇರುತ್ತೇನೆ. ಅವರಿಗೆ 100 ಒಂಟೆಯಿದ್ದರೂ ಸರಿ' ಎಂದೂ ಅವರು ಹೇಳಿದ್ದರು. ಸ್ವಾವಲಂಬನೆಯ ಅವಧಿಯ ಬಗ್ಗೆಯೂ ಕರ್ಮಶಾಸ್ತ್ರಜ್ಞರಲ್ಲಿ ಭಿನ್ನಾಭಿಪ್ರಾಯವಿದೆ. ಒಂದು ವರ್ಷ ಸ್ವಯಂ ಪ್ರಾಪ್ತಿಗಿರುವ ಮೊತ್ತ ನೀಡಿದರೆ ಸಾಕು. ಮುಂದಿನ ವರ್ಷ ಪುನಃ ನೀಡಬಹುದೆಂದು ಒಂದು ವಿಭಾಗವು ಹೇಳುತ್ತದೆ. ಇನ್ನೊಂದು ವಿಭಾಗವು ಆಯುಷ್ಕಾಲ ಪರ್ಯಂತ ಸ್ವಾವಲಂಬಿಯಾಗಲು ನೀಡಬೇಕೆಂದು ಅಭಿಪ್ರಾಯಪಟ್ಟಿವೆ. ಸಮಾಜದ ಈಡೇರಿಸಬೇಕಾದ ಪ್ರಾಥಮಿಕ ಬೇಡಿಕೆಗಳಲ್ಲಿ ವಿವಾಹವೂ ಸೇರಿದೆ. ಖಲೀಫ ಉಮರ್ ಬಿನ್ ಅಬ್ದುಲ್ ಅಝೀಝ್‌ರು ಝಕಾತ್‌ಗೆ ಅರ್ಹರಾದ ಯಾರಾದರೂ ಉಳಿದಿದ್ದಾರೆಯೇ ಎಂದು ವಿಚಾರಿಸುತ್ತಾ ಯಾರು ಬಡವರಿದ್ದಾರೆ, ಸಾಲಗಾರರಿದ್ದಾರೆ, ವಿವಾಹವಾಗಬೇಕಾದವರಿದ್ದಾರೆ, ಎಲ್ಲರನ್ನೂ ನಾನು ಸಂಪನ್ನಗೊಳಿಸುವುದಾಗಿ ಸಾರುತ್ತಿದ್ದರು.

ಒಟ್ಟಿನಲ್ಲಿ, ಝಕಾತ್‌ನ ಉದ್ದೇಶವು ಬಡ ನಿರ್ಗತಿಕರಿಗೆ ಕೆಲವು ನಾಣ್ಯಗಳನ್ನು ಎಸೆದು ಬಿಡುವುದಲ್ಲ; ಭೂಮಿಯಲ್ಲಿ ದೇವನ ಪ್ರತಿನಿಧಿ ಮತ್ತು ಅವನು ವಿಶೇಷವಾಗಿ ಗೌರವಿಸಿರುವ ಮಾನವರಿಗೆ ಜಿಪುಣತೆ ಮತ್ತು ಆಡಂಬರಗಳ ಮಧ್ಯದ ನ್ಯಾಯೋಚಿತ ಮತ್ತು ಸ್ವಾಭಿಮಾನದ ಜೀವನ ಮಟ್ಟವನ್ನು ಒದಗಿಸುವುದಾಗಿದೆ. ಹೀಗೆ ಝಕಾತ್, ಕನಿಷ್ಠ ಸ್ವಾವಲಂಬನೆ ಮತ್ತು ಸ್ವಾಯತ್ತತೆಯನ್ನು ಸಾಧಿಸಿ, ಸಾಮಾಜಿಕ ಭದ್ರತೆ ಮತ್ತು ಸಾಮಾಜಿಕ ನ್ಯಾಯವನ್ನು ಸಾಕಾರಗೊಳಿಸಿ, ಆ ಜೀವನ ಮಟ್ಟಕ್ಕೆ ತಲುಪುವ ಮೂಲ ಆದಾಯ ಮಾರ್ಗವಾಗಿದೆ. ವ್ಯಕ್ತಿಗಳ ದೇವ ಭಯ, ಪರಲೋಕ ಪ್ರಜ್ಞೆ, ಸಮಾಜದ ನೈತಿಕ ಆತ್ಮಸಾಕ್ಷಿ, ಹಕ್ಕು ಪ್ರಜ್ಞೆ, ಸರಕಾರದ ದಂಡಸಂಹಿತೆ, ಶಿಕ್ಷಾಕ್ರಮ, ಒಟ್ಟು ಸೇರಿ ಎಲ್ಲ ಕಾಲಗಳಿಗೂ ಲಭ್ಯತೆಯನ್ನು ಖಾತ್ರಿಪಡಿಸುವ ಶಾಶ್ವತ ಆರ್ಥಿಕ ಮೂಲ! ಹೌದು ಸಾಮಾಜಿಕ ಭದ್ರತೆಯ ಬೆನ್ನೆಲುಬು, ಅದೇ ಝಕಾತ್.

**ಝಕಾತ್ ಮತ್ತು ಸಂಸ್ಕರಣೆ**

ಇನ್ನೊಂದರ್ಥದಲ್ಲಿ, ಝಕಾತ್ ಆರ್ಥಿಕ ಕರ್ತವ್ಯವಾಗಿದೆ. ಅದು ಏಕಕಾಲದಲ್ಲಿ ಆರಾಧನೆ ಮತ್ತು ಸಾಮಾಜಿಕ ಕರ್ತವ್ಯವೂ ಆಗಿದೆ. ಈ ವೈಶಿಷ್ಟ್ಯದಿಂದಲೇ ಅದಕ್ಕೆ ಝಕಾತ್ ಎಂಬ ಹೆಸರು ಬಂದಿದೆ. ಸಂಸ್ಕರಣೆ, ವೃದ್ಧಿ, ಬೆಳವಣಿಗೆ ಎಂಬ ಅರ್ಥಗಳಿವೆ. ಆ ಆರ್ಥಿಕ ಹೊಣೆಗಾರಿಕೆಯನ್ನು ಈಡೇರಿಸುವ ಮೂಲಕ ಮನಸ್ಸಿನ ಸಂಸ್ಕರಣೆಯನ್ನು ಆ ಮೂಲಕ ಸೂಚಿಸಲಾಗಿದೆ. ಅದು ಸ್ವಾರ್ಥದಿಂದ ಮನಸ್ಸನ್ನು ಶುದ್ಧೀಕರಿಸುತ್ತದೆ. ಮಾನವನಿಗೆ ಹಣವು ಬಹಳ ಪ್ರಿಯವಾಗಿದೆ. ಆರ್ಥಿಕ ಕರ್ತವ್ಯವಾಗಿರುವ ಝಕಾತ್ ಕೊಡುವುದರಿಂದ, ಹಣವು ಶುದ್ಧವಾಗಿ ಅದನ್ನು ಧರ್ಮ ಸಮ್ಮತಗೊಳಿಸುತ್ತದೆ. ವಸ್ತುತ ಝಕಾತ್; ಸಮಾಜದ ದುರ್ಬಲ ವಿಭಾಗಗಳಿಗೆ ಅವರ ಜೀವನಾವಶ್ಯಕತೆ ಪೂರೈಕೆಯನ್ನು ಖಾತ್ರಿಪಡಿಸುವುದಕ್ಕಾಗಿ ವ್ಯಕ್ತಿಗಳಿಗೆ ನೀಡಲಾದ ಹೊಣೆಗಾರಿಕೆಯಾಗಿದೆ. ಸಂಪತ್ತು ಶ್ರೀಮಂತರಲ್ಲಿಯೇ ಶೇಖರವಾಗಬಾರದೆಂಬ ಇಸ್ಲಾಮಿನ ಮೂಲ ದೃಷ್ಟಿಕೋನವು ಝಕಾತ್‌ನಿಂದಲೇ ಬಹುವಂಶ ಸಾಕಾರವಾಗುತ್ತದೆ. ಸಾಧ್ಯವಾದಷ್ಟು ಸ್ವಪ್ರಯತ್ನದಿಂದ ಮತ್ತು ಉಳಿದವರ ಸಹಾಯದಿಂದ ಎಲ್ಲರ ಬೇಡಿಕೆಗಳು ಈಡೇರಬೇಕೆಂದು ಇಸ್ಲಾಮ್ ಬಯಸುತ್ತದೆ.

ಅದು ಶ್ರೀಮಂತನು ತೋರುವ ಔದಾರ್ಯವಲ್ಲ. ಕಡ್ಡಾಯ ಆರ್ಥಿಕ ಕರ್ತವ್ಯ ಮತ್ತು ಬಡವರ ಕಾನೂನುಬದ್ಧ ಹಕ್ಕಾಗಿದೆ. ಶ್ರೀಮಂತರೆಲ್ಲರೂ ಸಹಭಾಗಿಯಾಗಬಹುದಾದ ರೀತಿಯಲ್ಲಿ ನಿಸಾಬ್ (ಝಕಾತ್ ಕಡ್ಡಾಯವಾಗುವ ಪ್ರಮಾಣ) ನಿರ್ಣಯಿಸಲಾಗಿದೆ.

ಸ್ವಪ್ರಯತ್ನದಿಂದ ಕಡಿಮೆಯಾಗಿರುವುದನ್ನು ಭರ್ತಿಗೊಳಿಸುವುದೇ ಝಕಾತ್‌ನ ಉದ್ದೇಶವಾಗಿದೆ. ಅದು ಸಂಪತ್ತು ಶ್ರೀಮಂತರಲ್ಲಿಯೇ ರಾಶಿ ಬೀಳದಂತೆಯೂ ಮಾಡುತ್ತದೆ. ಇಸ್ಲಾಮಿನಲ್ಲಿ ವ್ಯಕ್ತಿಗಳ ದುಡಿಯುವ ಗುಣ ಮತ್ತು ಸಮಾಜದ ಹಿತ ರಕ್ಷಣೆಯ ಭಾವವು ಏಕಪ್ರಕಾರ ಸಂರಕ್ಷಿಸಲ್ಪಡುತ್ತದೆ. ಝಕಾತ್, ಬಡ್ಡಿಯನ್ನು ಅನಿವಾರ್ಯಗೊಳಿಸದಿರುವ ಮತ್ತು ಸಹಾಯ ಸಹಕಾರದಲ್ಲಿರುವ ಸಮಾಜದ ಆರ್ಥಿಕ ಬುನಾದಿಯಾಗಿದೆ.

# ಮೌಲಾನಾ ಕಾಲಮ್

## ಸಲಾಮ್ ಹೇಳುವುದು- 1



ಮೌಲಾನ ಯಹ್ಯಾ ತಂಙಳ್ ಮದನಿ

ನಿರೂಪಣೆ: ಸಲೀಮ್ ಬೋಳಂಗಡಿ

ಇಮಾಮ್ ಬುಖಾರಿಯವರ(ರ) ಸಹೀಹ್‌ನಲ್ಲಿ (ಹದೀಸ್ ಸಂಖ್ಯೆ 1336) ಹೀಗಿದೆ: ಅಬೂ ಹುರೈರಾ(ರ) ಹೀಗೆ ವರದಿ ಮಾಡಿದ್ದಾರೆ- ಪ್ರವಾದಿಯವರು(ಸ) ಹೇಳಿದರು, "ಅಲ್ಲಾಹನು ಮಾನವ ಸಮೂಹದಲ್ಲಿ ಪ್ರಥಮವಾಗಿ ಆದಮ್‌ರನ್ನು(ಅ) ಸೃಷ್ಟಿಸಿದನು. ಅವರ ಎತ್ತರ ಸರಿಸುಮಾರು 77 ಅಡಿ ಆಗಿತ್ತು. ಸೃಷ್ಟಿಸಿದ ಕೂಡಲೇ ದೇವಚರರನ್ನು ತೋರಿಸುತ್ತಾ, "ನೋಡು ಆದಮ್, ಅಲ್ಲಿ ಕಾಣುತ್ತಿರುವ ಮಲಾಯಿಕರಿಗೆ (ದೇವಚರರು) ಸಲಾಮ್ ಹೇಳು ಮತ್ತು ಅವರು ನಿನಗೆ ಉತ್ತರಿಸುವುದನ್ನು ಗಮನವಿಟ್ಟು ಆಲಿಸು" ಎಂದು ಅಲ್ಲಾಹನು ಆಜ್ಞಾಪಿಸಿದನು. ಅದರಂತೆ ಅವರು ಮಲಾಯಿಕರಿಗೆ ಸಲಾಮ್ ಹೇಳಿದಾಗ ಅವರು, "ವಅಲೈಕುಮುಸ್ಸಲಾಮ್ ವರಹ್ಮತುಲ್ಲಾಹಿ ವಬರಕಾತುಹು" ಎಂದು ಉತ್ತರಿಸಿದರು. "ಅಸ್ಸಲಾಮು ಅಲೈಕುಮ್" ಎಂಬ ಅಭಿವಾದ್ಯವನ್ನು ಹೀಗೆ ಆದಿ ಮಾನವ ಆದಮ್‌ರಿಗೆ(ಅ) ದೇವಚರರ ಸಮ್ಮುಖದಲ್ಲಿ ಅಲ್ಲಾಹನು ಕಲಿಸಿದನು. ಮನುಷ್ಯನ ಸೃಷ್ಟಿಯ ಜೊತೆಗೇ ಪರಸ್ಪರ ವ್ಯವಹಾರದ ಮಾತುಕತೆಯ ನಿಯಮಾವಳಿಗಳನ್ನು ಕಲಿಸುವುದು ಇದರ ಉದ್ದೇಶವಾಗಿದೆ. ಆದಿ ಮಾನವನ ಮೊದಲ ಮಾತು ಸಲಾಮ್ ಆಗಿತ್ತು. ಆ ಕಾರಣದಿಂದ ಪ್ರವಾದಿವರ್ಯರು(ಸ) ಹೇಳಿದರು, ನೀವು ಪರಸ್ಪರ ಭೇಟಿಯಾದಾಗ ಮಾತು ಪ್ರಾರಂಭಿಸುವ ಮೊದಲು ಸಲಾಮ್ ಹೇಳಿರಿ. (ಅಸ್ಸಲಾಮ್ ಕಬ್‌ಲುಲ್ ಕಲಾಮ್)

ಓರ್ವ ವ್ಯಕ್ತಿ ತನ್ನ ಸ್ನೇಹಿತನನ್ನು ಕಂಡಾಗ ನಿನ್ನ ಮೇಲೆ ದೇವನ ಶಾಂತಿ, ಕರುಣೆ ವರ್ಷಿಸುತ್ತಿರಲಿ ಎಂದು ಹಾರೈಸುತ್ತಾನೆ. ಇದೊಂದು ಪ್ರಾರ್ಥನೆಯೂ ಆಗಿದೆ. ಆ ಕಾರಣದಿಂದಲೇ ಪ್ರವಾದಿವರ್ಯರು(ಸ), "ಜಗತ್ತಿನಲ್ಲಿ ಸಲಾಮ್ ವ್ಯಾಪಿಸಿರಿ. ಸ್ವರ್ಗ ಪ್ರವೇಶಿಸಲು ಅದು ಕಾರಣವಾಗಬಹುದು ಎಂದಿದ್ದಾರೆ. ಪ್ರವಾದಿಯವರು(ಸ) ಹೇಳಿದರು, "ನೀವು ಸ್ವರ್ಗ ಪ್ರವೇಶಿಸಲು ಬಯಸುವುದಾದರೆ ನಿಮ್ಮಲ್ಲಿ ಈಮಾನ್ ಇರಬೇಕು. ಈಮಾನ್ ಇರಬೇಕಾದರೆ ಪರಸ್ಪರ ಪ್ರೀತಿಸಬೇಕು. ಪರಸ್ಪರ ಪ್ರೀತಿ ಭ್ರಾತೃತ್ವ ಉಂಟಾಗಬೇಕಾದರೆ ಪರಸ್ಪರ ಸಲಾಮ್ ಹೇಳಬೇಕು." ಒಮ್ಮೆ ಪ್ರವಾದಿಯವರ(ಸ) ಬಳಿಗೆ ಓರ್ವ ಅನುಯಾಯಿ ಬಂದು ಇಸ್ಲಾಮ್‌ನಲ್ಲಿ ಹೆಚ್ಚು ಪುಣ್ಯಕ್ಕೆ ಅರ್ಹವಾದ ಕಾರ್ಯ ಯಾವುದು ಎಂದು ಕೇಳಿದಾಗ, "ದೀನ ದಲಿತರಿಗೆ ಆಹಾರ ನೀಡಿರಿ. ಪರಿಚಿತರಿಗೂ ಅಪರಿಚಿತರಿಗೂ ಸಲಾಮ್ ಹೇಳಿರಿ (ಆತ ಸತ್ಯವಿಶ್ವಾಸಿಯಾಗಿರಬೇಕು) ಎಂದರು.

ಮುಂಜಾನೆ ಕೇಳಿ ಬರುವ ಗುಡ್ ಮಾರ್ನಿಂಗ್ ಹಾಗೂ ಸಲಾಮ್‌ನ ಮಹತ್ವದ ಬಗ್ಗೆ ನಮಗೆ ಅರಿವಿದೆ. ಒಬ್ಬ ಬರೀ ಹೊಟ್ಟೆಯಲ್ಲಿ ಬೆಳಿಗ್ಗೆ ಎದ್ದು ಬರುವಾಗ ಗುಡ್ ಮಾರ್ನಿಂಗ್ ಎಂದು ಹೇಳಿದರೆ ಅವನಿಗೆ ಅದರಿಂದ ಏನೂ ಸಿಗದು. ಆ ವೇಳೆ ಅದು ಆತನಿಗೆ ಗುಡ್‌ಗಿಂತ ಬ್ಯಾಡೇ ಆಗಿದೆ. ಕಾರಣ ಆತ ಹಸಿದಿದ್ದಾನೆ. ಅದೇ ಸಮಯ ಅನ್ನಾಹಾರಗಳನ್ನು ನೀಡುವ ಅಲ್ಲಾಹನ ಕೃಪೆ ನಿನ್ನ ಮೇಲೆ ಇರಲಿ ಎಂಬ ಹಾರೈಕೆಯ ಪ್ರಾರ್ಥನೆಯು ಹಸಿದ ಹೊಟ್ಟೆಯನ್ನು ಅಲ್ಪಮಟ್ಟಿಗೆ ತಣಿಸಬಹುದು. ಇದು ವಿಶ್ವಾಸವನ್ನು ಅವಲಂಬಿಸಿರುತ್ತದೆ.

ಕುರ್‌ಆನ್‌ನಲ್ಲಿ ಹೀಗಿದೆ: "ಓ ಪ್ರವಾದಿಯವರೇ(ಸ)! ನಮ್ಮ ಸೂಕ್ತಗಳಲ್ಲಿ ವಿಶ್ವಾಸವಿರಿಸುವವರು ನಿಮ್ಮ ಬಳಿ ಬಂದಾಗ ಅವರಿಗೆ ಅಸ್ಸಲಾಮು ಅಲೈಕುಮ್ ಎಂದು ಹೇಳಿರಿ. (ಅಲ್ ಅನ್‌ಆಮ್:54)

"ನಿಮಗೆ ಯಾರಾದರೂ ಸಾದರದಿಂದ ಸಲಾಮ್ ಹೇಳಿದರೆ ಅದಕ್ಕಿಂತಲೂ ಉತ್ತಮ ರೀತಿಯಿಂದ ಅಥವಾ ಕನಿಷ್ಠ ಪಕ್ಷ ಅದೇ ರೀತಿಯಲ್ಲಿ ಪ್ರತಿ ಸಲಾಮ್ ಹೇಳಿರಿ. ನಿಶ್ಚಯವಾಗಿಯೂ ಅಲ್ಲಾಹ್ ಸಕಲ ವಿಷಯಗಳ ಲೆಕ್ಕಪರಿಶೋಧಿಸುವವನಾಗಿರುತ್ತಾನೆ." (ಅನ್ನಿಸಾ: 86)

ಸಲಾಮ್ ಗತ ಪ್ರವಾದಿಗಳ ಕಾಲದಲ್ಲಿ ಇತ್ತು ಎಂಬುದನ್ನು ಕುರ್‌ಆನ್ ವಿವರಿಸುತ್ತದೆ. ನೂಹ್(ಅ), ಇಬ್ರಾಹೀಮ್(ಅ), ಇಸ್ಹಾಕ್(ಅ), ಯಅ್‌ಕೂಬ್(ಅ), ಝಕರಿಯ್ಯ(ಅ), ಈಸಾ(ಅ)ರ ವರೆಗೆ ಬಂದ ಎಲ್ಲ ಪ್ರವಾದಿಗಳು ಸಲಾಮ್ ಹೇಳುತ್ತಾ ಅದಕ್ಕೆ ಉತ್ತರಿಸುತ್ತಾ ಇದ್ದರು.

ಇಸ್ಲಾಮ್ ಹಾಗೂ ಸಲಾಮ್‌ಗೆ ನಿಕಟ ಸಂಬಂಧವಿದೆ. ಅಲ್ಲಾಹನು ನಮ್ಮನ್ನು ದಾರುಸ್ಸಲಾಮ್ (ಶಾಂತಿ ಗೃಹದ) ಕಡೆಗೆ ಆಹ್ವಾನಿಸುತ್ತಾನೆ. (ಸೂರಃ ಯೂನುಸ್: 25)

"ದೇವಚರರು ಅವರ ಸ್ವಾಗತಕ್ಕಾಗಿ ಎಲ್ಲಾ ಬಾಗಿಲುಗಳಿಂದಲೂ ಬರುವರು. ಅಸ್ಸಲಾಮು ಅಲೈಕುಮ್! ನೀವು ವಹಿಸಿದ ಸಹನೆಯ ಪ್ರತಿಫಲ ಇದು. ಅದೆಷ್ಟು ಉತ್ತಮವಿದೆ ಈ ಶಾಶ್ವತ ಭವನ." (ಕುರ್‌ಆನ್ 13: 23-24)

ದೇವಭಯ ಭಕ್ತಿ ಉಳ್ಳವರಿಗೆ ಅಲ್ಲಾಹನು ಈ ರೀತಿ ಪ್ರತಿಫಲ ನೀಡುತ್ತಾನೆ. ಆ ದೇವನಿಷ್ಠರ ಆತ್ಮಗಳನ್ನು ದೇವಚರರು ಸೆರೆ ಹಿಡಿಯುವಾಗ, 'ಸಲಾಮುನ್ ಅಲೈಕುಮ್' ಎನ್ನುತ್ತಾ ನಿಮ್ಮ ಸತ್ಕರ್ಮಗಳ ಫಲವಾಗಿ ಸ್ವರ್ಗ ಪ್ರವೇಶ ಮಾಡಿರಿ ಎಂದು ಹೇಳುತ್ತಾರೆ. (16:31-32)

ಅಲ್ಲಿ (ಸ್ವರ್ಗೋದ್ಯಾನ) ಅವರು ತಮ್ಮ ಪ್ರಭುವಿನ ಅನುಜ್ಞೆಯಿಂದ ಸದಾ ವಾಸಿಸುತ್ತಿರುವರು. ಅಲ್ಲಿ ಅವರನ್ನು ಶಾಂತಿಯ ಶುಭಾಶಯಗಳೊಂದಿಗೆ ಸ್ವಾಗತಿಸಲಾಗುವುದು. (ಇಬ್‌ರಾಹೀಮ್: 23)

ಸಲಾಮ್ ಮುಸ್ಲಿಮರ ರಕ್ಷಣಾ ಕವಚವಾಗಿದೆ. ಯಾವ ರೀತಿಯಿಂದಲೂ ಅದನ್ನು ತಡೆಯುವುದಾಗಲೀ ಮೊಟಕುಗೊಳಿಸುವುದಾಗಲೀ ಸಾಧ್ಯವಿಲ್ಲ. ಒಂದು ವೇಳೆ ಯಾರಿಗಾದರೂ ಸಲಾಮ್ ಹೇಳಬಾರದೆಂದಾದಲ್ಲಿ ಅದರ ನೀತಿ ನಿಯಮಗಳ ಕುರಿತು ಪ್ರವಾದಿ ಚರ್ಯೆಯಿಂದ ತಿಳಿಯಬಹುದಾಗಿದೆ. ಮುಂದಿನ ಸಂಚಿಕೆಗಳಲ್ಲಿ ಆ ಕುರಿತು ವಿವರಿಸೋಣ(ಇ.ಅ.). ಸಲಾಮನ್ನು ಹೆಚ್ಚು ಬಲಪಡಿಸಲು ನಾವು ನೋಡಬೇಕು. ಇಬ್ರಾಹೀಮ್‌ರು(ಅ) ತನ್ನ ಬಹುದೇವಾರಾಧಕ ತಂದೆಗೆ ಸಲಾಂ ಹೇಳಿದ್ದಾಗಿ ಕುರ್‌ಆನ್ ವಿವರಿಸುತ್ತದೆ. ಸಲಾಮ್ ಹೇಳುತ್ತಾ ಜನರನ್ನು ಹೆಚ್ಚು ನಿಕಟಗೊಳಿಸಬೇಕೇ ಹೊರತು ಹೇಳದೆ ದೂರ ಸರಿಸುವುದು ಸರಿಯಲ್ಲ ಎಂಬುದನ್ನು ಹಿಂದಿನ ಪ್ರವಾದಿಗಳ ಜೀವನ ವೃತ್ತಾಂತವನ್ನು ಅಭ್ಯಸಿಸಿದಾಗ ತಿಳಿದುಬರುತ್ತದೆ.

# ಹದೀಸ್: ಸಂದೇಹ ನಿವಾರಿಸಿ

ಎ.ಎ. ಕಲ್ಲಾಪು

**● ಈ ಹಿಂದೆ ಒಂದು ಹದೀಸ್‌ನ ಬಗ್ಗೆ ಸಂದೇಹ ವ್ಯಕ್ತಪಡಿಸಿ ಪ್ರಶ್ನೆ ಕಳಿಸಿದ್ದೆ. ಅದಕ್ಕೆ ಸೂಕ್ತ ಉತ್ತರವನ್ನು 'ಮುಜೀಬ್' ನೀಡಿದ್ದಾರೆ. ಅದರಿಂದ ನನ್ನ ಸಂದೇಹ ನಿವಾರಣೆಯಾಗಿದೆ. ಇಲ್ಲಿ ಇನ್ನೊಂದು ಹದೀಸ್‌ನ ಕುರಿತು ಸಂದೇಹ ನಿವಾರಿಸಬೇಕೆಂದು ಮುಜೀಬ್‌ರಲ್ಲಿ ವಿನಂತಿಸುತ್ತೇನೆ.**

**ಸುಹೈಲ್ ಬಿನ್ ಸಅದ್(ರ) ವರದಿ ಮಾಡುತ್ತಾರೆ– ನಾನು ಕೆಲವು ಜನರೊಂದಿಗೆ ಪ್ರವಾದಿಯವರ(ಸ) ಬಳಿ ಕುಳಿತಿದ್ದೆ. ಅಷ್ಟರಲ್ಲಿ ಓರ್ವ ಮಹಿಳೆ ಬಂದಳು. ಆಕೆ–ಪ್ರವಾದಿವರ್ಯರೇ! ನಾನು ನನ್ನನ್ನು ತಮಗೆ ಹಿಬಾ ಮಾಡುತ್ತೇನೆ ಎಂದು ಹೇಳಿದಳು. ಪ್ರವಾದಿವರ್ಯರು(ಸ) ಆಕೆಗೆ ಯಾವುದೇ ಉತ್ತರ ನೀಡಲಿಲ್ಲ. ಸ್ವಲ್ಪ ಹೊತ್ತಿನ ನಂತರ ಓರ್ವ ವ್ಯಕ್ತಿ ಎದ್ದು ನಿಂತು ಹೇಳಿದರು– "ಅಲ್ಲಾಹನ ಸಂದೇಶವಾಹಕರೆ! ನನ್ನೊಂದಿಗೆ ಆಕೆಯ ನಿಕಾಹ್ ಮಾಡಿರಿ." ಪ್ರವಾದಿ(ಸ), ನಿನ್ನ ಬಳಿ (ಮಹ್ರ್ ನೀಡಲು) ಏನಿದೆ ಎಂದು ಕೇಳಿದಾಗ ಆತ, ಏನೂ ಇಲ್ಲವೆಂದು ಉತ್ತರಿಸಿದನು. ಪ್ರವಾದಿ(ಸ) ಹೇಳಿದರು– ಹೋಗಿ ಹುಡುಕು. ಏನಿಲ್ಲದಿದ್ದರೂ ಕಬ್ಬಿಣದ ಉಂಗುರವಾದರೂ ಸರಿ. ಆತ ಹೋಗಿ ಹುಡುಕಾಡಿದ ಸ್ವಲ್ಪ ಹೊತ್ತಿನ ಬಳಿಕ ಬಂದು, ಪ್ರವಾದಿಯವರೆ! ನನಗೇನೂ ಸಿಗಲಿಲ್ಲ. ಕಬ್ಬಿಣದ ಉಂಗುರ ಕೂಡಾ. ನನ್ನ ಬಳಿ ನನ್ನ ಈ ಲುಂಗಿಯೊಂದಿದೆ. ಅದರ ಅರ್ಧವನ್ನು ನಾನು ಆಕೆಗೆ ನೀಡುತ್ತೇನೆ. ಪ್ರವಾದಿ(ಸ) ಹೇಳಿದರು– ಇದು ಯಾವ ಕೆಲಸಕ್ಕೆ? ನೀನು ಅದನ್ನು ಉಟ್ಟರೆ ನಿನ್ನ ಪತ್ನಿ ನಗ್ನಳಾದಾಳು. ಅವಳು ಉಟ್ಟರೆ ನೀನು ನಗ್ನನಾಗುವೆ." ತರುವಾಯ ಅವರು ಅವನೊಡನೆ ನಿನಗೆ ಕುರ್‌ಆನಿನ ಯಾವುದಾದರೂ ಭಾಗ ಬಾಯಿಪಾಠವಿದೆಯೇ ಎಂದು ಕೇಳಿದರು. ಆತ ಹೇಳಿದ, ಹೌದು, ಇಂತಿಂತಹ ಅಧ್ಯಾಯಗಳು ಬಾಯಿಪಾಠವಿದೆ. ಪ್ರವಾದಿ(ಸ) ಹೇಳಿದರು; ಹೋಗು ನಾನು ಕುರ್‌ಆನಿನ ಆ ಸೂರಃಗಳ ಬದಲಿಗೆ ಈ ಮಹಿಳೆಯನ್ನು ನಿನಗೆ ವಿವಾಹ ಮಾಡಿಕೊಟ್ಟೆ. (ಬುಖಾರಿ, ಮುಸ್ಲಿಮ್)**

**ಈ ಹದೀಸ್‌ನಿಂದ ಮೂಡುವ ಸಂದೇಹಗಳೆಂದರೆ,**

**1. ಮಹಿಳೆ ತನ್ನನ್ನು ಪ್ರವಾದಿಗೆ ಅರ್ಪಿಸಿದ್ದಳು. ಪ್ರವಾದಿವರ್ಯರು ಮೌನ ವಹಿಸಿದ ಬಳಿಕ ಸಭಿಕರಲ್ಲೊಬ್ಬನಿಗೆ ಆಕೆಯನ್ನು ವಿವಾಹ ಮಾಡಿಕೊಡುವುದರ ಮರ್ಮವೇನು?**

**2. ಮಹಿಳೆಯ ಅಭಿಪ್ರಾಯವನ್ನು ತಿಳಿಯದೆಯೇ ಪ್ರವಾದಿವರ್ಯರು(ಸ) ವಿವಾಹ ಪ್ರಸ್ತಾಪ ಮಾಡಿದ್ದು ಹೇಗೆ?**

**3. ಪುರುಷನ ಮೇಲೆ ಕಡ್ಡಾಯವಾಗಿರುವ ಮಹಿಳೆಯ ಹಕ್ಕಾಗಿರುವ ಮಹ್ರ್ ಆಗಿ ಕಬ್ಬಿಣದ ಉಂಗುರದಂತಹ ಕ್ಷುಲ್ಲಕ ವಸ್ತುವನ್ನು ಕೊಡಲು ಹೇಳಿದ್ದಕ್ಕೆ ಶರೀಅತ್ ಅನುಮತಿಸುತ್ತದೆಯೇ!**

**4. ಆ ವ್ಯಕ್ತಿ ಮಹ್ರ್ ಆಗಿ ತಾನುಟ್ಟ ಲುಂಗಿಯನ್ನು ನೀಡ ಹೊರಟಿರುವುದು ಹಾಸ್ಯಾಸ್ಪದವಲ್ಲವೆ!**

**5. ಆ ವ್ಯಕ್ತಿ ಅಷ್ಟೂ ದರಿದ್ರರಾಗಿದ್ದರೆ ತನ್ನ ಪತ್ನಿಗೆ ಜೀವನಾಂಶ ಹೇಗೆ ಕೊಡುವನು? ಅಂತಹ ವ್ಯಕ್ತಿಗೆ ಅಂದರೆ ವಿವಾಹದ ಹೊಣೆಗಾರಿಕೆಯನ್ನು ವಹಿಸುವ ಸಾಮರ್ಥ್ಯವಿಲ್ಲದವನು ಉಪವಾಸ ಆಚರಿಸಲಿ, ಅದು ಲೈಂಗಿಕಾಸಕ್ತಿಯನ್ನು ಕಡಿಮೆಗೊಳಿಸುತ್ತದೆ (ಬುಖಾರಿ, ಮುಸ್ಲಿಮ್) ಎಂದು ಉಪದೇಶಿಸಬಹುದಿತ್ತಲ್ಲವೆ!**

**6. ಇಂತಹ ಪರಿಸ್ಥಿತಿಯಲ್ಲಿ ಮಹ್ರ್‌ಗೆ ಮುವಜ್ಜಲ್(ಮುಂದೆ ಕೊಡುವ ವಾಗ್ದಾನದೊಂದಿಗೆ ನಿಶ್ಚಯಿಸುವ) ಸೂಕ್ತವಾಗಿರಲಿಲ್ಲವೆ? ದಯವಿಟ್ಟು ಗೊಂದಲ ನಿವಾರಿಸಿ.**

❍ ಈ ಹಿಂದಿನ ಹದೀಸ್‌ನಂತೆಯೇ ಈ ಹದೀಸನ್ನೂ ಸರಿಯಾದ ಹಿನ್ನೆಲೆಯಿಂದ ನೋಡಲಾಗಿಲ್ಲ ಎಂದೆನಿಸುತ್ತದೆ. ಈ ಹದೀಸ್‌ನಿಂದ ಸ್ಪಷ್ಟವಾಗುವುದೇನೆಂದರೆ ಲೈಂಗಿಕ ಬಯಕೆಯನ್ನು ಧರ್ಮಸಮ್ಮತ ರೀತಿಯಲ್ಲಿ ಪೂರೈಸಲಿಕ್ಕಾಗಿ ಇಸ್ಲಾಮ್ ನಿಕಾಹ್(ವಿವಾಹ) ಕಡ್ಡಾಯಗೊಳಿಸಿದೆ. ಅದನ್ನು ಆದಷ್ಟು ಸುಲಭ ಮತ್ತು ಸರಳ ಗೊಳಿಸಲಾಗಿದೆ. ನಿಕಾಹ್‌ನಲ್ಲಿ ಮಹಿಳೆಯ ಇಂಗಿತಕ್ಕೆ ಮೂಲಭೂತವಾಗಿ ಮಹತ್ವ ಕಲ್ಪಿಸಲಾಗಿದೆ. ಆಕೆಗೆ ಯಾರ ವಿವಾಹ ಪ್ರಸ್ತಾಪವನ್ನು ಬೇಕಾದರೂ ಒಪ್ಪಿಕೊಳ್ಳಲು ಅಧಿಕಾರವಿದೆ. ಆತನ ಸಾಮಾಜಿಕ ಸ್ಥಾನಮಾನ ಏನೇ ಆಗಿದ್ದರೂ, ಆರ್ಥಿಕವಾಗಿ ಆತ ಎಂತಹವನು ಎಂದು ಪರಿಗಣಿಸಬೇಕೆಂದಿಲ್ಲ. ಆದರೆ ಮಹಿಳೆ ಅದಕ್ಕೆ ಸಿದ್ಧಳಿಲ್ಲವೆಂದಾದರೆ ಆಕೆಯನ್ನು ನಿರ್ಬಂಧಿಸುವಂತಿಲ್ಲ. ಬಹುಶಃ ಈ ಮೂಲಭೂತ ವಿಷಯಗಳತ್ತ ನಿಮ್ಮ ಗಮನ ಹರಿದಿಲ್ಲ. ಬೇರೆಯೇ ಸಂದೇಹಗಳು ಮೂಡಿಬಂದಿವೆ.

ಈ ಹದೀಸ್ ಬುಖಾರಿ, ಮುಸ್ಲಿಮ್, ಅಬೂದಾವೂದ್, ತಿರ್ಮಿದಿ, ನಸಾಈ ಮತ್ತು ಮುವತ್ತಾ ಇಮಾಮ್ ಮಾಲಿಕ್ ಗ್ರಂಥಗಳಲ್ಲಿ ಉಲ್ಲೇಖವಾಗಿವೆ. ಇಮಾಮ್ ಬುಖಾರಿಯವರು ಇದರ ಭಾಗಗಳನ್ನು 14 ಸ್ಥಳಗಳಲ್ಲಿ ವರದಿ ಮಾಡಿದ್ದಾರೆ. ಅದರಿಂದ ಬೇರೆ ಬೇರೆ ವಿಧಿಗಳನ್ನು ಹುಡುಕಿ ತೆಗೆದಿದ್ದಾರೆ. ಕೆಲವು ವಿಧಿಗಳು ಹೀಗಿವೆ.

1. ಆಡಳಿತಾಧಿಕಾರಿ ನಿಕಾಹ್‌ನಲ್ಲಿ ಸ್ತ್ರೀಯ ವಕಾಲತ್ತು ವಹಿಸಬಹುದು.

2. ಕುರ್‌ಆನ್‌ನ ಅಧ್ಯಾಯಗಳು ಬಾಯಿಪಾಠವಿರುವ ಮತ್ತು ಮುಸ್ಲಿಮನಾಗಿರುವ ಬಡ ವ್ಯಕ್ತಿಯ ವಿವಾಹ ಮಾಡಿಕೊಡಬೇಕು.

3. ಬಡ ವ್ಯಕ್ತಿಯ ವಿವಾಹ ಮಾಡಿಕೊಡಬೇಕು. ಏಕೆಂದರೆ ಅಲ್ಲಾಹನು ಹೇಳುತ್ತಾನೆ– ಅವನು ಬಡವನಾಗಿದ್ದರೆ ಅಲ್ಲಾಹನು ತನ್ನ ಅನುಗ್ರಹದಿಂದ ಅವನನ್ನು ಧನಿಕವಾಗಿ ಮಾಡಲೂಬಹುದು.

4. ಸ್ತ್ರೀಯು ಸಚ್ಚಾರಿತ್ರ್ಯವಂತ ಪುರುಷನನ್ನು ವಿವಾಹವಾಗುವ ಬೇಡಿಕೆಯಿಡಬಹುದು.

5. ನಿಕಾಹ್‌ಗಿಂತ ಮುಂಚೆ ಸ್ತ್ರೀಯನ್ನು ನೋಡಬಹುದು.

6. ಪತಿಗೆ ಕುರ್‌ಆನ್ ಕಂಠಪಾಠವಿದ್ದರೆ ಮಹ್ರ್ ಇಲ್ಲದೆಯೂ ಆತನೊಂದಿಗೆ ಸ್ತ್ರೀಯ ವಿವಾಹ ಮಾಡಬಹುದು.

7. ಮಹ್ರ್ ಯಾವುದಾದರು ವಸ್ತುವೂ ಆಗಬಹುದು. ಸಾಮಾನ್ಯ ಕಬ್ಬಿಣದ ಒಂದು ಉಂಗುರವಾದರೂ ಸರಿ.

**ಇನ್ನು, ನಿಮ್ಮ ಸಂದೇಹಗಳ ಬಗ್ಗೆ ವಿಶ್ಲೇಷಿಸೋಣ.**

1. ಪ್ರವಾದಿ(ಸ) ಆ ಮಹಿಳೆಯೊಡನೆ ವಿವಾಹವಾಗಲು ಬಯಸಿಲ್ಲವಾದರೆ, ಆಕೆಯ ಇಂಗಿತವನ್ನು ತಿಳಿಯದೆ ಆಕೆಯನ್ನು ಇನ್ನೊಬ್ಬನಿಗೆ ನಿಕಾಹ್ ಮಾಡಿಕೊಟ್ಟದ್ದು ಏಕೆ ಎಂಬುದು ಅರ್ಥಹೀನ ಪ್ರಶ್ನೆ. ಒಂದು ಹದೀಸ್‌ನಲ್ಲಿ ಈ ವಿಷಯ ವಿವರವಾಗಿ ಹೀಗೆ ಬಂದಿದೆ– ಪ್ರವಾದಿವರ್ಯರು(ಸ) ಆಕೆಯ ಬೇಡಿಕೆಗೆ ಮೌನ ವಹಿಸಿದರು. ಆದರೆ ಆ ಮಹಿಳೆ ಅಲ್ಲೇ ಕುಳಿತಳು. ಸ್ವಲ್ಪ ಹೊತ್ತಿನ ಬಳಿಕ ಆಕೆ ತನ್ನ ಮಾತನ್ನು ಪುನರಾವರ್ತಿಸಿದಳು. ಆಗಲೂ ಪ್ರವಾದಿ(ಸ) ಸುಮ್ಮನಿದ್ದರು. ಇನ್ನೂ ಸ್ವಲ್ಪ ಹೊತ್ತು ಕಳೆದಾಗ ಆಕೆ ಅದೇ ಮಾತನ್ನು ಇನ್ನೊಮ್ಮೆ ಹೇಳಿದಳು. ಆಗಲೂ ಪ್ರವಾದಿಯವರು ಏನೂ ಹೇಳಲಿಲ್ಲ. ಕೆಲವು ವರದಿಗಳಲ್ಲಿ ಪ್ರವಾದಿವರ್ಯರು(ಸ) ನನಗೆ ಈಗ ವಿವಾಹದ ಬಯಕೆಯಿಲ್ಲ ಎಂದು ಸ್ಪಷ್ಟವಾಗಿ ಹೇಳಿದರೆಂದಿದೆ. (ಬುಖಾರಿ) ಆದರೂ ಆ ಮಹಿಳೆ ಅಲ್ಲೇ ಕುಳಿತಿದ್ದಳು. (ಬುಖಾರಿ) ಆದ್ದರಿಂದ ಓರ್ವ ಸಹಾಬಿ ಆಕೆಯೊಂದಿಗೆ ವಿವಾಹವಾಗುವ ಇಚ್ಛೆ ವ್ಯಕ್ತಪಡಿಸಿದರೂ ಪ್ರವಾದಿಯವರು ಆತನೊಡನೆ ಮಹ್ರ್ ಏನು ಕೊಡುವೆನೆಂದು ಕೇಳಿದಾಗ, ನನ್ನ ಬಳಿ ಏನೂ ಇಲ್ಲವೆಂದು ಅವರು ಹೇಳಿದರು. ಪ್ರವಾದಿಯವರು, ಏನಾದರೂ ಹುಡುಕಿ ತಾ ಎಂದು ಹೇಳಿ ಕಳಿಸಿದರು. ಆತ ಹೋಗಿ ಸ್ವಲ್ಪ ಹೊತ್ತಿನ ಬಳಿಕ ಬರಿಗೈಲಿ ಮರಳಿದರು. ಈ ಎಲ್ಲ ವಿದ್ಯಮಾನಗಳು ನಡೆಯುತ್ತಿರುವಾಗಲೂ ಆ ಮಹಿಳೆ ಅಲ್ಲೇ ಕುಳಿತಿದ್ದಳು. ಆ ವ್ಯಕ್ತಿ ದರಿದ್ರನೆಂದು ತಿಳಿದ ಬಳಿಕವೂ ಆಕೆ ತನ್ನ ಇಂಗಿತವನ್ನು ಬದಲಾಯಿಸಲಿಲ್ಲ.

ಪ್ರವಾದಿಯವರು ಯಾವುದೇ ಹಂತದಲ್ಲಿ ಮಹಿಳೆಯ ಅಭಿಪ್ರಾಯವನ್ನು ಕೇಳಿದ್ದರೆಂಬ ವಿಷಯ ಹದೀಸ್‌ನಲ್ಲಿ ಸ್ಪಷ್ಟವಿಲ್ಲವೆಂಬುದು ನಿಜ. ಆದರೆ ಎಲ್ಲ ಹಂತದಲ್ಲೂ ಮಹಿಳೆ ಮೌನವಾಗಿರುವುದು ಆಕೆಯ ಸಮ್ಮತಿಯಾಗಿತ್ತೆಂದು ವಿದ್ಯಮಾನಗಳಿಂದ ವ್ಯಕ್ತವಾಗುತ್ತದೆ. ಓರ್ವ ಮಹಿಳೆ ತುಂಬಿದ ಸಭೆಯಲ್ಲಿ ತನ್ನ ವಿವಾಹದ ಇಚ್ಛೆಯನ್ನು ವ್ಯಕ್ತ ಪಡಿಸಬಲ್ಲಳಾದರೆ, ತನಗಿಷ್ಟವಿಲ್ಲದ ಸಂಬಂಧವನ್ನು ಸ್ಪಷ್ಟವಾಗಿ ನಿರಾಕರಿಸಲಿಕ್ಕೂ ಆಕೆಗೆ ಸಾಧ್ಯ

**ಕೇಳಿದಿರಾ? ಕೇಳಿ**
**ಮುಜೀಬ್**

ವಿತ್ತು. ಆಕೆ ಸುಮ್ಮನೆ ಕುಳಿತು ನಡೆಯುವ ಆಗುಹೋಗುಗಳನ್ನು ನೋಡುತ್ತಾ ಇರುವುದು ಮತ್ತು ಪ್ರವಾದಿವರ್ಯರು ಆಕೆಯ ನಿಕಾಹ್ ನೆರವೇರಿಸಿದ ನಂತರ ತೆಪ್ಪಗೆ ಅತನ ಜೊತೆಯಲ್ಲಿ ಹೋಗುವುದು ಆಕೆಯ ಸಮ್ಮತಿಯ ಸ್ಪಷ್ಟ ಪುರಾವೆಯಾಗಿದೆ. ಮಾತ್ರವಲ್ಲ ಇದು ಪ್ರವಾದಿಯವರ ಮೇಲಿನ ಆಕೆಯ ಪೂರ್ಣ ವಿಶ್ವಾಸವನ್ನೂ ವ್ಯಕ್ತಪಡಿಸುತ್ತದೆ.

ಇನ್ನು ಶರೀಅತ್‌ನಲ್ಲಿ ಮಹ್ರ್‌ನ ಸ್ಥಾನವೇನು, ಅದನ್ನು ಕಡ್ಡಾಯ ಗೊಳಿಸಿರುವುದರಲ್ಲಿ ಯಾವ ಯುಕ್ತಿ ಅಡಗಿದೆ, ಅದರ ಕನಿಷ್ಠ ಪ್ರಮಾಣವೆಷ್ಟು ಎಂಬ ಬಗ್ಗೆ ವಿದ್ವಾಂಸರು ಬಹಳಷ್ಟು ಚರ್ಚೆ ನಡೆಸಿದ್ದಾರೆ. ನಾಲ್ವರು ಕರ್ಮಶಾಸ್ತ್ರ ವಿದ್ವಾಂಸರ ಅಭಿಪ್ರಾಯಗಳು ಪರಸ್ಪರ ಭಿನ್ನವಾಗಿವೆ. ಇಮಾಮ್ ಶಾಫಿಈ ಮತ್ತು ಅಹ್ಮದ್‌ರ ಅಭಿಪ್ರಾಯದಲ್ಲಿ ಕನಿಷ್ಠ ಬೆಲೆಯ ಯಾವುದೇ ವಸ್ತು ಮಹ್ರ್ ಆಗಬಹುದು. ಇಮಾಮ್ ಮಾಲಿಕ್‌ರ ಪ್ರಕಾರ, ಅದರ ಕನಿಷ್ಠ ಪ್ರಮಾಣ ಮೂರು ದಿರ್ಹಮ್ ಆದರೆ, ಅಬೂ ಹನೀಫಾರ ಪ್ರಕಾರ ಅದು ಹತ್ತು ದಿರ್ಹಮ್ ಆಗಿದೆ. ಅಂತೂ ಹದೀಸ್‌ಗಳಿಂದ ಸ್ಪಷ್ಟವಾಗುವುದೇನೆಂದರೆ ಪ್ರವಾದಿಯವರ ಕಾಲದಲ್ಲಿ ಕನಿಷ್ಠ ಬೆಲೆಯ ಅತಿ ತುಚ್ಛ ವಸ್ತು ಕೂಡಾ ಮಹ್ರ್ ಆಗಿ ಪರಿಗಣಿಸಲ್ಪಡುತ್ತಿತ್ತು.

ಪ್ರಸ್ತುತ ಘಟನೆಯಲ್ಲದೆ ಇನ್ನೊಂದು ಘಟನೆಯೂ ಪ್ರವಾದಿಯವರ ಕಾಲದಲ್ಲಿ ನಡೆದಿತ್ತು. ಅದು ಇಲ್ಲಿ ಸಂದರ್ಭೋಚಿತವಾಗಿದೆ. ಉಮ್ಮು ಸುಲೈಮ್ ಎಂಬ ಸುಪ್ರಸಿದ್ಧ ಸಹಾಬಿ ಮಹಿಳೆಗೆ ಅಬೂ ತಲ್ಹ ತನ್ನ ವಿವಾಹ ಪ್ರಸ್ತಾಪ ಮಾಡಿದರು. ಆಗಿನ್ನೂ ಅವರು ಇಸ್ಲಾಮ್ ಸ್ವೀಕಾರ ಮಾಡಿರಲಿಲ್ಲ. ಉಮ್ಮು ಸುಲೈಮ್ ಹೀಗೆ ಉತ್ತರಿಸಿದರು– ಅಬೂತಲ್ಹ! ನಿಮ್ಮಂತಹ ವ್ಯಕ್ತಿಯ ವಿವಾಹ ಪ್ರಸ್ತಾಪವನ್ನು ತಿರಸ್ಕರಿಸಲಾಗದು. ಆದರೇನು ಮಾಡಲಿ. ನೀವು ಕಾಫಿರ್(ಸತ್ಯನಿಷೇಧಿ) ಆಗಿದ್ದೀರಿ. ನಾನು ಮುಸ್ಲಿಮಳಾಗಿರುವೆ. ಆದ್ದರಿಂದ ನಮ್ಮ ನಡುವೆ ವಿವಾಹ ಸಾಧ್ಯವಿಲ್ಲ. ನೀವು ಒಂದು ವೇಳೆ ಇಸ್ಲಾಮ್ ಸ್ವೀಕಾರ ಮಾಡಿದರೆ ಅದೇ ನನ್ನ ಮಹ್ರ್ ಆಗಿ ಪರಿಗಣಿಸುವೆ. ಬೇರೇನೂ ಕೇಳಲಾರೆ. ಅಬೂ ತಲ್ಹ ಇಸ್ಲಾಮ್ ಸ್ವೀಕರಿಸಿ ಅವರನ್ನು ವಿವಾಹವಾದರು. ಅವರ ಇಸ್ಲಾಮ್ ಸ್ವೀಕಾರವನ್ನೇ ಅವರ ಮಹ್ರ್ ಆಗಿ ಪರಿಗಣಿಸಲಾಯಿತು. (ನಸಾಈ)

ಇನ್ನು ಹದೀಸ್ ವಿವರಿಸಿದಂತೆ, ಪ್ರವಾದಿಯವರು(ಸ) ಆ ವ್ಯಕ್ತಿಯೊಡನೆ ಮಹ್ರ್‌ಗಾಗಿ ಏನಾದರೂ ತಾ ಎಂದು ಹೇಳಿದಾಗ, ಆತ ನನ್ನ ಬಳಿ ಈ ಲುಂಗಿ ಮಾತ್ರ ಇದೆ. ಇದರ ಅರ್ಧವನ್ನು ನಾನು ಕೊಡಬಲ್ಲೆ ಎಂದು ಹೇಳಿದರು. ಇದನ್ನು ಹಾಸ್ಯಾಸ್ಪದ ಎಂದು ಹೇಳುವುದೇ ಉದ್ಧಟತನವಾಗಿದೆ. ಪ್ರವಾದಿಯವರು ಸಂಗಾತಿಗಳ ಸಾಮಾಜಿಕ ಮತ್ತು ಆರ್ಥಿಕ ಬದುಕನ್ನು ಅಧ್ಯಯನ ನಡೆಸಿದರೆ ಇದು ವಾಸ್ತವಕ್ಕೆ ವಿರುದ್ಧವೆಂದು ತೋಚಲಾರದು. ಸಹಾಬಿಗಳ ಒಂದು ದೊಡ್ಡ ಸಂಖ್ಯೆ ಅತ್ಯಂತ ದಾರಿದ್ರ್ಯದ ಬದುಕು ಸಾಗಿಸುತ್ತಿದ್ದರು. ಹೆಚ್ಚಿನ ವೇಳೆ ಅವರು ಹಸಿದೇ ಇರುತ್ತಿತ್ತು. ಅವರ ಶರೀರವನ್ನು ಮುಚ್ಚಲು ಸಾಕಷ್ಟು ಬಟ್ಟೆ ಅವರಿಗೆ ಲಭ್ಯವಿರಲಿಲ್ಲ. ಆದ್ದರಿಂದ ಅಂತಹವರು ನಾಚಿಕೆಯಿಂದಾಗಿ ಇತರರ ಮರೆಯಲ್ಲಿ ಕುಳಿತು ಕೊಳ್ಳಲು ಪ್ರಯತ್ನಿಸುತ್ತಿದ್ದರು. ಅಬೂ ಸಈದ್ ಖುದ್ರಿ ಹೇಳುತ್ತಾರೆ– ಅರೆನಗ್ನಾವಸ್ಥೆಯಿಂದಾಗಿ ಒಬ್ಬರು ಇನ್ನೊಬ್ಬರ ಮರೆಯಲ್ಲಿ ಕುಳಿತಿರುವ ಅವಸ್ಥೆಯಲ್ಲಿರುತ್ತಿದ್ದರು. ಅಂತಹವರ ಬಳಿ ನಾನು ಕುಳಿತಿದ್ದೇನೆ. (ಅಬೂದಾವೂದ್)

ಪ್ರಸ್ತುತ ಹದೀಸ್ ಆ ವ್ಯಕ್ತಿ ತನ್ನ ಲುಂಗಿಯನ್ನು ನೀಡ ಬಯಸುವಾಗ ನನ್ನ ಬಳಿ ಚದ್ದರವಿಲ್ಲವೆಂದು ಸ್ಪಷ್ಟಪಡಿಸಿರುವುದಾಗಿ ಅದರ ವರದಿಗಾರ ಸಹ್ಲ್ ಹೇಳುತ್ತಾರೆ.(ಬುಖಾರಿ) ಅಂದರೆ ತನ್ನ ಬಳಿ ಚದ್ದರವಿದ್ದಿದ್ದರೆ ಅದನ್ನೇ ಕೊಡುತ್ತಿದ್ದೆ ಎಂಬುದು ಅವರ ಉದ್ದೇಶವಾಗಿತ್ತು. ಇನ್ನೊಂದು ವರದಿ ಪ್ರಕಾರ ಪ್ರವಾದಿ(ಸ) ಆತನೊಂದಿಗೆ ಮಹ್ರ್‌ನಲ್ಲಿ ಆಕೆಗೆ ಬಟ್ಟೆಯೇನಾದರೂ ನೀಡು ಎಂದು ಹೇಳಿದಾಗ, ಆತ ಲುಂಗಿ ನೀಡುವುದಾಗಿ ಹೇಳಿದ್ದ.

ಜೀವನಾಂಶವನ್ನು ಮಹ್ರ್‌ನೊಂದಿಗೆ ಸಮೀಕರಿಸಲಾಗದು. ಯಾರೊಬ್ಬರೂ ಆಹಾರ ಪಾನೀಯದ ಬಗ್ಗೆ ನಿರಪೇಕ್ಷನಾಗಿರಲಾರ. ಅತನು ತನ್ನ ಆಹಾರದ ವ್ಯವಸ್ಥೆ ಮಾಡುವಾಗ ತನ್ನ ಪತ್ನಿಯ ಆಹಾರದ ವ್ಯವಸ್ಥೆಯನ್ನೂ ಮಾಡದಿರಲಾರ. ನಿಕಾಹ್‌ನ ಹೊಣೆಗಾರಿಕೆ ವಹಿಸಿದವನು ಉಪವಾಸ ಆಚರಿಸಬೇಕೆಂಬುದು ಕಡ್ಡಾಯ ವಿಧಿಯಲ್ಲ. ಅದೊಂದು ಉಪಾಯ ಮಾತ್ರ. ಆಗಲೂ ಆತ ಆಹಾರದ ವ್ಯವಸ್ಥೆ ಮಾಡಲೇ ಬೇಕಾಗುತ್ತದೆ. ಏಕೆಂದರೆ ಉಪವಾಸ 24 ಗಂಟೆ ಕಾಲದ್ದಾಗಿರುವುದಿಲ್ಲವಷ್ಟೆ. ಈ ಘಟನೆಯಲ್ಲಿ ವಿಶೇಷವಾಗಿ ಗಮನಿಸಬೇಕಾದ ಅಂಶವೇನೆಂದರೆ ಒಬ್ಬ ಮಹಿಳೆ ದಟ್ಟ ದರಿದ್ರನಾದ ವ್ಯಕ್ತಿಯೊಂದಿಗೆ ವಿವಾಹವಾಗಿ ದಾಂಪತ್ಯ ಜೀವನ ಸಾಗಿಸಲು ಸ್ವಯಂ ಸಿದ್ಧಳಿರುವಾಗ ಆಕೆಯ ಜೊತೆ ಅನುಕಂಪ ತೋರಲು ಮತ್ತು ಆ ವ್ಯಕ್ತಿಯನ್ನು ಆಕೆಯನ್ನು ವಿವಾಹವಾಗದಂತೆ ತಡೆಯುವ ಅಧಿಕಾರ ಹೇಗೆ ಬರುತ್ತದೆ?

ಮಹ್ರ್ ಮುಅಜ್ಜಲ್(ಮುಂದೆ ನೀಡಬಹುದಾದ ಮಹ್ರ್) ಸಹಾಬಿಗಳ ಕಾಲದಲ್ಲಿರಲಿಲ್ಲ. ಅವರು ಮಹ್ರ್ ಮಅಜ್ಜಲ್(ಕೂಡಲೇ ಪಾವತಿಸುವ ಮಹ್ರ್) ನೀಡುತ್ತಿದ್ದರು. ಶರೀಅತ್ ಅದನ್ನು ಉತ್ತಮವೆಂದು ಸಾರಿದೆ. ನಿಕಾಹ್ ಆಗುವುದು ಮಹ್ರ್ ಮುಂದೆಂದಾದರೂ ನೀಡುವುದು ಎಂಬ ಕಲ್ಪನೆ ಕೂಡಾ ಸಹಾಬಿಗಳಲ್ಲಿರಲಿಲ್ಲ. ಭಾರತೀಯ ಸಮಾಜದಲ್ಲಿ ಮಹ್ರ್ ಮಅಜ್ಜಲ್ ಎಂಬುದು ಶರೀಅತ್‌ನ ಅಪಹಾಸ್ಯವಾಗಿ ಪರಿಣಮಿಸಿದೆ. ಅದನ್ನು ಕೂಡಲೇ ನೀಡಬೇಕಾಗಿಲ್ಲವೆಂಬ ಕಲ್ಪನೆ ಸಾಮಾನ್ಯವಾಗಿದೆ. ಹಾಗೆ ಭಾವಿಸುವುದಿಲ್ಲವಾದರೂ ಹಾಗೆ ಮಾಡುತ್ತಾರೆಂಬುದು ವಾಸ್ತವ.

ಕುರ್‌ಆನ್ ಅಧ್ಯಯನ 528

ಅಧ್ಯಾಯ: 4

# ಅನ್ನಿಸಾ

## ವಚನ 77ರ ಟಿಪ್ಪಣಿಯ ಉಳಿದ ಭಾಗ

ಪ್ರವಾದಿ ಮತ್ತು ಶಿಷ್ಯರು ಮದೀನದಲ್ಲಿ ನೆಲೆಸಿ ಅಲ್ಲಿ ಸ್ವಯಮಾಡಳಿತ ಹಕ್ಕನ್ನು ಹೊಂದಿರುವ ಒಂದು ಪುಟ್ಟ ಸಮೂಹವನ್ನು ಸೃಷ್ಟಿಸಿದಾಗ ಕುರೈಶರು ಅದನ್ನು ಮಹಾ ಸವಾಲೆಂದು ಪರಿಗಣಿಸಿದರು. ಹೇಗಾದರೂ ಪ್ರವಾದಿ(ಸ) ಮತ್ತು ಶಿಷ್ಯರನ್ನು ನಾಶಗೊಳಿಸಲು ಅವರು ನಿರ್ಧರಿಸಿದರು. ಮದೀನದ ಸಮೂಹಕ್ಕೆ ಸುಮಾರು 2 ವರ್ಷವಾದಾಗ ಕುರೈಶರು ಮದೀನದ ವಿರುದ್ಧ ಸಮರ ಹೂಡಲಾರಂಭಿಸಿದರು. ಈ ಸಂದರ್ಭದಲ್ಲಿ ವಿಶ್ವಾಸಿಗಳಿಗೆ ಯುದ್ಧದ ಅನುಮತಿ ನೀಡಲಾಯಿತು. ಆದರೆ ಆ ವೇಳೆಗೆ ಈ ಹಿಂದೆ ಯುದ್ಧದ ಬಗ್ಗೆ ಆವೇಶಭರಿತರಾಗಿದ್ದ ಕೆಲವರು



ಹಿಂದೇಟು ಹಾಕಿದರು. ಸಮಸ್ಯೆ ತಲೆದೋರಿದಾಗ ಆವೇಶಭರಿತರಾಗಿ ಬಿಗಿ ಕ್ರಮಗಳಿಂದ ಅದನ್ನು ಬೆಳೆಸಲು ಅವಸರ ಪಡುವ ಅವಿವೇಕಿಗಳು ನಿರ್ಣಾಯಕ ಕ್ರಮಗಳ ಅಗತ್ಯವಿರುವ ಸಂದರ್ಭಗಳಲ್ಲಿ ಹೇಡಿಗಳಾಗಿ ಹಿಂದೆ ಸರಿಯುತ್ತಾರೆ. ಆಗ ಅವರು ಆದರ್ಶ ಮತ್ತು ಆವೇಶಗಳನ್ನು ತೊರೆದು ವೈರಿಯ ಶಕ್ತಿ ಮತ್ತು ಅವರಿಂದಾಗುವ ನಾಶ ನಷ್ಟಗಳ ಬಗ್ಗೆ ಮಾತ್ರ ಆಲೋಚಿಸುತ್ತಾರೆ. ಮೂಲ ವಚನದಲ್ಲಿ ಅವರು ಅಲ್ಲಾಹನಿಗೆ ಹೆದರುವಂತೆ ಅಥವಾ ಅದಕ್ಕಿಂತ ಹೆಚ್ಚಾಗಿ ಜನರಿಗೆ ಹೆದರುತ್ತಾರೆ ಎಂದು ಹೇಳಲಾಗಿದೆ. ಜನರಿಗೆ ಹೆದರುವುದೆಂದರೆ ವೈರಿಗಳೊಂದಿಗೆ ಸಂಘರ್ಷಿಸಿದರೆ ಪ್ರಾಣಹಾನಿಯಾಗುವುದೆಂಬ ಹೆದರಿಕೆಯಾಗಿದೆ. ಸತ್ಯವಿಶ್ವಾಸಿಯು ಆತ್ಯಧಿಕವಾಗಿ ಅಲ್ಲಾಹನಿಗೆ ಹೆದರಬೇಕು. ಆತನ ಆಜ್ಞೆಯನ್ನು ಉಲ್ಲಂಘಿಸಿದರೆ ದೊರೆಯುವ ಶಿಕ್ಷೆಗೆ ಹೆದರಬೇಕು. ಅಲ್ಲಾಹನಿಗೆ ಹೆದರುವಂತೆ ಜನರಿಗೆ ಹೆದರುವುದೆಂದರೆ ಅಥವಾ ಅದಕ್ಕಿಂತ ಹೆಚ್ಚಾಗಿ ಹೆದರುವುದೆಂದರೆ ವಿಶ್ವಾಸದ ದೌರ್ಬಲ್ಯ ಅಥವಾ ಕಾಪಟ್ಯವಾಗಿದೆ.

ಈ ವಚನದ ವಾದಗಳಲ್ಲಿ ಇನ್ನೊಂದು ಸೂಕ್ಷ್ಮ ಆಶಯವೂ ಅಡಕವಾಗಿದೆ. ಸಂದಿಗ್ಧ ಪರಿಸ್ಥಿತಿಗಳಲ್ಲಿ ದುರ್ಬಲ ವಿಶ್ವಾಸಿಗಳು ಮತ್ತು ಕಪಟಿಗಳು ಮರಣಕ್ಕೆ ಹೆದರುತ್ತಾರೆ. ವಸ್ತುತಃ ಮರಣವನ್ನು ಅಲ್ಲಾಹನೇ ವಿಧಿಸುತ್ತಾನೆ. ಸಾಯಬೇಕೆಂದು ಅಲ್ಲಾಹನು ನಿರ್ಣಯಿಸಿದ್ದರೆ ಅತಿಕ್ಷುಲ್ಲಕ ಕಾರಣದಿಂದಲೂ ಅವರು ಸಾಯುತ್ತಾರೆ. ಆತನು ನಿರ್ಣಯಿಸಿಲ್ಲದಿದ್ದರೆ ಅದೆಷ್ಟೇ ದೊಡ್ಡ ಸೇನೆಯಿಂದಲೂ ಏನೂ ಮಾಡಲು ಸಾಧ್ಯವಿಲ್ಲ. ವಿಶ್ವಾಸದ ಈ ವಾಸ್ತವಿಕತೆಯನ್ನು ಮರೆತು ಪ್ರಾಣದ ವಿಷಯದಲ್ಲಿ ವೈರಿ ಸೇನೆಗೆ ಹೆದರುತ್ತಾರೆ.

ಈಗ ನಮಗೆ ಯುದ್ಧದ ಅಪ್ಪಣೆ ನೀಡಿರುವುದೇಕೆ, ಅದನ್ನು ಸ್ವಲ್ಪ ವಿಳಂಬಿಸಬಾರದಿತ್ತೇ ಎಂಬ ಅವರ ಪ್ರಶ್ನೆಯ ಇಂಗಿತವನ್ನು ಎರಡು ರೀತಿಯಿಂದ ಗ್ರಹಿಸಬಹುದು. 1. ಯುದ್ಧದ ಸಮರ್ಥ ನಿರ್ವಹಣೆಗೆ ಅಗತ್ಯವಿರುವ ಸೌಲಭ್ಯ ಮತ್ತು ಸನ್ನಾಹಗಳನ್ನು ನಾವು ಇನ್ನೂ ಮಾಡಿಲ್ಲ. ಆದ್ದರಿಂದ ಸ್ವಲ್ಪ ತಡವಾಗಿ ಯುದ್ಧಕ್ಕೆ ಆಜ್ಞಾಪಿಸಬೇಕಾಗಿತ್ತು. ಈಗ ಯುದ್ಧಕ್ಕೆ ಹೊರಟರೆ ನಮ್ಮ ಸೋಲು ಖಚಿತ. 2. ನಮಗೆ ಯುದ್ಧದ ಆಜ್ಞೆ ನೀಡಬಾರದಿತ್ತು. ಕೇವಲ ನಮಾಝ್ ಮತ್ತು ಉಪವಾಸ ಆಚರಿಸುವ ಅನುಮತಿ ನೀಡಬಾರದಿತ್ತು. ಮಾನವ ಜೀವನವು ಬಹಳ ಹೃಸ್ವವಾಗಿದೆ. ದೇವನ ಮತ್ತು ಧರ್ಮದ ಹೆಸರು ಹೇಳಿ ಅದನ್ನೂ ಕಳೆದುಕೊಳ್ಳುವುದು ವಿಷಾದನೀಯವಲ್ಲವೇ. ಈ ಪುಟ್ಟ ಜೀವನವನ್ನು ಸಹಜ ಮರಣದ ತನಕ ಬದುಕಲು ನಮಗೆ ಅನುಮತಿಸಬೇಕಾಗಿತ್ತು.

ವಸ್ತುಶಃ ಈ ಜೀವನದ ಸುಖ ಭೋಗಗಳ ಬಗೆಗಿನ ಅತ್ಯಾಸೆಯೇ ಎರಡರ್ಥದಲ್ಲಿಯೂ ಈ ಪ್ರಶ್ನೆಯ ತಿರುಳಾಗಿದೆ. ಆದ್ದರಿಂದಲೇ ಅಲ್ಲಾಹನು ಅದಕ್ಕೆ, ಲೌಕಿಕ ಜೀವನದ ಸಂಪನ್ಮೂಲವು ಕ್ಷುಲ್ಲಕವಾಗಿದೆ, ದೇವಭಕ್ತರಿಗೆ ಪರಲೋಕ ಜೀವನವೇ ವಿಶಿಷ್ಟವೆಂದು ಉತ್ತರಿಸಿದನು. ಲೌಕಿಕ ಸಂಪನ್ಮೂಲಗಳನ್ನು ಕ್ಷುದ್ರ ಮತ್ತು ಕ್ಷುಲ್ಲಕವೆಂದು ಪಾರತ್ರಿಕ ಸಂಪನ್ಮೂಲಕ್ಕೆ ಹೋಲಿಸಿ ಹೇಳಲಾಗುತ್ತದೆ. ಲೌಕಿಕ ಸಂಪನ್ಮೂಲವು ಅದೆಷ್ಟೇ ಅಧಿಕ ಮತ್ತು ಶ್ರೇಷ್ಠವಾಗಿದ್ದರೂ ಅದು ಮಾನವನ ಕಲ್ಪನೆಗೆ ಸೀಮಿತವಾಗುತ್ತದೆ. ಅಲ್ಲಾಹನು ಸಿದ್ಧಗೊಳಿಸಿರುವ ಪರಲೋಕ ಸಂಪನ್ಮೂಲವು ಮಾನವ ಕಲ್ಪನೆಗೆ ಸಾಧ್ಯವಿರುವ ಅತ್ಯಂತ ಸಮೃದ್ಧ ಮತ್ತು ಶ್ರೇಷ್ಠವಾದ ಸಂಪನ್ಮೂಲಗಳಿಗಿಂತ ಎಷ್ಟೋ ಪಟ್ಟು ಅಧಿಕ ಮತ್ತು ಶ್ರೇಷ್ಠವಾಗಿದೆ. ನಶ್ವರವಾದ ಈ ಜಗತ್ತಿನ ನಶ್ವರ ಜೀವನದ ಸಂಪನ್ಮೂಲಕ್ಕೂ ಅನಶ್ವರ ಜಗತ್ತಿನ ಅನಶ್ವರ ಜೀವನದ ಸಂಪನ್ಮೂಲಗಳಿಗೂ ಎಲ್ಲಿಯ ಹೋಲಿಕೆ! ಪರಲೋಕ ಸಾಧನೆಗಾಗಿ ಈ ಲೋಕದಲ್ಲಿ ಅನುಭವಿಸುವ ಪ್ರಾಣಹಾನಿಯೂ ಸೇರಿದಂತೆ ಯಾವುದೇ ನಷ್ಟವು ತೀರಾ ತುಚ್ಛವಾಗಿದೆ.

ಪರಲೋಕ ಜೀವನಕ್ಕಾಗಿ ಪರಿಶ್ರಮಿಸುವವರು ತಮ್ಮ ಪರಿಶ್ರಮವು ಸ್ವಲ್ಪವೂ ಹಾಳಾದೀತೆಂದು ಅಂಜಬೇಕಾಗಿಲ್ಲ. ಪರಲೋಕವು ಯಾರಿಗೂ ಅನ್ಯಾಯವಾಗದಂಥ ಲೋಕವಾಗಿದೆ. ಫತೀಲ ಎಂಬ ಪದದ ಅರ್ಥವನ್ನು 48ನೇ ವಚನದ ಕೆಳಗೆ ವಿವರಿಸಲಾಗಿದೆ.

## ಯಾವುದು ಮುಖ್ಯ?

ನಿನ್ನ ಜಾತಿ, ಮತ, ಧರ್ಮವೇ ಬೇರೆ ನಿಜ
ಆತನ ಜಾತಿ, ಮತ, ಧರ್ಮವೇ ಬೇರೆ ನಿಜ
ಆದರೇನಂತೆ ನಿಮ್ಮಿಬ್ಬರ ಹುಟ್ಟು ಒಂದೇ ತಾನೆ?
ನೀನು ಆಗರ್ಭ ಸಿರಿವಂತನೇನೋ ನಿಜ
ಆತ ಕಡು ಬಡವನೇನೋ ನಿಜ
ಆದರೇನಂತೆ ನಿಮ್ಮಿಬ್ಬರ ವಾಸ ಒಂದೇ ಭೂಮಿ ತಾನೆ?
ನೀನು ಮಹಾ ಪ್ರತಿಷ್ಠಿತ, ವರ್ಚಸ್ವಿ, ಅಧಿಕಾರಿ ನಿಜ
ಆತ ಸಾಮಾನ್ಯ ಕೂಲಿ ಕಾರ್ಮಿಕ, ನೌಕರ ನಿಜ
ಆದರೇನಂತೆ ನಿಮ್ಮಿಬ್ಬರ ಅಂತ್ಯ ಒಂದೇ ತಾನೆ?
ಗೆಳೆಯಾ ಬದುಕಿನಲ್ಲಿ ದೇವನಿಗೆ ಶರಣು ಹೋಗುವುದು ಮುಖ್ಯ
ದೇವನಿಚ್ಛೆಯಂತೆ ಬದುಕು ರೂಪಿಸಿಕೊಳ್ಳುವುದು ಮುಖ್ಯ
ಗೆಳೆಯಾ! ಸತ್ಯ ಶುದ್ಧ ಕಾಯಕ ಮಹಾ ಮುಖ್ಯ
ನಿಷ್ಕಾಮ ಮನೋವೃತ್ತಿಯ ಅರ್ಪಣ ಮನೋಧರ್ಮದ
“ಮಾನವ ಸೇವೆ” ಅತಿಮುಖ್ಯವೆಂದನಾ
ನಮ್ಮ ಶಾಂತಿಪ್ರಿಯ ಕರ್ತಾರನು.

ಮುಹಮ್ಮದ್ ಇಸ್ಮಾಈಲ್ ಅಣಬಿ

# ಸಹೀಹ್ ಬುಖಾರಿ

ಅನುವಾದ: ಎಂ.ಎಸ್.ಕೆ.

## ಸುಳ್ಳು ಸಾಕ್ಷ್ಯ

**410.** ಜಾಬಿರ್ ಬಿನ್ ಸಮ್ರಃ ಹೇಳುತ್ತಾರೆ- ಕೂಫಾದವರು ಸಅದ್‌ರ(ರ) ಕುರಿತು ಉಮರ್‌ರಲ್ಲಿ(ರ) ದೂರಿತ್ತರು. ಉಮರ್(ರ) ಸಅದ್‌ರನ್ನು ಪದಚ್ಯುತಗೊಳಿಸಿದರು ಮತ್ತು ಅಮ್ಮಾರ್‌ರನ್ನು ಆಡಳಿತಾಧಿಕಾರಿಯಾಗಿ ಕಳಿಸಿದರು. ಕೂಫಾದವರು ಅವರ ಬಗ್ಗೆಯೂ ದೂರಿತ್ತರು. ಅವರು ನಮಾಝನ್ನೇ ಸರಿಯಾಗಿ ನಿರ್ವಹಿಸುತ್ತಿಲ್ಲವೆಂದು ಹೇಳಿಬಿಟ್ಟರು. ಉಮರ್‌ರು ಅವರ ಬಳಿಗೆ ಒಬ್ಬರನ್ನು ಕಳಿಸಿದರು. ಅವರು, ಅಬೂ ಇಸ್ಹಾಕ್! ನೀವು ನಮಾಝನ್ನು ಸರಿಯಾಗಿ ಮಾಡುವುದಿಲ್ಲವೆಂದು ಇವರು ಹೇಳುತ್ತಾರಲ್ಲ ಎಂದು ಹೇಳಿದರು. ಅಮ್ಮಾರ್(ರ) ಹೇಳಿದರು- ಅಲ್ಲಾಹನಾಣೆ! ಪ್ರವಾದಿ(ಸ) ಅವರ ನಮಾಝನ್ನೇ ಮಾಡಿಸುತ್ತಿದ್ದೇನೆ. ಅದರಲ್ಲೇನೂ ಕಡಿತ ಮಾಡುತ್ತಿಲ್ಲ. ಇಶಾ ನಮಾಝ್ ಮಾಡುವಾಗ ಮೊದಲ ಎರಡು ರಕಅತ್ ದೀರ್ಘವಾಗಿ ಮಾಡುತ್ತೇನೆ. ಕೊನೆಯ ಎರಡು ರಕಅತ್ ಸಂಕ್ಷಿಪ್ತಗೊಳಿಸುತ್ತೇನೆ. (ಉಮರ್‌ರಿಗೆ ಈ ವಿಷಯ ತಿಳಿದಾಗ) ಅಬೂಇಸ್ಹಾಕ್! ನಿಮ್ಮ ವಿಷಯದಲ್ಲಿ ನನ್ನ ಅಭಿಪ್ರಾಯವೂ ಇದೇ ಆಗಿತ್ತು.

ತರುವಾಯ ಉಮರ್‌ರು ಅಮ್ಮಾರ್‌ರ ಸ್ಥಿತಿಗತಿಗಳ ಬಗ್ಗೆ ಮಾಹಿತಿ ಪಡೆಯಲಿಕ್ಕಾಗಿ ಒಬ್ಬರನ್ನು ಅಥವಾ ಕೆಲವು ಮಂದಿಯನ್ನು ಕೂಫಾಕ್ಕೆ ಕಳಿಸಿದರು. ಅವರು ಹೋಗಿ ಕೂಫಾದವರಿಂದ ಅಮ್ಮಾರ್‌ರ ಬಗ್ಗೆ ಕೇಳಿ ತಿಳಿದುಕೊಂಡರು. ಅವರು ವಿಚಾರಿಸದ ಒಂದು ಮಸೀದಿಯೂ ಉಳಿಯಲಿಲ್ಲ. ಎಲ್ಲರೂ ಅವರ ಗುಣಗಾನವನ್ನೇ ಮಾಡಿದರು. ಬನೂ ಅಬಸ್ ಗೋತ್ರದ ಮಸೀದಿಗೆ ಹೋದಾಗ ಅಬೂಸಅ್‌ದ್ ಎಂಬ ಕುಲನಾಮದ ಉಸಾಮ ಬಿನ್ ಕತಾದಃ ಎಂಬೋರ್ವ ವ್ಯಕ್ತಿ ಎದ್ದು ನಿಂತು ಹೇಳಿದರು- ನೀವು ನಮ್ಮಲ್ಲಿ ಆಣೆ ಹಾಕಿ ಕೇಳಿರುವಾಗ ಸಅದ್‌ರ ಪರಿಸ್ಥಿತಿಯನ್ನು ವಿವರಿಸುತ್ತೇವೆ. ಸಅದ್ ಯಾವುದೇ ಸೇನೆಯೊಂದಿಗೆ ಹೋಗುತ್ತಿರಲಿಲ್ಲ. ಸಮಾನವಾಗಿ(ಸೊತ್ತು) ವಿತರಿಸುತ್ತಿರಲಿಲ್ಲ. ನ್ಯಾಯದೊಂದಿಗೆ ತೀರ್ಪು ನೀಡುತ್ತಿರಲಿಲ್ಲ. ಆಗ ಸಅದ್ ಜೊತೆಗಿದ್ದರು. ಅವರು ಕೋಪದಿಂದ ನಾನು ಮೂರು(ಶಾಪ) ಪ್ರಾರ್ಥನೆ ಮಾಡುತ್ತೇನೆ. ಅಲ್ಲಾಹನೇ! ನಿನ್ನ ಈ ದಾಸ ಸುಳ್ಳುಗಾರನಾಗಿದ್ದರೆ ಮತ್ತು ತೋರಿಕೆ ಹಾಗೂ ಪ್ರಸಿದ್ಧಿಗಾಗಿ ಎದ್ದು ನಿಂತಿದ್ದರೆ ಅವನ ಆಯುಷ್ಯವನ್ನು ದೀರ್ಘಗೊಳಿಸು. ಅವನ ದಾರಿದ್ರ್ಯವನ್ನು ಹೆಚ್ಚಿಸು ಮತ್ತು ಅವನನ್ನು ಪರೀಕ್ಷೆಗಳಲ್ಲಿ ಸಿಲುಕಿಸು (ಹಾಗೆಯೇ ಸಂಭವಿಸಿತು).

ಆ ಬಳಿಕ ಉಸಾಮಾ ಬಿನ್ ಕತಾದರಲ್ಲಿ(ಅವರ ಪರಿಸ್ಥಿತಿಯ ಕುರಿತು) ವಿಚಾರಿಸಲಾಗುತ್ತಿದ್ದಾಗ, ನಾನು ತುಂಬಾ ವೃದ್ಧನಾಗಿದ್ದೇನೆ. ಸಂಕಷ್ಟಗಳಲ್ಲಿ ಸಿಲುಕಿದ್ದೇನೆ. ನನಗೆ ಸಅದ್‌ರ ಶಾಪ ತಗಲಿ ಬಿಟ್ಟಿದೆ ಎಂದುತ್ತರಿಸುತ್ತಿದ್ದರು. ಜಾಬಿರ್ (ವರದಿಗಾರ) ಹೇಳಿದರು- ನಾನು ಕೊನೆಗಾಲದಲ್ಲಿ ಉಸಾಮಾರನ್ನು ನೋಡಿದೆ. ವೃದ್ಧಾಪ್ಯದಿಂದ ಅವರ ಹುಬ್ಬುಗಳು ಕೆಳಗಿಳಿದಿದ್ದು ಕಣ್ಣುಗಳ ಮೇಲೆ ಬೀಳುತ್ತಿತ್ತು. ಅವರು ರಸ್ತೆಯಲ್ಲಿ ಬಿದ್ದುಕೊಂಡಿರುತ್ತಿದ್ದರು. ಸಣ್ಣ ಹುಡುಗಿಯರು ಅವರಿಗೆ ಕೀಟಲೆ ಕೊಡುತ್ತಿದ್ದರು.

## ನಮಾಝ್

**411.** ಉಬಾದಾ ಬಿನ್ ಸಾಮಿತ್‌ರಿಂದ(ರ) ವರದಿ: ಪ್ರವಾದಿ(ಸ) ಹೇಳಿದರು- ಸೂರಃ ಫಾತಿಹಾ ಓದದವನಿಗೆ ನಮಾಝ್ ಇಲ್ಲ. ಅಬೂಹುರೈರಾ ಹೇಳುತ್ತಾರೆ- ಪ್ರವಾದಿಯವರು ಮಸೀದಿಗೆ ಬಂದರು. ಇನ್ನೊಬ್ಬ ವ್ಯಕ್ತಿಯೂ ಬಂದರು. ಆತ ನಮಾಝ್ ಮಾಡಿ ಪ್ರವಾದಿವರ್ಯರಿಗೆ ಸಲಾಮ್ ಹೇಳಿದರು. ಪ್ರವಾದಿ(ಸ) ಸಲಾಮ್‌ಗೆ ಉತ್ತರಿಸಿ, ಇನ್ನೊಮ್ಮೆ ಹೋಗಿ ನಮಾಝ್ ಮಾಡು, ನೀನು ಸರಿಯಾಗಿ ನಮಾಝ್ ಮಾಡಲಿಲ್ಲ ಎಂದು ಹೇಳಿದರು. ಆತ ಹೋಗಿ ನಮಾಝ್ ಮಾಡಿ ಬಂದು ಸಲಾಮ್ ಹೇಳಿದರು. ಪ್ರವಾದಿ(ಸ) ಉತ್ತರಿಸಿ, ಹೋಗಿ ಇನ್ನೊಮ್ಮೆ ನಮಾಝ್ ಮಾಡು, ನೀನು ಸರಿಯಾಗಿ ಮಾಡಿಲ್ಲ ಎಂದರು. ಅದೇ ರೀತಿ ಪ್ರವಾದಿಯವರು ಮೂರು ಬಾರಿ ಹೇಳಿದರು. ಕಟ್ಟಕಡೆಗೆ ಆ ವ್ಯಕ್ತಿ ತಮ್ಮನ್ನು ಸತ್ಯ ಸಹಿತ ಕಳಿಸಿದವನಾಣೆ! ನನಗೆ ಇದಕ್ಕಿಂತ ಉತ್ತಮ ನಮಾಝ್ ಮಾಡಲು ಬರುವುದಿಲ್ಲ ವೆಂದರು. ಆಗ ಪ್ರವಾದಿ(ಸ) ಹೇಳಿದರು- ನೀನು ನಮಾಝ್‌ಗೆ ನಿಂತಾಗ ತಕ್ಬೀರ್ ಹೇಳು. ಓದಬಲ್ಲಷ್ಟು ಕುರ್‌ಆನ್ ಪಠಿಸು. ತರುವಾಯ ರುಕೂ ಮಾಡು. ಸರಿಯಾಗಿ ರುಕೂಅ್ ಮಾಡಿದಾಗ ತಲೆಯೆತ್ತಿ ನೇರ ನಿಲ್ಲು. ತರುವಾಯ ಸುಜೂದ್ ಮಾಡು. ಅನಂತರ ತಲೆಯೆತ್ತಿ ಸಾವಧಾನದೊಂದಿಗೆ ಕೂರು. ಇದೇ ರೀತಿ ಇಡೀ ನಮಾಝ್‌ನಲ್ಲಿ ಮಾಡು.

## ದೀರ್ಘ

**412.** ಅಬೂಕತಾದಃ ಹೇಳುತ್ತಾರೆ- ಪ್ರವಾದಿ(ಸ) ಝೊಹರ್ ನಮಾಝ್‌ನ ಮೊದಲೆರಡು ರಕಅತ್‌ಗಳಲ್ಲಿ ಸೂರಃ ಫಾತಿಹಾ ಮತ್ತು ಇನ್ನೆರಡು ಸೂರಗಳನ್ನು ಪಠಿಸುತ್ತಿದ್ದರು. ಪ್ರಥಮ ರಕಅತ್ ದೀರ್ಘವಾಗಿಯೂ ದ್ವಿತೀಯ ರಕಅತ್ ಸಂಕ್ಷಿಪ್ತವಾಗಿಯೂ ನಿರ್ವಹಿಸುತ್ತಿದ್ದರು. ಕೆಲವೊಮ್ಮೆ ಯಾವುದಾದರೂ ಆಯತ್ ಕೇಳಿಸುತ್ತಲೂ ಇತ್ತು. ಅಸರ್ ನಮಾಝ್ ಸೂರಃ ಫಾತಿಹಾ ಮತ್ತೆರಡು ರಕಅತ್ ನಿರ್ವಹಿಸುತ್ತಿದ್ದರು. ಪ್ರಥಮ ರಕಅತ್ ದೀರ್ಘವಾಗಿಯೂ ದ್ವಿತೀಯ ರಕಅತ್ ಸಂಕ್ಷಿಪ್ತವಾಗಿಯೂ ನಿರ್ವಹಿಸುತ್ತಿದ್ದರು. ಅದೇ ರೀತಿ ಫಜ್ರ್ ನಮಾಝ್‌ನ ಪ್ರಥಮ ರಕಅತ್ ದೀರ್ಘವಾಗಿಯೂ ದ್ವಿತೀಯ ರಕಅತ್ ಸಂಕ್ಷಿಪ್ತವಾಗಿಯೂ ನಿರ್ವಹಿಸುತ್ತಿದ್ದರು.

# ಕಪಟ ಪ್ರವಾದಿ ಇಸ್ಲಾಮಿಗೆ!

## ಸಿದ್ದೀಖುಲ್ ಅಕ್ಬರ್ - 22

ಇ.ಎನ್. ಇಬ್ರಾಹೀಮ್



**ಯು**ದ್ಧ ಪ್ರಾರಂಭವಾಯಿತು. ಕ್ರಮೇಣ ಅದು ತೀವ್ರ ಸ್ವರೂಪಕ್ಕೆ ಹೊರಳಿತು. ಇಂತಿರುವಾಗ ತುಲೈಹಾನನ್ನು ಸಂಧಿಸಿ ಜಿಬ್ರೀಲ್ ಆಗಮಿಸಿದೆಯೇ ಎಂದು ತಿಳಿದುಕೊಳ್ಳುವುದಕ್ಕೆ ತುಲೈಹಾನ ಹತ್ತಿರಕ್ಕೆ ಬಂದರು,

"ಜಿಬ್ರೀಲ್ ಬಂದಿತ್ತೇ?"

ತುಲೈಹಾ ಹೇಳಿದನು,

"ಇಲ್ಲ."

ತುಲೈಹಾನ ಬಳಿಯಿಂದ ಉಯೈನಾ ಪುನಃ ಯುದ್ಧರಂಗಕ್ಕೆ ಮರಳಿದರು. ಸ್ವಲ್ಪ ಸಮಯದ ಬಳಿಕ ಪುನ ತುಲೈಹಾನ ಬಳಿಗೆ ಬಂದು ಕೇಳಿದರು,

"ಜಿಬ್ರೀಲ್ ಇನ್ನು ಕೂಡಾ ಬಂದಿಲ್ಲವೇ?"

ತುಲೈಹಾ ಹೇಳಿದನು, "ದೇವವಾಣಿಯೂ ಇಲ್ಲ."

ಉಯೈನಾ ಕೇಳಿದರು, " ಮತ್ತೆ ಯಾವಾಗ ಬರುವುದು? ಇಲ್ಲಿ ಎಲ್ಲ ನಾಶವಾಗುತ್ತಿದೆ......."

ಹೀಗೆ ತನ್ನ ಅಸಹನೆಯನ್ನು ಪ್ರಕಟಿಸಿದರೂ ಉಯೈನಾ ಯುದ್ಧರಂಗಕ್ಕೆ ಮರಳಿದರು. ಈಗ ನೋಡುವಾಗ ಯುದ್ಧವು ಅತಿ ಭಯಾನಕ ಸ್ವರೂಪವನ್ನು ಪಡೆದುಕೊಂಡಿದೆ. ಉಯೈನಾರಿಗೆ ಯುದ್ಧರಂಗದಲ್ಲಿ ತನ್ನವರ ದಯನೀಯ ದೃಶ್ಯವು ಎದುರಾಯಿತು. ಖಾಲಿದ್‌ರ ಸೇನೆ ತನ್ನ ಸೇನೆಯನ್ನು ಮುತ್ತಿಗೆ ಹಾಕಿದೆ.

ಹೀಗಾಗಿ ಈ ಬಾರಿ ಉಯೈನಾ ತುಲೈಹಾನ ಬಳಿಗೆ ಬರುವಾಗ ಹೆಚ್ಚು ಆತಂಕಗೊಂಡಿದ್ದರು. ಮತ್ತೆ ತನ್ನ ಹಿಂದಿನ ಪ್ರಶ್ನೆಯನ್ನೇ ತುಲೈಹಾನ ಮುಂದಿರಿಸಿದರು.

"ಜಿಬ್ರೀಲ್ ಇನ್ನೂ ಬರಲಿಲ್ಲವೇ?"

ಈಗ ತುಲೈಹಾ ಹೇಳಿದನು. "ಬಂತು. ಆದರೆ ನಿನಗೆ ಅವನ ರೀತಿಯ ಒಂದು ಪಾಠವಿದೆ. ಅದನ್ನು ನೀನೆಂದಿಗೂ ಮರೆಯಲಾರೆ ಎಂದಿತು." ತುಲೈಹಾ ಉಯೈನಾರ ಮುಂದೆ ತನಗೆ ಇಂಥ ವಹ್ಯ್ ಬಂದಿದೆಯೆಂದು ಪ್ರಕಟಿಸಿದನು. ಇಷ್ಟಾಗುವಾಗ ಉಯೈನಾರ ಸಹನೆಯೇ ಕೆಟ್ಟು ಹೋಯಿತು. ಅವರು ಕೂಗಿ ಹೇಳಿದರು, "ಪಝಾರದವರೇ, ನೀವು ಯುದ್ಧರಂಗವನ್ನು ತೊರೆದು ಪಲಾಯನಗೈಯ್ಯಿರಿ. ಇವನು ಒಬ್ಬ ಕಪಟ ಪ್ರವಾದಿ......!"

ಉಯೈನಾರ ಕೂಗು ಕೇಳಿ ಶತ್ರುಗಳು ರಣರಂಗವನ್ನು ತೊರೆದು ಪಲಾಯನಕ್ಕೆ ಪ್ರಾರಂಭಿಸಿದರು. ಆದರೆ ತುಲೈಹಾನ ಗೋತ್ರದ ವರಿದ್ದಾರೆ. ಅವರಿಗೆ ಈಗ ಏನು ಮಾಡುವುದೆಂದು ಅರ್ಥ ವಾಗಲಿಲ್ಲ. ಅವರು ಮುಂದೇನೆಂದು ವಿಚಾರಿಸುವ ಉದ್ದೇಶದಿಂದ ತುಲೈಹಾನ ಬಳಿಗೆ ಬಂದರು. ಆದರೆ ಉಯೈನಾ ಈ ಮೊದಲೇ ತಾನು ಮತ್ತು ಪತ್ನಿಗೆ ಓಡಿಹೋಗಲು ಬೇಕಾದ ಸಿದ್ಧತೆಯನ್ನು ಮಾಡಿಕೊಂಡಿದ್ದಾನೆ. ಅವನು ಪಲಾಯನಕ್ಕಾಗಿ ಒಂದು ಕುದುರೆ ಮತ್ತು ಒಂಟೆಯನ್ನು ತನ್ನ ಬಳಿ ಸಿದ್ಧವಾಗಿರಿಸಿದ್ದಾನೆ. ಅವನನ್ನು ತನ್ನ ಗೋತ್ರದವರು ಸಲಹೆ ಕೇಳಲು ಮುತ್ತಿಕೊಂಡೊಡನೆ ಪತ್ನಿಯನ್ನು ಕರೆದುಕೊಂಡು ಪಲಾಯನ ಮಾಡಿದನು. "ಸಾಧ್ಯವಿರು ವವರೆಲ್ಲರೂ ತನ್ನಂತೆ ಕುಟುಂಬ ಸಮೇತ ಪಾರಾಗಿರಿ" ಎಂದು ಹೇಳುತ್ತಾ ಅಲ್ಲಿಂದ ಓಟಕ್ಕಿತ್ತನು.

ಯುದ್ಧರಂಗದಿಂದ ಪರಾರಿಯಾಗಿ ತುಲೈಹಾ ಸಿರಿಯವನ್ನು ಸೇರಿ ಕೊಂಡು ಕಲ್ಬ್ ಗೋತ್ರದವರ ಬಳಿ ಆಶ್ರಯ ಪಡೆದನು.

ಇದರೊಂದಿಗೆ ಕಪಟ ಪ್ರವಾದಿ ತುಲೈಹಾನ ಪ್ರವಾದಿತ್ವವೇ ಅಸ್ತಮಿಸಿತು.

ತನ್ನನ್ನು ಬೆಂಬಲಿಸಿದ್ದ ಗೋತ್ರಗಳು ಇಸ್ಲಾಮಿಗೆ ಮರಳಿದಾಗ ತುಲೈಹಾ ಕೂಡಾ ಇಸ್ಲಾಮಿಗೆ ಮರಳಿದನು.

ಕಪಟ ಪ್ರವಾದಿ ಮುಸ್ಲಿಮನಾದ ಬಳಿಕ ಉಮ್ರಾ ನಿರ್ವಹಿಸು ವುದಕ್ಕೆಂದು ಮಕ್ಕಾಕ್ಕೆ ಹೊರಟರು. ಅವರು ಮದೀನಾವನ್ನು ಸಂದರ್ಶಿಸಿದರು. ಆಗ ಖಲೀಫರನ್ನು ಭೇಟಿಯಾಗಿ ತುಲೈಹಾರ ಹಿಂದಿನ ಕೃತ್ಯಗಳ ಕುರಿತು ಕೆಲವರು ದೂರು ಸಲ್ಲಿಸಿದರು. ಆ ದೂರುಗಳನ್ನು ಪರಿಗಣಿಸದೆ ಅಬೂಬಕರ್ ತನ್ನ ಬಳಿ ದೂರು ತಂದವರೊಂದಿಗೆ ಈ ರೀತಿ ಹೇಳಿದರು,

"ಅಲ್ಲಾಹನು ಅವರಿಗೆ ಇಸ್ಲಾಮಿನೆಡೆಗೆ ದಾರಿಯನ್ನು ತೋರಿಸಿರುವನಲ್ಲವೇ? ಹೀಗಿರುವಾಗ ನನ್ನಿಂದೇನು ಮಾಡಲು ಸಾಧ್ಯ? ಅವರ ವಿಚಾರವನ್ನು ಬಿಟ್ಟುಬಿಡಿರಿ."

ತುಲೈಹಾ ಇನ್ನೊಮ್ಮೆ ಮದೀನಾಕ್ಕೆ ಬಂದಿದ್ದರು. ಆಗ ಉಮರ್ ಖಲೀಫರಾಗಿದ್ದರು. ಅವರು ಉಮರ್‌ರಿಗೆ ಬೈಅತ್ ನಡೆಸುವ ಉದ್ದೇಶ ದಿಂದಾಗಿತ್ತು.

ಉಮರ್ ತುಲೈಹಾರೊಂದಿಗೆ ಆಕ್ಷೇಪದ ಧ್ವನಿಯಲ್ಲಿ ಮಾತಾಡಿದರು.

ಉಮರ್ ಅವರಲ್ಲಿ ಕೇಳಿದರು, "ನೀವು ಉಕಾಸ ಮತ್ತು ಸಾಬಿತ್‌ರ ಹಂತಕರಾಗಿದ್ದೀರಲ್ಲವೇ? ನೀವು ಸ್ವಲ್ಪವೂ ನನಗೆ ಇಷ್ಟವಲ್ಲ."

ಅದಕ್ಕೆ ಪ್ರತಿಕ್ರಿಯೆಯಾಗಿ ತುಲೈಹಾ ಹೇಳಿದರು,

"ಅಮೀರುಲ್ ಮೂಮಿನೀನ್, ನೀವು ಅವರಿಬ್ಬರ ವಿಷಯದಲ್ಲಿ ಯಾಕೆ ದುಃಖಿಸುತ್ತಿದ್ದೀರಿ? ಅಲ್ಲಾಹನು ನನ್ನ ಕಾರಣದಿಂದ ಅವರನ್ನು ಗೌರವಿಸಿದ್ದಾನಲ್ಲವೇ? ಅಷ್ಟೇ ಅಲ್ಲ, ನನ್ನನ್ನು ಅವರ ಕೈಯಲ್ಲಿ ನಿಂದ್ಯನಾಗಿಯೂ ಮಾಡಿಲ್ಲ...." ತುಲೈಹಾರು ನೀಡಿದ ಉತ್ತರದಿಂದ ಉಮರ್‌ರಿಗೆ ತೃಪ್ತಿಯಾಯಿತು. ಬೈಅತ್‌ಗೆ ಒಪ್ಪಿಗೆ ನೀಡಿದರು. ಆ ಬಳಿಕ ಉಮರ್ ಅವರಲ್ಲಿ ಪ್ರಶ್ನಿಸಿದರು,

"ಓ ಸೂತ್ರ ಶಾಲಿ! ಯಾವುದಾದರೂ ಮಂತ್ರ ಇನ್ನು ಕೂಡಾ ಬಾಕಿ ಉಳಿದಿದೆಯೇ?"

ಅದಕ್ಕೆ ತುಲೈಹಾ ಹೀಗೆಂದರು,

"ಒಂದೆರಡು ಊದು ಮಾತ್ರ ನನ್ನಲ್ಲಿದೆ."

ಆನಂತರ ಮದೀನಾದಿಂದ ಅವರು ಸಿರಿಯಾಕ್ಕೆ ಮರಳಿದ್ದರು. ಆ ನಂತರ ನಡೆದಿದ್ದ ಇರಾಕ್ ಯುದ್ಧದಲ್ಲಿ ಮುಸ್ಲಿಮರ ಪಕ್ಷ ದಿಂದ ಭಾಗವಹಿಸಿದರು. ಆ ಯುದ್ಧದಲ್ಲಿ ಅನೇಕ ತ್ಯಾಗವನ್ನು ಅವರು ಸಹಿಸಬೇಕಾಯಿತು.

ಇರಲಿ, ತುಲೈಹಾನ ಉಪಟಳ ಬುಸಾಕ ಯುದ್ಧದಿಂದ ಸಮಾಪ್ತವಾಗಿದೆ. ಆದರೂ ಅಲ್ಲಿ ಇಲ್ಲಿಯಾಗಿ ಕಲಹಕಾರರ ಚಿಕ್ಕ ಪುಟ್ಟ ತಂಡಗಳು ಹರಡಿಕೊಂಡಿವೆ. ಅದರಲ್ಲಿ ಉಮ್ಮು ಝಿಮಲ್‌ಳ ತಂಡ, ಬನೂ ಆಮಿರ್ ಗೋತ್ರ ಮತ್ತು ಇತರರಿದ್ದಾರೆ. ಅದನ್ನು ಕೂಡಾ ಸದೆಬಡಿದೇ ಬುಸಾಕದಿಂದ ಮರಳುವುದೆಂದು ಖಾಲಿದ್ ನಿರ್ಧರಿಸಿದರು. ಹಾಗಾಗಿ ಖಾಲಿದ್‌ರ ಸೇನೆ ಒಂದು ತಿಂಗಳು ಬುಸಾಕಾದಲ್ಲಿ ತಂಗಿತು.

### ಬನೂ ಆಮಿರ್

ಅತ್ತಿತ್ತ ಹರಡಿಕೊಂಡಿರುವ ಕಲಹಕಾರರಲ್ಲಿ ಬನೂ ಆಮಿರ್ ಗೋತ್ರವು ಧರ್ಮಭ್ರಷ್ಟರ ಇನ್ನೊಂದು ವಿಭಾಗವಾಗಿದೆ. ಅವರಿಗೆ ಇನ್ನೂ ಕೂಡಾ ಖಚಿತ ನಿರ್ಧಾರಕ್ಕೆ ಬರಲು ಸಾಧ್ಯವಾಗಿರಲಿಲ್ಲ. ಅವರಲ್ಲಿ ಅಂತಹಾ ಧೈರ್ಯವಿರಲೂ ಇಲ್ಲ. ಅವರು ಅಸದ್, ಕೈಸ್ ಗೋತ್ರಗಳ ಸ್ಥಿತಿಯೇನಾಗುವುದೆಂದು ಕಾಯುತ್ತಿದ್ದರು.

ಈಗ ಅಸದ್, ಕೈಸ್ ಗೋತ್ರಗಳು ಪರಾಭವ ಗೊಂಡಿರುವುದು ಆಮಿರ್ ಗೋತ್ರದಲ್ಲಿ ಆಶ್ಚರ್ಯವನ್ನು ಸೃಷ್ಟಿಸಿತು.

ಅವರು ಖಾಲಿದ್‌ರ ಬಳಿಗೆ ಓಡೋಡಿ ಬಂದರು. ಖಾಲಿದ್ ರನ್ನು ಸಂಧಿಸಿ ಹೀಗೆ ಕೇಳಿಕೊಂಡರು,

"ನಾವು ಹೊರ ಹೋಗಿರುವುದಕ್ಕೆ ಪುನ: ಮರಳಲು ಬಯಸುತ್ತಿದ್ದೇವೆ."

ಖಾಲಿದ್ ಇತರ ಗೋತ್ರಗಳ ಜೊತೆ ನಡೆಸಿರುವ ರೀತಿಯಲ್ಲಿ ಬನೂ ಆಮಿರ್ ಗೋತ್ರದವರೊಂದಿಗೂ ಸಂಧಿಗೆ ಸಿದ್ಧರಾದರು. ಅವರ ಮುಂದೆ ಒಂದು ಶರ್ತವನ್ನು ಇಟ್ಟರು. ಖಾಲಿದ್ ನಿಗದಿಪಡಿಸಿದ ಶರ್ತದಂತೆ ಬನೂ ಆಮಿರ್ ಗೋತ್ರವು ಇಸ್ಲಾಮನ್ನು ತೊರೆದಾಗ ಅವರಲ್ಲಿ ಯಾರಾದರೂ ಅವರ ನಡುವೆ ವಾಸಿಸುತ್ತಿದ್ದ ಮುಸ್ಲಿಮರಲ್ಲಿ ಯಾರನ್ನಾದರೂ ವಧಿಸಿದ್ದರೆ, ಸುಟ್ಟು ಕೊಂದಿದ್ದರೆ ಮತ್ತು ಅಂಗಚ್ಛೇದ ನಡೆಸಿದ್ದರೆ ಅಂತಹ ವ್ಯಕ್ತಿಗಳನ್ನು ಖಾಲಿದ್‌ರ ಮುಂದೆ ಹಾಜರು ಪಡಿಸಬೇಕಾಗಿದೆ.

ಬನೂ ಆಮಿರ್ ಖಾಲಿದ್‌ರ ಶರ್ತವನ್ನು ಒಪ್ಪಿತು. ಮುಸ್ಲಿಮರ ಮೇಲೆ ಆ ರೀತಿ ದೌರ್ಜನ್ಯವೆಸಗಿದ ತಮ್ಮವರನ್ನು ಅವರು ಖಾಲಿದ್‌ರ ಮುಂದೆ ಹಾಜರುಪಡಿಸಿದರು. ಇವರಲ್ಲಿ ಮುಖಂಡ ರನ್ನು ಖಾಲಿದ್ ಸೆರೆಗೆ ತಳ್ಳಿದರು, ಸಾಮಾನ್ಯರನ್ನು ಬಿಡುಗಡೆ ಗೊಳಿಸಿದರು. ನಂತರ ಸೆರೆಯಲ್ಲಿರಿಸಿದ ಮುಖಂಡರನ್ನು ಅವರೆಸ ಗಿದ ಅಪರಾಧಕ್ಕೆ ತಕ್ಕಂತೆ ಶಿಕ್ಷಿಸುವಂತೆ ತನ್ನ ಸೈನಿಕರಿಗೆ ಆದೇಶ ನೀಡಿದರು.

www.sanmarga.com
ಸನ್ಮಾರ್ಗ ವೆಬ್‌ಸೈಟ್‌ನ ವಿನ್ಯಾಸದ ಬಗ್ಗೆ ನಿಮ್ಮ ಸಲಹೆ, ಅಭಿಪ್ರಾಯಗಳಿಗೆ ಸ್ವಾಗತ.

## ಸ್ವಾಭಿಮಾನ

ಸ್ವಾಭಿಮಾನವು ಮಾನವನ ಅತ್ಯಮೂಲ್ಯ ಸಂಪತ್ತಾಗಿದೆ. ಸ್ವಾಭಿಮಾನದ ಪ್ರಜ್ಞೆ ಇರುವ ಒಬ್ಬ ವ್ಯಕ್ತಿಯು ತನ್ನ ಸ್ವಾಭಿಮಾನವನ್ನು ಬಿಟ್ಟು ಕೊಟ್ಟರೆ ಸಮಸ್ತ ಜಗತ್ತೇ ಸಿಗುವುದಾದರೂ ಅವನದನ್ನು ಬಿಟ್ಟು ಕೊಡಲು ಸಿದ್ಧವಾಗಲಾರನು. ಈ ಸ್ವಾಭಿಮಾನ ಪ್ರತಿಯೊಬ್ಬ ಮಾನವನ ಪ್ರಕೃತಿಯಲ್ಲಿದೆ. ಆದುದರಿಂದ ಅದಕ್ಕೆ ಹಾನಿಯಾಗುವುದನ್ನು ಮನುಷ್ಯನು ಎಂದೆಂದಿಗೂ ಸಹಿಸಲಾರನು. ಹೆಚ್ಚಿನವರು ತಮ್ಮ ಸ್ವಾಭಿಮಾನವನ್ನು ಕಾಪಾಡಲಿಕ್ಕಾಗಿ ಏನನ್ನೂ ಸಹಿಸಬಲ್ಲರು. ಯಾವ ತ್ಯಾಗಕ್ಕೂ ಸಿದ್ಧರಾಗುವರು. ಒಬ್ಬ ಸ್ವಾಭಿಮಾನಿ ವ್ಯಕ್ತಿಗೆ ಅಪಮಾನದ ಜೀವನಕ್ಕಿಂತ ಮರಣವೇ ಪ್ರಿಯವಾಗಿರುತ್ತದೆ.

ಚಿಂತನೆ



ಇಬ್ರಾಹೀಮ್ ಸಈದ್

ಇತರರ ಮಾನವನ್ನು ಕೆಡಿಸುವುದು ಅವರ ಹಣ ದೋಚುವುದಕ್ಕಿಂತ ಹೆಚ್ಚು ಅಕ್ಷಮ್ಯ ಹಾಗೂ ನೀಚ ಕೆಲಸವಾಗಿದೆ. ಒಬ್ಬನ ಹಣವನ್ನು ಅನ್ಯಾಯವಾಗಿ ಕಬಳಿಸಿದ್ದರೆ ಅದನ್ನು ಮರಳಿಸಬಹುದು. ಆದರೆ ಜನರ ಮುಂದೆ ಒಬ್ಬನ ಮಾನ ಕೆಡಿಸಿದರೆ ಅದರಿಂದಾಗುವ ನಷ್ಟವನ್ನು ಭರಿಸಲು ಯಾರಿಂದಲೂ ಸಾಧ್ಯವಿಲ್ಲ. ಒಬ್ಬನಿಗೆ ಯಾವುದೇ ದೈಹಿಕ ಗಾಯ ಮಾಡಿದ್ದರೆ ಕ್ರಮೇಣ ಅದು ವಾಸಿಯಾಗಬಹುದು. ಆದರೆ ಮಾತಿನ ಮೂಲಕ ಒಬ್ಬನಿಗೆ ಆಗುವ ಗಾಯ ವಾಸಿಯಾಗಲಾರದು.

ಜನರ ಮಾನಗೆಡಿಸುವುದು ಕೊಲೆಯಂತಹ ಕ್ರೂರ ಕೃತ್ಯವಾಗಿದೆ. ಸ್ವಾಭಿಮಾನಕ್ಕೆ ಧಕ್ಕೆ ಉಂಟಾದವನು ಜೀವನ ಪರ್ಯಂತ ಅಸಹನೀಯವಾದ ನೋವನ್ನು ಅನುಭವಿಸುತ್ತಾನೆ. ಘಾಸಿಕೊಂಡ ಹೃದಯದ ನೋವು ಶಾರೀರಿಕ ನೋವಿಗಿಂತ ಹೆಚ್ಚು ತೀವ್ರ ಮತ್ತು ತ್ರಾಸದಾಯಕವಾಗಿದೆ. ಆದ್ದರಿಂದ ಯಾವನೇ ಒಬ್ಬ ವ್ಯಕ್ತಿಯ ಸ್ವಾಭಿಮಾನಕ್ಕೆ ಹಾನಿಯುಂಟು ಮಾಡುವುದು ಕೊಲೆ, ಸುಲಿಗೆಗಳಂತೆ ಮಹಾ ಅಪರಾಧವಾಗಿದೆಯೆಂದು ಎಲ್ಲ ಧರ್ಮಗಳು ಬೋಧಿಸಿರುವುದರ ಕಾರಣವೂ ಇದುವೇ. ಬಸವಣ್ಣನ ಈ ವಚನವು ಆ ಬೋಧನೆಯ ಪ್ರತೀಕವಾಗಿದೆ.

ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ,
ಮುನಿಯಬೇಡ, ಅನ್ಯರಿಗೆ ಅಸಹ್ಯ ಪಡಬೇಡ
ತನ್ನ ಬಣ್ಣಿಸಬೇಡ, ಇದಿರ ಹಳಿಯಲು ಬೇಡ

ಒಬ್ಬನ ಮೇಲೆ ವಿನಾಕಾರಣ ಆರೋಪ ಹೊರಿಸಿದಾಗ ಅವನು ಅನುಭವಿಸುವ ಹೃದಯ ಬೇಗುದಿ ವರ್ಣನಾತೀತವಾಗಿದೆ. ಪರಿಶುದ್ಧ ಜೀವನ ಸಾಗಿಸುವವರ ಮೇಲೆ ಪಾಪದ ಆರೋಪ ಹೊರಿಸುವುದು ಅಕ್ಷಮ್ಯ ಅಪರಾಧ. ಪತಿವ್ರತೆಯಾದ ಹೆಣ್ಣನ್ನು ಕೆಟ್ಟದಾಗಿ ಚಿತ್ರಿಸುವವರು ಅತ್ಯಂತ ನೀಚಕಾರ್ಯವನ್ನೆಸಗುತ್ತಾರೆ. ಅಂತಹ ವ್ಯಕ್ತಿಗಳು ತಮ್ಮ ಆರೋಪವನ್ನು ಸಾಬೀತು ಪಡಿಸಲು ವಿಫಲವಾದರೆ ಅವರಿಗೆ ಎಂಬತ್ತು ಛಡಿಯೇಟು ಬಾರಿಸಬೇಕೆಂದು ಕುರ್‌ಆನ್ ಹೇಳುತ್ತದೆ. ಏಕೆಂದರೆ ವ್ಯಭಿಚಾರದ ಆರೋಪ ಹೊತ್ತ ಮಹಿಳೆ ಅನುಭವಿಸುವ ನೋವು, ಸಂಕಟಗಳನ್ನು ಅಳೆಯುವುದು ಸಾಧ್ಯವಲ್ಲ.

ಶೋಷಿತ ಜನವರ್ಗವು ಅಸಹಾಯಕಾವಸ್ಥೆಯಲ್ಲಿರುತ್ತದೆ. ಅವರಿಗೆ ಯಾರ ಆಶ್ರಯವೂ ಲಭಿಸುವುದಿಲ್ಲ. ಪ್ರತೀಕಾರದ ಶಕ್ತಿ ಅವರಲ್ಲಿಲ್ಲ. ಆದ್ದರಿಂದ ಅವರ ಪ್ರಾರ್ಥನೆಯು ಸೃಷ್ಟಿಕರ್ತನಲ್ಲಿ ಅತಿಶೀಘ್ರ ಸ್ವೀಕೃತವಾಗುತ್ತದೆ. "ಶೋಷಿತನ ಪ್ರಾರ್ಥನೆಯ ಬಗ್ಗೆ ಅಂಜಿಕೆಯಿರಲಿ. ಏಕೆಂದರೆ ಅಲ್ಲಾಹ್ ಮತ್ತು ಆ ವ್ಯಕ್ತಿಯ ಮಧ್ಯೆ ಯಾವ ತೆರೆಯೂ ಇಲ್ಲ." ಎಂಬ ಪ್ರವಾದಿ ವಚನ ಅದನ್ನೇ ಸೂಚಿಸುತ್ತದೆ.

## ಮೂಸಾ v/s ಫಿರ್‌ಔನ್- 9

ಅಖ್ಲಾಕ್ ಹುಸೈನ್

# ಮದ್‌ಯನ್‌ನಲ್ಲಿ



**ಮೂ**ಸಾರು ಮದ್‌ಯನ್‌ನ ಬಾವಿಯ ಹತ್ತಿರ ಬಂದಾಗ ಅಲ್ಲಿ ಜನರು ತಮ್ಮ ಜಾನುವಾರುಗಳಿಗೆ ನೀರು ಕುಡಿಸುತ್ತಿರುವುದನ್ನು ಕಂಡರು. ಒಬ್ಬೊಬ್ಬರಾಗಿ ಬಂದು ತನ್ನ ಜಾನುವಾರುಗಳಿಗೆ ನೀರು ಕುಡಿಸಿ ಹೋಗುತ್ತಿದ್ದರು. ಅಲ್ಲೇ ಇಬ್ಬರು ಮಹಿಳೆಯರು ಅಸಹಾಯಕತೆಯೊಂದಿಗೆ ತಮ್ಮ ಸರದಿಗಾಗಿ ಕಾಯುತ್ತಿದ್ದರು. ಈ ದೃಶ್ಯ ಕಂಡು ಮೂಸಾರಿಗೆ ಸಹಿಸಲಾಗಲಿಲ್ಲ. ಒಂದು ಇಡೀ ಮರ್ದಿತ ಜನಾಂಗವನ್ನು ಮುಂದೆ ವಿಮೋಚಿಸಬೇಕಾಗಿದ್ದ ಅವರು ಇಬ್ಬರು ಅಸಹಾಯಕ ಹೆಣ್ಣು ಮಕ್ಕಳ ಮರ್ದಿತಾವಸ್ಥೆಯನ್ನು ಸಹಿಸುವುದು ಹೇಗೆ ಸಾಧ್ಯವಾಗಿತ್ತು? ಅವರು ಎದ್ದು ನಿಂತರು. ನೇರವಾಗಿ ಮಹಿಳೆಯರ ಬಳಿಗೆ ಹೋಗಿ ಏನು ವಿಷಯವೆಂದು ಕೇಳಿದರು. ಅವರು ಓರ್ವ ಆರೋಗ್ಯವಂತ ವ್ಯಕ್ತಿ ಅನುಕಂಪ ವ್ಯಕ್ತಪಡಿಸುತ್ತಿರುವು ದನ್ನು ಕಂಡಾಗ ತಮ್ಮ ಸಂಪೂರ್ಣ ಅಳಲನ್ನು ಅವರ ಮುಂದಿಟ್ಟರು. ಅವರು ಹೇಳಿದರು, "ಇಲ್ಲಿ ಬಲಾಢ್ಯರ ರಾಜ್ಯವಿದೆ. ಅವರು ಮೊದಲು ತಮ್ಮ ಜಾನುವಾರು ಗಳಿಗೆ ನೀರು ಕುಡಿಸುತ್ತಾರೆ. ಅವರು ಹೋದ ನಂತರ ನಾವು ನೀರು ಕುಡಿಸಬೇಕು. ನಮ್ಮ ಮನೆಯಲ್ಲಿ ಯಾರೂ ಇಲ್ಲ. ಒಬ್ಬ ತಂದೆ ಮಾತ್ರ ಇದ್ದಾರೆ. ಅವರು ತುಂಬಾ ವೃದ್ಧರು. ನಡೆಯಲಿಕ್ಕೂ ಶಕ್ತಿಯಿಲ್ಲ. ಇತರರ ಕರುಣೆಯ ಮೇಲೆ ಅವರು ಬದುಕುತ್ತಿದ್ದಾರೆ." ಮೂಸಾರಿಂದ ತಡೆಯಲಾಗಲಿಲ್ಲ. ಅವರು ಹೇಳಿದರು, "ತನ್ನಿ, ನಾನು ನಿಮ್ಮ ಜಾನುವಾರುಗಳಿಗೆ ನೀರು ಕುಡಿಸುತ್ತೇನೆ." ಈ ಮಹಿಳೆಯರ ಸರದಿಯ ಹಕ್ಕನ್ನು ಕಸಿದು ಮೊದಲೇ ಅಲ್ಲಿ ಸ್ಥಳ ಪಡೆದಿದ್ದವರು ಮೂಸಾರ ವ್ಯಕ್ತಿತ್ವ, ಶಕ್ತಿ ಮತ್ತು ಧೈರ್ಯವನ್ನು ನೋಡಿ ಪ್ರಭಾವಿತರಾದರು. ಅವರು ಕೂಡಲೇ ದಾರಿ ಬಿಟ್ಟು ಕೊಟ್ಟರು. ಮೂಸಾರು ಜಾನುವಾರುಗಳಿಗೆ ನೀರು ಕುಡಿಸಿ ಅವುಗಳನ್ನು ಮಹಿಳೆಯರ ವಶಕ್ಕೊಪ್ಪಿಸಿದರು. ತಾನು ಹೋಗಿ ಮರದ ಕೆಳಗೆ ಕುಳಿತುಕೊಂಡರು.

ಈ ಇಬ್ಬರು ಯುವತಿಯರು ಮದ್‌ಯನಿನ ಪ್ರಸಿದ್ಧ ಸುಧಾರಕರಾಗಿದ್ದ ರವಾಯಿಲ್‌ರ ಪುತ್ರಿಯರಾಗಿದ್ದರು. ಅವರು ಮನೆಗೆ ತಲುಪುತ್ತಲೇ ಅಂದು ನಡೆದ ವೃತ್ತಾಂತವನ್ನು ತಂದೆಗೆ ತಿಳಿಸಿದರು. ಅವರ ಸಹಾನುಭೂತಿ, ಧೈರ್ಯ, ದೇಹಬಲ, ಸಾತ್ವಿಕತೆ ಹಾಗೂ ನಿರಪೇಕ್ಷತೆಯನ್ನು ಚೆನ್ನಾಗಿ ಕೊಂಡಾಡಿದರು. ತಂದೆಗೆ ಮಕ್ಕಳ ಬಾಯಿಂದ ವಿಷಯ ಕೇಳಿ ಅವರನ್ನು ಭೇಟಿಯಾಗುವ ಬಯಕೆಯುಂಟಾಯಿತು. ಅವರು ತನ್ನ ಓರ್ವ ಪುತ್ರಿಯೊಂದಿಗೆ ಹೇಳಿದರು, "ಆ ವ್ಯಕ್ತಿಯನ್ನು ಕರೆ ತಾ. ನಾನು ಆತನಿಗೆ ಆತನು ಮಾಡಿದ ಉಪಕಾರಕ್ಕೆ ಪ್ರತಿಫಲವಾಗಿ ಮತ್ತು ಅವನು ವಹಿಸಿದ ಶ್ರಮಕ್ಕಾಗಿ ಅವನಿಗೇನಾದರೂ ಮಜೂರಿ ಕೊಡುತ್ತೇನೆ." ಮಗಳು ತಂದೆಯ ಆದೇಶವನ್ನು ಶಿರಸಾ ಪಾಲಿಸಿದಳು. ಅತ್ಯಂತ ನಾಚಿಕೆಯಿಂದ ಅಳುಕುತ್ತಾ ತಲೆ ತಗ್ಗಿಸುತ್ತಾ ಬಹಳ ಮರ್ಯಾದೆಯಿಂದ ಹೆಜ್ಜೆ ಹಾಕುತ್ತಾ ಆಕೆ ಮೂಸಾರ ಬಳಿಗೆ ಬಂದಳು. ದೇಹದ ಉಬ್ಬು ತಗ್ಗುಗಳನ್ನು ಪ್ರದರ್ಶಿಸುತ್ತಾ ಪುರುಷರ ಮಧ್ಯೆ ತಿರುಗಾಡುವ ಇಂದಿನ ಮಾಡರ್ನ್ ಮಹಿಳೆಯರು ಈ ಘಟನೆಯಿಂದಾದರೂ ಪಾಠ ಕಲಿತರೆ! ಇಂದಿಗೆ ಎರಡೂವರೆ ಸಾವಿರ ವರ್ಷಗಳ ಹಿಂದೆಯೂ ಸ್ತ್ರೀತ್ವವು ಎಷ್ಟು ಉನ್ನತ ಮಟ್ಟದಲ್ಲಿತ್ತೆಂಬುದನ್ನು ಅರಿತಿದ್ದರೆ! ಒಂದು ಮರುಭೂಮಿಯ ಪರಿಸರದಲ್ಲಿ ಬೆಳೆಯುವ ಮಹಿಳೆ ತನ್ನ ಮಾನವನ್ನು ಹೇಗೆ ಕಾಪಾಡಿಕೊಂಡಿದ್ದಾಳೆ ನೋಡಿ. ಅಂದಿನ ಪರಿಸ್ಥಿತಿ ಮತ್ತು ಅಗತ್ಯಗಳಿಗೆ ತಕ್ಕಂತೆ ಆ ಹೆಣ್ಣು ಮಗಳು ಪುರುಷರಂತೆ ವರ್ತಿಸಬೇಕಾಗಿತ್ತು. ಆದರೆ ಆ 'ಅಂಧಕಾರಮಯ' ಯುಗದಲ್ಲೂ ಓರ್ವ ಸಭ್ಯ ಹೆಣ್ಣು ಹೆಣ್ತನವೆಂದರೆ, ಲಜ್ಜೆ-ನಾಚಿಕೆ, ಮಾನ-ಮರ್ಯಾದೆ ಮತ್ತು ಸಭ್ಯತೆಯೆಂಬುದನ್ನು ಅರಿತಿದ್ದಳು. ಓರ್ವ ಹೆಣ್ಣು ಈ ಗುಣಗಳಿಂದ ಬರಿದಾಗಿದ್ದರೆ ಬೇರೇನಾದರೂ ಆಗಬಹುದು, ಆದರೆ ಹೆಣ್ಣು ಮಾತ್ರ ಆಗಿರಲಾರಳು. ಎಂತಹ ಮಹಿಳೆ! ಮಾನವತೆಯು ಹೆಮ್ಮೆ ಪಡುವ ಹಾಗೂ ಲೋಕದ ಚಿತ್ರಣವನ್ನೇ ಬದಲಿಸಬಲ್ಲಂತಹ ಸಂತಾನವನ್ನು ತನ್ನ ಮಡಿಲಲ್ಲಿ ಪೋಷಿಸಿ ಬೆಳೆಸುವ ಹೆಣ್ಣು!

ಒಟ್ಟಿನಲ್ಲಿ ಹುಡುಗಿ ಮೂಸಾರ ಬಳಿ ತೆರಳಿ, "ನಮ್ಮ ತಂದೆ ನಿಮ್ಮನ್ನು ಕರೆಯುತ್ತಾರೆ. ನಿಮ್ಮೊಂದಿಗೆ ಮಾತನಾಡ ಬಯಸುತ್ತಾರೆ. ಅವರು ನಿಮ್ಮ ಸ್ಥಿತಿಗತಿಗಳನ್ನು ಅರಿತು ನೀವು ಮಾಡಿದಂತಹ ಉಪಕಾರಕ್ಕೆ ಪ್ರತಿಫಲ ನೀಡಬಯಸಿದ್ದಾರೆ" ಎಂದು ಹೇಳಿದರು. ಮೂಸಾ ಯಾವ ಪರಿಸರದಲ್ಲಿ ಬೆಳೆದಿದ್ದರೋ ಮತ್ತು ಎಂತಹ ಪ್ರಕೃತಿಯನ್ನು ಅಲ್ಲಾಹನು ಅವನಿಗೆ ನೀಡಿದ್ದನೋ, ಅದರ ಪ್ರಕಾರ ಯಾರಿಗಾದರೂ ಸಹಾಯ ಮಾಡಿದರೆ ಅದಕ್ಕೆ ಪ್ರತಿಫಲ ಬಯಸುವುದು ಅವರ ಜಾಯಮಾನವಾಗಿರಲಿಲ್ಲ. ಆದರೆ ವಿವಶಾವಸ್ಥೆಯು ಮಾನವನನ್ನು ಅದಕ್ಕೂ ನಿರ್ಬಂಧಿಸುತ್ತದೆ. ಅಂದು ಅವರು ಸಿಲುಕಿದ್ದ ಸಂಕಷ್ಟದಲ್ಲಿ, ತನಗೆ ಯಾರಾದರೂ ಹಿತಚಿಂತಕರು ಸಿಕ್ಕಿದ್ದರೆ, ಅವರ ಬಳಿ ತನ್ನ ಪರಿಸ್ಥಿತಿಯನ್ನು ಹೇಳಿ ತನ್ನ ಭವಿಷ್ಯದ ಕುರಿತು ಅವರೊಂದಿಗೆ ಸಮಾಲೋಚಿಸಬಹುದಿತ್ತು ಎಂದು ಅವರು ಚಿಂತಿಸುತ್ತಿದ್ದರು. ಅತ್ತ ಫಿರ್‌ಔನನು ಬೆನ್ನಟ್ಟಬಹುದೆಂಬ ಭಯದಿಂದಾಗಿ ತನಗೆಲ್ಲಾದರೂ ಆಶ್ರಯ ಸಿಗುತ್ತಿದ್ದರೆ ನಿಶ್ಚಿಂತೆಯಿಂದ ಇರಬಹುದಿತ್ತೆಂದೂ ಬಯಸುತ್ತಿದ್ದರು. ಮೂಸಾರು ತನ್ನ ಪ್ರಭುವಿನಲ್ಲಿ ಮಾಡಿದ, 'ಪ್ರಭೂ, ನೀನು ಯಾವ ಒಳಿತನ್ನು ಇಳಿಸುವೆಯೋ ನಾನು ಅದರ ಅಪೇಕ್ಷಕನಾಗಿದ್ದೇನೆ' ಎಂಬ ಪ್ರಾರ್ಥನೆಯು ಈ ರೂಪದಲ್ಲಿ ಈಡೇರುವುದನ್ನು ಕಂಡು ಆ ಹಿರಿಯರ ಭೇಟಿಗಾಗಿ ಎದ್ದು ನಡೆದರು. ಅವರಲ್ಲಿ ತಮ್ಮ ವೃತ್ತಾಂತವನ್ನೆಲ್ಲಾ ಎಳೆಎಳೆಯಾಗಿ ವಿವರಿಸಿದರು. ಅವರ ಮಾತನ್ನು ಕೇಳಿ ಆ ಹಿರಿಯರು ಹೀಗೆಂದರು, "ಗಾಬರಿಗೊಳ್ಳುವುದು ಬೇಡ. ನೀನು ನಮ್ಮ ರಕ್ಷಣೆಯಲ್ಲಿರುವೆ. ಈ ಪ್ರದೇಶವು ಫಿರ್‌ಔನನ ಆಡಳಿತ ಕ್ಷೇತ್ರದಿಂದ ಹೊರಗಿದೆ. ಅವನು ನಿನ್ನನ್ನು ಏನೂ ಮಾಡಲಾರ." ಆಗ ಹುಡುಗಿಯರು, ಆ ವ್ಯಕ್ತಿ ಒಬ್ಬಂಟಿಯಾಗಿದ್ದಾನೆ. ನಿರಾಶ್ರಿತನಾಗಿದ್ದಾನೆ, ಅಸಹಾಯಕನಾಗಿದ್ದಾನೆ. ಸಹಾಯಕ್ಕೆ ಅರ್ಹನಾಗಿದ್ದಾನೆ ಎಂದು ಗ್ರಹಿಸಿಕೊಂಡರು. ಅವರಿಗೂ ಅವರ ಸೇವೆಗೈಯುವ ಮತ್ತು ಕೆಲಸ ಕಾರ್ಯಗಳನ್ನು ನೋಡಿಕೊಳ್ಳುವ ಓರ್ವ ವ್ಯಕ್ತಿಯ ಅಗತ್ಯವಿತ್ತು. ಹಾಗೆ ಅವರು ತಂದೆಗೆ ಈ ರೀತಿ ಸಲಹೆ ನೀಡಿದರು, "ಅಪ್ಪಾ! ನಮಗೋರ್ವ ಸೇವಕನ ಅಗತ್ಯವಿದೆಯಷ್ಟೆ. ಇವರನ್ನೇ ನೌಕರನಾಗಿ ನೇಮಿಸಿದರೆ ಹೇಗೆ? ಇವರು ಗಟ್ಟಿಮುಟ್ಟಾಗಿದ್ದಾರೆ. ಆರೋಗ್ಯವಂತರಾಗಿದ್ದಾರೆ. ಧೀರ-ಶೂರರಾಗಿದ್ದಾರೆ. ಪ್ರಾಮಾಣಿಕನೂ ಉತ್ತಮ ಚಾರಿತ್ರ್ಯವಂತರೂ ಆಗಿದ್ದಾರೆ." ಯಾವ ವ್ಯಕ್ತಿಯನ್ನು ಅವರು ನೌಕರನಾಗಿ ನೇಮಿಸಬೇಕೆಂದು ಶಿಫಾರಸು ಮಾಡುತ್ತಿದ್ದರೋ ಅವರಲ್ಲೋರ್ವ ಸಹೋದರಿಯ ಭವಿಷ್ಯವು ಅವರೊಂದಿಗೇ ಜೋಡಿಸಲ್ಪಟ್ಟಿದೆಯೆಂಬ ವಿಚಾರ ಅವರಿಗೇನು ಗೊತ್ತು! ವಾಸ್ತವದಲ್ಲಿ ಅಲ್ಲಾಹನ ಯೋಜನೆಗಳನ್ನು ಬಹಳ ಕಡಿಮೆ ಮಂದಿಯೇ ಅರಿತಿರುತ್ತಾರೆ.

### ಹೊತ್ತಿನ ಮುತ್ತು!

ಮನುಷ್ಯನಿಂದು ಅತಿಯಾಗಿ ಮೆಚ್ಚುವ
ವಸ್ತುವೇ ಆಗಿರುತ್ತದೆ ಮುತ್ತು!
ಅದಕ್ಕಿಂತಲೂ ಬೆಲೆ ಬಾಳುವ
ವಸ್ತುವೇ ಆಗಿರುತ್ತದೆ ಹೊತ್ತು!
ಆ ಹೊತ್ತನ್ನು ಸರಿಯಾಗಿ ಪಾಲಿಸದಿದ್ದರೆ
ಅದರ ಫಲವನ್ನು
ಅನುಭವಿಸ ಬೇಕು ಮತ್ತು
ಈ ಉಪಾಯವು ನಮಗೆ ಎಲ್ಲರಿಗೂ
ಆಗಲೇ ಬೇಕಾಗಿರುತ್ತದೆ ಗೊತ್ತು!

ಮುಹಮ್ಮದ್ ಅಝ್ಮಲ್
ಕಸ್ಬಾ ಬೆಂಗರೆ

# ಸವಾಲುಗಳು

## ಇಸ್ಲಾಮೀ ಬ್ಯಾಂಕಿಂಗ್- 55

ಡಾ। ಹಿಫ್ಝುರ್ರಬ್, ಅಲಹಾಬಾದ್

**ಬ**ಡ್ಡಿಯಾಧಾರಿತ ಬಂಡವಾಳಶಾಹಿಯು ಇಂದು ಜಗತ್ತನ್ನೇ ಅಧೀನದಲ್ಲಿರಿಸಿಕೊಂಡಿದೆ. ಅಮೇರಿಕಾ ಮತ್ತು ಅದರ ಮಿತ್ರ ಕೂಟದ ಕ್ರಮಗಳಿಂದಾಗಿ ಮೂರನೇ ಜಗತ್ತಿನ ರಾಷ್ಟ್ರಗಳು ಸಾಲದ ಕೂಪಕ್ಕೆ ದೂಡಲ್ಪಟ್ಟಿವೆ. ಸಂಪನ್ಮೂಲ ಕೊರತೆಯಿಂದ ಬಳಲುತ್ತಿವೆ. ಈಗ ಇರುವ ಆರ್ಥಿಕ ವ್ಯವಸ್ಥೆಯು ಏಕಪಕ್ಷೀಯ ಕ್ರಮಗಳಿಗೆ ಅನುಕೂಲಕರವಾಗಿದೆ. ಇದರಿಂದ ನಿರ್ಮಾಣವಾಗುವ ಸಮಸ್ಯೆಗಳು ಒಟ್ಟಾರೆ ಆರ್ಥಿಕ ಅಧಃಪತನಕ್ಕೆ ಕೊಂಡೊಯ್ಯುವುದರಲ್ಲಿ ಯಾವ ಸಂದೇಹವೂ ಇಲ್ಲ.

ಬಡ್ಡಿ ವ್ಯವಸ್ಥೆ ಎಂದಿಗೂ ನ್ಯಾಯ, ಅಂತಸ್ತು, ಸ್ವಾತಂತ್ರ್ಯಗಳೊಂದಿಗೆ ಸಹವರ್ತಿಯಾಗಿ ಮುಂದುವರಿಯಲಾರದು. ಹೆಚ್ಚಳಗೊಂಡಿರುವ ನಿರುದ್ಯೋಗ, ವರಮಾನದ ಅಸಮಾನತೆ, ದಾರಿದ್ರ್ಯ, ವಂಚನೆ, ಭ್ರಷ್ಟಾಚಾರ, ಅನ್ಯಾಯ, ಹಕ್ಕು ನಿರಾಕರಣೆ, ಪರತಂತ್ರ ಬೇರೆ ಬದಲಿಯನ್ನು ಹುಡುಕುವುದಕ್ಕೆ ಮಾನವರನ್ನು ನಿರ್ಬಂಧಿಸುತ್ತಿದೆ. ನ್ಯಾಯಪೂರ್ಣ, ಬಡ್ಡಿರಹಿತ ಮತ್ತು ದಕ್ಷವಾದ ಆರ್ಥಿಕ ಕ್ರಮಕ್ಕಾಗಿ ನಡೆದಿರುವ ಇಸ್ಲಾಮಿಕ್ ಬ್ಯಾಂಕ್‌ನ ಸಾಧ್ಯತೆಯನ್ನು ಹೆಚ್ಚಳಗೊಳಿಸಿದೆ.

**2. ಇಸ್ಲಾಮಿಕ್ ಪ್ರತಿಬದ್ಧತೆ:**

ಈಗಿರುವ ಇಸ್ಲಾಮಿಕ್ ಬ್ಯಾಂಕುಗಳೊಂದಿಗೆ ಸಾರ್ವತ್ರಿಕ ಆಕರ್ಷಣೆ ಸೃಷ್ಟಿಯಾಗಿರುವುದು ಹೆಚ್ಚಿನ ಮಾಪನದಂತೆ ಪ್ರತಿಫಲ ಸಿಗುವುದರಿಂದ ಮಾತ್ರವಲ್ಲ. ಜೊತೆಗೆ ಇಸ್ಲಾಮಿನ ಬಡ್ಡಿ ನಿಷಿದ್ಧ ವ್ಯವಸ್ಥೆಯಲ್ಲಿ ಮುಸ್ಲಿಮರ ಮನಸ್ಸಿನಲ್ಲಿರುವ ಪ್ರಭಾವವನ್ನು ಕೂಡಾ ಎತ್ತಿಹಿಡಿಯುತ್ತದೆ. ಪರಂಪರಾಗತ ಬ್ಯಾಂಕುಗಳೊಂದಿಗೆ ಅಸಮಾಧಾನ ಮತ್ತು ಇಸ್ಲಾಮಿಕ್ ಬ್ಯಾಂಕ್‌ಗಳ ಪ್ರಾಮುಖ್ಯತೆ ಹಾಗೂ ಇಸ್ಲಾಮಿಕ್ ಬದ್ಧತೆಗಳು ಪರಿಗಣನಾರ್ಹವಾಗಿದೆ. ನ್ಯಾಯಾಧಾರಿತವಾದುದೆಂದು ಸ್ಪಷ್ಟವಾದಂತೆ ಹೆಚ್ಚೆಚ್ಚು ಜನರು ಪರಂಪರಾಗತ ಬ್ಯಾಂಕ್‌ಗಳ ವ್ಯವಹಾರವನ್ನು ಕೈಬಿಟ್ಟು ಇಸ್ಲಾಮಿಕ್ ಬ್ಯಾಂಕ್‌ಗಳೆಡೆಗೆ ಬರುವರೆಂಬುದರಲ್ಲಿ ಸಂದೇಹವಿಲ್ಲ.

**ಇಸ್ಲಾಮಿಕ್ ಬ್ಯಾಂಕುಗಳ ಸಾಧನೆಗಳು:**

ಇಸ್ಲಾಮಿಕ್ ಬ್ಯಾಂಕುಗಳ ಸಾಧನೆಗಳನ್ನು ಜನರ ಮುಂದೆ ತೆರೆದಿರಿಸಿದರೆ ಅದರ ಸಾಧ್ಯತೆ ಹೆಚ್ಚುವುದೆಂಬುದರ ಬಗ್ಗೆ ಸಂದೇಹಿಸಬೇಕಾಗಿಲ್ಲ. ಪರಿಮಿತಿಗಳ ನಡುವೆಯೂ ಅನ್ಯಾಯ, ಭ್ರಷ್ಟಾಚಾರ, ವಂಚನೆ ರಹಿತ ಸಾಮಾಜಿಕ ನ್ಯಾಯವನ್ನು ದೃಢಪಡಿಸುವುದು ಇಸ್ಲಾಮಿಕ್ ಬ್ಯಾಂಕ್‌ನ ಅಂತಃಸತ್ವವಾಗಿದೆ.

**ಸವಾಲುಗಳು:**

ಈಗ ಚಾಲ್ತಿಯಲ್ಲಿರುವ ಮೌಲ್ಯ ಬದಲಾಗುತ್ತಿರುವ ಹಣಕಾಸು ಸಂಪ್ರದಾಯವನ್ನು ಮೀರಿ ಬೆಳೆಯುವುದೇ ಇಸ್ಲಾಮಿಕ್ ಬ್ಯಾಂಕುಗಳ ಮುಂದಿರುವ ಪ್ರಮುಖ ಸಮಸ್ಯೆಯಾಗಿದೆ. ಚಿಕ್ಕ ಪುಟ್ಟ ವ್ಯವಹಾರಗಳಿಗೆ ಬೇಕಾಗುವ ಸಾಲಗಳನ್ನು ಇಸ್ಲಾಮಿಕ್ ಬ್ಯಾಂಕುಗಳು ಪ್ರೋತ್ಸಾಹಿಸುವುದಿಲ್ಲ ಎಂಬ ಇನ್ನೊಂದು ಸಮಸ್ಯೆಯೂ ಇದೆ. ಬಡ್ಡಿಯಾಧಾರಿತ ಸಾಲಕ್ಕೆ ಪ್ರತಿಯಾಗಿ ಲಾಭ ಪಾಲುಗಾರಿಕೆ ಸಾಲಗಳಾಗಿ ಪಾದಾರ್ಪಣೆಯಾದಾಗ ಹೆಚ್ಚು ಲಾಭವನ್ನು ನಿರೀಕ್ಷಿಸಲಾಗುವುದು ಎಂಬುದು ಪ್ರಮುಖ ಪ್ರಶ್ನೆಯಾಗಿದೆ. ಹಲವು ಸಂಸ್ಥೆಗಳು ಪತನದೆಡೆಗೆ ಸಾಗಿರುವುದು ಹೆಚ್ಚು ಲಾಭ ನೀಡುತ್ತೇವೆಂದು ವಾಗ್ದಾನ ಮಾಡಿರುವ ಕಾರಣವಾಗಿದೆ. ಅಂದರೆ ಉತ್ಪಾದನಾ ಕ್ಷೇತ್ರದಲ್ಲಿ ಹೆಚ್ಚೆಚ್ಚು ಲಾಭ ಗಳಿಸುವಲ್ಲಿ ಅವು ಸೋತುಹೋದವು. ಇಸ್ಲಾಮಿಕ್ ಬ್ಯಾಂಕುಗಳೆದುರಿಸುವ ಮುಖ್ಯ ಸವಾಲುಗಳಿವು.

**1. ಲಾಭ ಪಾಲುಗಾರಿಕೆ ವ್ಯವಹಾರಗಳಲ್ಲಿರುವ ಸಮಸ್ಯೆಗಳು:**

ಪರಂಪರಾಗತ ಬ್ಯಾಂಕುಗಳು ನೀಡುವ ಸಾಲ ನ್ಯಾಯಯುತವಾದುದಲ್ಲವಾದರೂ, ಉತ್ಪಾದಕರು, ಸಂಸ್ಥೆಯ ವ್ಯವಸ್ಥಾಪಕರು ಲಾಭ ಪಾಲುಗಾರಿಕೆ ಸಾಲಕ್ಕಿಂತ ಬಡ್ಡಿಯಾಧಾರಿತ ಸಾಲಕ್ಕೆ ಹೆಚ್ಚಿನ ಆದ್ಯತೆಯನ್ನು ನೀಡುತ್ತಿದ್ದಾರೆ. ಕಾರಣವೇನೆಂದರೆ ನಿರುದ್ಯೋಗ, ಹೂಡಿಕೆ ಹೆಚ್ಚಳದ ಮೇಲಿನ ಒತ್ತಡದಿಂದಾಗಿ ಸರಕಾರಗಳು ಬಡ್ಡಿದರವನ್ನು ಅತಿ ಕಡಿಮೆ ಪ್ರಮಾಣದಲ್ಲಿ ನಿಷ್ಕರ್ಷಿಸುತ್ತಿದೆ. ಲಾಭ ಪಾಲುದಾರಿಕೆಯಲ್ಲಿ ನೀಡುವ ಲಾಭಕ್ಕಿಂತ ಕಡಿಮೆ ಮೊತ್ತವನ್ನು ಬಡ್ಡಿಯಾಗಿ ನೀಡಿದರೆ ಸಾಲುತ್ತದೆ. ಕಡಿಮೆ ಲಾಭದಲ್ಲಿರುವ ಸಂಸ್ಥೆಗಳಿಗೆ ಇಸ್ಲಾಮಿಕ್ ಬ್ಯಾಂಕುಗಳು ಸಾಲ ನೀಡಲು ಹಿಂದೇಟು ಹಾಕುತ್ತದೆ. ಆದ್ದರಿಂದ ಹಣವನ್ನು ಉಪಯೋಗಿಸುವ ಕ್ಷೇತ್ರದಲ್ಲಿ ಇಸ್ಲಾಮಿಕ್ ಬ್ಯಾಂಕುಗಳು ಬಿಕ್ಕಟ್ಟು ಎದುರಿಸುತ್ತದೆ.

ಪರಂಪರಾಗತ ಬ್ಯಾಂಕುಗಳಿಗೆ ತಾನು ಸಾಲ ನೀಡುವಾಗ ವ್ಯವಸ್ಥಾಪಕನ, ಉತ್ಪಾದಕರ ಸತ್ಯಸಂಧತೆ, ವಿಶ್ವಸನೀಯತೆಗಳನ್ನು ಪರಿಗಣಿಸಬೇಕಾದ ಪ್ರಶ್ನೆಯೇ ಇರುವುದಿಲ್ಲ. ಇಸ್ಲಾಮಿಕ್ ಬ್ಯಾಂಕುಗಳಾದರೆ ಲಾಭ–ನಷ್ಟ ಪಾಲುಗಾರಿಕೆಯನ್ನು ಎಚ್ಚರದಿಂದ ಅಂದಾಜಿಸಬೇಕಾಗುತ್ತದೆ. ಆನಂತರವೇ ಹಣ ನೀಡುವುದು ಅವುಗಳಿಂದ ಸಾಧ್ಯ. ಯಾಕೆಂದರೆ ವ್ಯವಸ್ಥಾಪಕರ ಉತ್ಪಾದಕರ ಕಾರ್ಯದಕ್ಷತೆಯೇ ಇಸ್ಲಾಮಿಕ್ ಬ್ಯಾಂಕುಗಳಿಗೆ ಲಾಭವನ್ನು ಖಚಿತಪಡಿಸುವುದಾಗಿದೆ. ನಿಗದಿತ ಸಮಯದಲ್ಲಿ ಮಧ್ಯಂತರವಾಗಿ ಲಾಭ ನಷ್ಟವನ್ನು ನಿರ್ಣಯಿಸುವುದು ಅದಕ್ಕೆ ಕಡ್ಡಾಯವಾಗಿರುತ್ತದೆ. ಹಲವು ಸಂಸ್ಥೆಗಳ ಬಗ್ಗೆ ಇದು ಅಸಾಧ್ಯವಾಗಿರುವುದರಿಂದ ಇಸ್ಲಾಮಿಕ್ ಬ್ಯಾಂಕ್‌ಗಳು ಅಲ್ಪ ಕಾಲಾವಧಿ ಸಾಲಗಳಿಗೆ ಆದ್ಯತೆ ನೀಡುತ್ತವೆ.

# ಮಗಳು ಮದುವಣಗಿತ್ತಿ ಅಮ್ಮ...!



ಮ ಹಿ ಳಾ ವೇ ದಿ ಕೆ

ಎಸ್. ಅಬ್ದುಲ್ ಕರೀಮ್, ದಾವಣಗೆರೆ

**ಸತ್ಯಘಟನೆ**

ಸಲ್ಮಾ ಶ್ರೀಮಂತರ ಮನೆಯಲ್ಲಿ ಜನಿಸಿದ ಹೆಣ್ಣು. ಬಣ್ಣ ಕಪ್ಪಿದ್ದರೂ ನೋಡಲು ಸುಂದರ ವಾಗಿದ್ದಳು. ಗಂಡನಿಗೆ ವಕೀಲ ವೃತ್ತಿ. ಅನ್ಯೋನ್ಯ ಸಂಸಾರ. ದಂಪತಿಗಳಲ್ಲಿ ವಾತ್ಸಲ್ಯ ತುಂಬಿತ್ತು. ಹೆಣ್ಣು ಮಗುವಿನ ಜನನ. ಮುದ್ದಾದ ಮಗು. ಸಂಸಾರದಲ್ಲಿ ಯಾವ ಕೊರತೆಯೂ ಇರಲಿಲ್ಲ. ಆದರೆ ಪತಿಯ ದಿಢೀರ್ ಮರಣದಿಂದ ಸಲ್ಮಾ ತತ್ತರಿಸುತ್ತಾಳೆ. ಈ ದುಃಖದಿಂದ ಚೇತರಿಸಿಕೊಳ್ಳುವಾಗಲೇ ಮತ್ತೊಂದು ಆಘಾತ! ತಾಯಿಯ ಮರಣ. ಸಲ್ಮಾಳಿಗೆ ದಿಕ್ಕೇ ತೋಚದಂತಾಗುತ್ತದೆ. ವಿಧವೆ ಸಲ್ಮಾ ಪತಿ ಮನೆಯನ್ನು ತೊರೆದು ತಂದೆಯ ಬಳಿ ವಾಸಿಸುತ್ತಾಳೆ. ಅಕ್ಕ, ತಂಗಿಯರು, ಅಣ್ಣ ತಮ್ಮಂದಿರ ವಿವಾಹದ ನಂತರ ಮನೆ ಖಾಲಿಯಾಗುತ್ತದೆ. ತನ್ನ ಮಗಳನ್ನು ಅತ್ಯಂತ ಅಕ್ಕರೆಯಿಂದ ಸಾಕುತ್ತಾ ಶಾಲೆಗೆ ಕಳುಹಿಸುತ್ತಾಳೆ. ಮಗಳು ಇಶ್ರತ್ ಕಲಿಕೆಯಲ್ಲಿ ಮುಂದು. ತರಗತಿಗಳಲ್ಲಿ ಪ್ರಥಮ ದರ್ಜೆಯಲ್ಲಿ ತೇರ್ಗಡೆಯಾಗಿ ಬಿ.ಇ. ಪದವೀಧರೆಯಾಗುತ್ತಾಳೆ. ಸಲ್ಮಾಳಿಗೆ ಆದ ಸಂತೋಷ ಅಷ್ಟಿಷ್ಟಲ್ಲ. ಅವಳ ವಿವಾಹಕ್ಕಾಗಿ ಹಾತೊರೆಯುತ್ತಾಳೆ. ಆದರೆ ವಿಧಿಯ ನಿಯಮ ಬೇರೆಯಾಗಿತ್ತು. ಸಲ್ಮಾಳಿಗೆ ಲಿವರ್ ಕ್ಯಾನ್ಸರ್ ಎಂದು ವೈದ್ಯರು ತಿಳಿಸಿದಾಗ ಸಹೋದರ, ಸಹೋದರಿಯರಿಗೆ ಆಘಾತ ಉಂಟಾಗುತ್ತದೆ.

ಇಶ್ರತ್ ಸಲ್ಮಾಳ ಏಕೈಕ ಪುತ್ರಿ. ಹೇಗಾದರೂ ಮಾಡಿ ಇವಳ ವಿವಾಹವನ್ನು ಬೇಗ ಮಾಡಬೇಕೆಂಬ ಹಂಬಲ ಎಲ್ಲರಿಗೂ ಕಾಡಿತ್ತು. ತಾಯಿ ಕೌಸರ್ ಬಿಯ ಮರಣದ ಸಮಯದಲ್ಲಿ ಸಲ್ಮಾಳ ಮನೆಯ ಸದಸ್ಯರಿಗೂ, ಅವಳ ಸೋದರ ಮಾವನ ಕಡೆಯ ವರಿಗೂ ಜಗಳವಾಗಿ ಬೇರೆಯಾಗಿದ್ದರು. ಆದರೂ ಸಹ ಸಲ್ಮಾ ತನ್ನ ಮಗಳ ವಿವಾಹ ಸಮಯದಲ್ಲಿ ಎಲ್ಲರನ್ನೂ ಸೇರಿಸುವ ಪ್ರಯತ್ನ ಮಾಡುತ್ತಾಳೆ. ದಿನಗಳುರುಳಿದಂತೆಲ್ಲಾ ಸಲ್ಮಾಳ ಕಾಯಿಲೆ ಉಲ್ಬಣ ಗೊಳ್ಳುತ್ತದೆ. ಅವಳನ್ನು ಬೆಂಗಳೂರಿನಿಂದ ಸ್ವಂತ ಊರಿಗೆ ಕರೆತರುತ್ತಾರೆ. ಇದೇ ಸಂದರ್ಭದಲ್ಲಿ ಇಶ್ರತ್‌ಳ ವಿವಾಹ ನಿಶ್ಚಿತಾರ್ಥವಾಗುತ್ತದೆ. ಆಗ ಸಲ್ಮಾ ಅತ್ಯಂತ ಹರ್ಷಚಿತ್ತಳಾಗಿ ಗೋಚರಿಸುತ್ತಾಳೆ. ತನ್ನ ಮಗಳ ವಿವಾಹ ನೋಡುವ ಮಹದಾಸೆ...!

ಮಗಳ ವಿವಾಹವನ್ನು ಆಗಸ್ಟ್ 8ಕ್ಕೆ ನಡೆಸ ಬೇಕೆಂದು ತೀರ್ಮಾನಿಸಿ ಲಗ್ನಪತ್ರಿಕೆಗಳನ್ನು ಹಂಚಲಾ ಗಿದೆ. ಮನೆಯಲ್ಲಿ ಸಂಭ್ರಮ, ಸಡಗರ. ಏಕೈಕ ಮಗಳ ವಿವಾಹ. ಸಲ್ಮಾಳಿಗೆ ಈಗ ಎಲ್ಲಿಲ್ಲದ ಸಂತೋಷ! ಮಗಳ ವಿವಾಹದ ಸಮಯಕ್ಕಾಗಿ ಕಾಯು ತ್ತಾಳೆ. ಕ್ಯಾನ್ಸರ್ ಉಲ್ಬಣಗೊಳ್ಳುತ್ತದೆ. ನೋವು ಸಹಿಸಲಾಗುತ್ತಿಲ್ಲ. ಆದರೂ ಇತರರಿಗೆ ತೋರ್ಪಡಿಸದೆ ಆಸ್ಪತ್ರೆಗೆ ದಾಖಲಾಗುತ್ತಾಳೆ. ಮದುವೆಗೆ ಒಂದು ದಿನ ಮೊದಲು ಕಾಯಿಲೆ ಕೊನೆ ಹಂತಕ್ಕೆ ತಲಪುತ್ತದೆ. ನಾಳೆ ಇಶ್ರತ್ ಮದುವೆ. ಆದರೆ ತಾಯಿ ಮರಣ ಶಯ್ಯೆಯಲ್ಲಿ ಮಲಗಿ ಚಡಪಡಿಸುವ ದೃಶ್ಯ ಮಗಳಿಗೆ ನೋಡಲಾಗುತ್ತಿಲ್ಲ. ಕೈಗಳಿಗೆ ಮೆಹಂದಿ ಹಚ್ಚಿಕೊಂಡು ಮದುಮಗಳ ಉಡುಗೆಯಲ್ಲಿ ಇಶ್ರತ್‌ಳು ತಾಯಿ ಬಳಿಗೆ ಬಂದಾಗ ಸಲ್ಮಾ ಅತ್ಯಂತ ಆನಂದದಿಂದ ಕಣ್ತುಂಬ ನೋಡುವಾಗ ಅವಳಿಗೆ ಅರಿವಿಲ್ಲದೆ ಕಣ್ಣಂಚುಗಳು ತೇವಗೊಳ್ಳುತ್ತವೆ. ಮಗಳ ಕೈಹಿಡಿದು ಮನಸ್ಸಿನಲ್ಲೇ ಆಶೀರ್ವದಿಸುವ ದೃಶ್ಯ ಮನಕರಗುವಂತಿತ್ತು.

"ಮಗಳೇ! ನಾನು ಬೇಗ ಗುಣಮುಖಳಾಗಿ ನಾಳೆ ನಿನ್ನ ವಿವಾಹದಲ್ಲಿ ಭಾಗಿಯಾಗುತ್ತೇನೆ ಚಿಂತಿಸಬೇಡ... ನಿನ್ನ ತಂದೆಯವರು ಈಗಿದ್ದಿದ್ದರೆ... ಎಷ್ಟು ಚೆನ್ನಾಗಿತ್ತು...!" ಇಶ್ರತ್ ತಾಯಿಯನ್ನು ಅಗಲಿ ಭಾರವಾದ ಹೆಜ್ಜೆ ಹಾಕಿ ಅಲ್ಲಿಂದ ಬರುವಾಗ ಅವಳೂ ಸಹ ದುಃಖಿತಳಾಗುತ್ತಾಳೆ.

ಮದುವೆ ಮಂಟಪದಲ್ಲಿ ಮದುವೆಯ ಏರ್ಪಾಡು, ಸಲ್ಮಾಳ ಕುಟುಂಬದ ಸರ್ವರೂ ವಿವಾಹದ ಏರ್ಪಾಡಿನಲ್ಲಿ ತೊಡಗಿರುವರು. ನಾಳೆ ನಡೆಯುವ ವಿವಾಹದಲ್ಲಿ ಯಾವ ಕುಂದು ಕೊರತೆಗಳಾಗದಂತೆ ವ್ಯವಸ್ಥೆ ಮಾಡಲಾಗಿದೆ. ಅತ್ತ ಆಸ್ಪತ್ರೆಯಲ್ಲಿ ರಾತ್ರಿ 2 ಗಂಟೆಗೆ ಸಲ್ಮಾಳ ಕಾಯಿಲೆ ಉಲ್ಬಣಗೊಂಡಿದೆ. ಉಸಿರಾಟದ ತೊಂದರೆ. ತನ್ನ ಜೀವನ ಕೊನೆಗೊಳ್ಳುವ ಸಂಕೇತವೆಂದು ಭಾವಿಸುತ್ತಾಳೆ. ರಾತ್ರಿ ಸುಮಾರು 3 ಗಂಟೆಗೆ ಸಲ್ಮಾ ಕೊನೆಯುಸಿರೆಳೆಯುತ್ತಾಳೆ. ಇದನ್ನು ತಿಳಿದ ಡಾ ನವೀದ್ ಮೃತದೇಹವನ್ನು ICUಗೆ ವರ್ಗಾಯಿಸುತ್ತಾನೆ.

ಮರುದಿನ ಭಾನುವಾರ ಇಶ್ರತ್‌ಳ ವಿವಾಹ ನೆರ ವೇರುತ್ತದೆ. ಸಲ್ಮಾಳ ಸಹೋದರ-ಸಹೋದರಿಯರು ಅವಳ ಮರಣವನ್ನು ಗುಟ್ಟಾಗಿಟ್ಟು ಎಲ್ಲಾ ಕಾರ್ಯ ಗಳನ್ನು ನೆರವೇರಿಸಿ ಸಾಯಂಕಾಲ ಇಶ್ರತ್‌ಳನ್ನು ಬೀಳ್ಕೊಡುತ್ತಾರೆ. ಮಗಳಿಗೆ ತನ್ನ ತಾಯಿಯನ್ನು ನೋಡುವ ಹಂಬಲ. ಎಲ್ಲರೂ ಅವಳಿಗೆ ಭರವಸೆ ಕೊಡುತ್ತಾ, "ನಿನ್ನ ತಾಯಿ ಗುಣಮುಖಳಾಗುತ್ತಿದ್ದಾಳೆ. ಈಗ ಸದ್ಯ ICUನಲ್ಲಿ ಇಡಲಾಗಿದೆ. ನಾಳೆ ಮನೆಗೆ ಕರೆತರುತ್ತೇವೆ. ನೀನು ಚಿಂತಿಸಬೇಡ" ಎಂದು ಮದುಮಗಳನ್ನು ಬೀಳ್ಕೊಡುತ್ತಾರೆ. ಇಶ್ರತ್ ಭಾರವಾದ ಹೆಜ್ಜೆಗಳಿಂದ ಕಾರಿನಲ್ಲಿ ಕುಳಿತು ಪತಿಯ ಮನೆಗೆ ಪ್ರಯಾಣಿಸುತ್ತಾಳೆ.

ಮರುದಿನ 10 ಗಂಟೆಗೆ ಸಲ್ಮಾಳ ಇಬ್ಬರು ಸಹೋದರರು ಇಶ್ರತ್‌ಳ ಬಳಿ ಹೋಗಿ, "ನಿನ್ನ ತಾಯಿಯ ಸ್ಥಿತಿ ಚಿಂತಾಜನಕವಾಗಿದೆ" ಎಂದು ಹೇಳಿ ಕರೆತರುತ್ತಾರೆ. ತನ್ನ ಮಮತೆಯ ತಾಯಿಯ ಮೃತದೇಹ ನೋಡಿ ಕಂಗಾಲಾಗಿ ಬಿಕ್ಕಿ ಬಿಕ್ಕಿ ಅಳುತ್ತಾಳೆ.

ಇದು ಜೀವನ! ಸಲ್ಮಾ ಎಲ್ಲಾ ಜಂಜಡದಿಂದ ಮುಕ್ತಳಾಗಿ ತಿರುಗಿಬಾರದ ಸ್ಥಳಕ್ಕೆ ಮಗಳನ್ನು ಅಗಲಿ ಹೋಗುತ್ತಿದ್ದಾಳೆ. ಅಶಾಶ್ವತವಾದ, ಕ್ಷಣಿಕ ಬಾಳಿ ಗಾಗಿ ಮಾನವನು ಹಾತೊರೆಯುತ್ತಿರುವುದು ಅದೆಷ್ಟು ನಿಕೃಷ್ಟ.

ಇದರಿಂದ ನಾವು ಪಾಠ ಕಲಿಯುತ್ತಿಲ್ಲವೇಕೆ? ಇದನ್ನೇ ಕುರ್‌ಆನ್, "ಈ ಸೊತ್ತು ಮತ್ತು ಸಂತತಿ ಗಳು ಕೇವಲ ಲೌಕಿಕ ಜೀವನದ ಕ್ಷಣಿಕ ಸೊಬಗು ಮಾತ್ರ. ವಾಸ್ತವದಲ್ಲಿ ಉಳಿಯುವ ಪುಣ್ಯಕಾರ್ಯ ಗಳಲ್ಲಿ ನಿಮ್ಮ ಪ್ರಭುವಿನ ಬಳಿ ಪರಿಣಾಮದ ದೃಷ್ಟಿ ಯಿಂದ ಶ್ರೇಷ್ಠವಾಗಿರುತ್ತದೆ" (18-46) ಎಂದಿರುವುದು.

## ಮಾಯೆ

ತಾಳಲಾರದು ಜೀವ ಕ್ಷುಧಾಬಾಧೆಯ
ಹರಿದು ಹಂಚಿ ತಿನ್ನುವ ಮನೋಭಾವ
ಕಡಿಮೆಯಾಗಿ ಸ್ವಾರ್ಥಿಯಾಗಿ
ಮೆರೆಯುತ್ತಿದ್ದಾನೆ ಧರೆಯೊಳು

ಹಂಚುವ ಭಾವ ಇಲ್ಲದಂತಾಗಿ
ಬೇಕು ಬೇಕೆನ್ನುತ ಬಡಿದಾಡುತಿಹುದು ಜೀವ
ನಡೆದಿಹುದು ಕಾಳಗ
ಮುಷ್ಠಿ ಅನ್ನಕ್ಕಾಗಿ

ಇಲ್ಲದಾಗ ತಿನ್ನಬೇಕೆಂಬ ಬಯಕೆ
ಇರುವಾಗ ತಿನ್ನಲು ಬಾಯಿ
ಇಲ್ಲದಂತಾಗಿ ಬಳಲುತಿದೆ ಜೀವ
ರೋಗ-ರುಜಿನಗಳಿಂದ

ಅರಿಯರು ಜಗದ ಮಾಯೆ
ದಾನದಲಿ ಅನ್ನದಾನ ಶ್ರೇಷ್ಠ ಎಂಬುದು
ತಿಳಿಯಲಿ ಜಗದ ಜನರಲ್ಲಿ
ಹರಿದು ಹಂಚಿ ತಿನ್ನುವ ಮನೋಭಾವ ಅರಳಲಿ

ಉಮರ್ ಶರೀಫ್ ಎನ್.
ಕುಂಟೋಜಿ, ಬಿಜಾಪುರ

# ಅವಳು 15 ವರ್ಷಗಳ ನಂತರ ತನ್ನ ಕಾಲಲ್ಲೇ ನಿಲ್ಲಬೇಕು

## ಕುಟುಂಬ ಒಂದು ಅಧ್ಯಯನ-38

ಮೌ। ಅಕೀದತುಲ್ಲಾಹ್ ಕಾಸ್ಮಿ

ಅಮೇರಿಕನ್ ಸಮಾಜದಲ್ಲಿ ಅಂದು ತಲಾಕ್- ವಿವಾಹ ವಿಚ್ಛೇದನ, ಮಹಿಳೆಯರ ತರಬೇತಿ, ಶಿಕ್ಷಣ ಕೂಡಾ ತ್ರಾಸದಾಯಕ ವಾಗಿತ್ತು. ವಿಜ್ಞಾನದ ಕಾಲದಲ್ಲಿ ಕೂಡಾ ಅಮೇರಿಕಾದಲ್ಲಿ ಮಹಿಳೆ ದ್ವಿತೀಯ ದರ್ಜೆಯವಳಾಗಿಯೇ ಪರಿಗಣಿಸಲ್ಪಡುತ್ತಿದ್ದಳು. ಅವಳು ಗಂಡಸರಿಗೆ ಸಮಾನವಾಗಿ ಕೆಲಸ ಮಾಡುತ್ತಿದ್ದಳು. ಆದರೆ ಕಡಿಮೆ ಪಗಾರ ಪಡೆಯುತ್ತಿದ್ದಳು. ಅವಳು ಸದಾ ಅಭದ್ರತೆಯಿಂದ ನರಳಬೇಕಾಗಿತ್ತು.

ಅಲ್ಲಿ 15 ವರ್ಷ ಪ್ರಾಯದ ನಂತರ ಹೆಣ್ಮಕ್ಕಳ ಪಾಲನೆ-ಪೋಷಣೆಯ ಹೊಣೆಯನ್ನು ಅಪ್ಪ ಅಮ್ಮ ತೊರೆದು ಬಿಡುತ್ತಾರೆ. ಅವಳು ಸ್ವಯಂ ದುಡಿದು ತನ್ನ ಕಾಲಿನ ಮೇಲೆ ನಿಲ್ಲಬೇಕಾಗುತ್ತದೆ. ವಿವಾಹ ವಿಚ್ಛೇದನವಂತೂ ಯುರೋಪಿಯನ್ ಸಂಸ್ಕೃತಿಯಾಗಿ ಬಿಟ್ಟಿದೆ. ವಿವಾಹ ವಿಚ್ಛೇದನದ ನಂತರ ಮಕ್ಕಳು ಅಸಹಾಯಕರಾಗುತ್ತಾರೆ.

ಅಮೇರಿಕಾದ ಸಮಾಜದಲ್ಲಿ ಮಹಿಳೆಯರ ಪರಿಸ್ಥಿತಿ ಕಾನೂನಿನ ದೃಷ್ಟಿಯಲ್ಲಿಯೂ ಸುದೃಢವಲ್ಲ. ಸಿಸ್ಟರ್ ಅಮಿನಾ ಇಸ್ಲಾಮ್ ಸ್ವೀಕರಿಸಿರುವುದನ್ನು ಘೋಷಿಸಿದೊಡನೆ ತಂದೆ ರೋಷತಪ್ತರಾಗಿ ಡಬಲ್ ಬ್ಯಾರೆಲ್ ಗನ್ ಎತ್ತಿಕೊಂಡು ಕೊಂದು ಹಾಕಲು ಅಮಿನಾರ ಮನೆಗೆ ಬರುತ್ತಾನೆ. ಆದರೆ ದೇವನ ಕೃಪೆಯಿಂದ ಅಮಿನಾ ಬದುಕುಳಿಯುತ್ತಾರೆ. ಅವರ ಗಂಡ ಅವರಿಂದ ಬೇರ್ಪಟ್ಟು ವಾಸಿಸುತ್ತಾನೆ. ಮಾತ್ರವಲ್ಲ ಕೋರ್ಟಿನಲ್ಲಿ ಅಮಿನಾರ ವಿರುದ್ಧ ಮೊಕದ್ದಮೆ ಹೂಡುತ್ತಾನೆ. ಕೆಲಸದಿಂದಲೂ ತೆಗೆದು ಹಾಕಲಾಗುತ್ತದೆ. ಗಂಡನ ವಿಚ್ಛೇದನ ಕಟ್ಟಲೆಯಿಂದಾಗಿ ಅಮಿನರ ಗಳಿಕೆಯನ್ನು ಸ್ತಂಭನ ಗೊಳಿಸಲಾಯಿತು. ಅದೇ ವೇಳೆ ತನ್ನ ಇಬ್ಬರು ಮಕ್ಕಳ ಲಾಲನೆ ಪಾಲನೆಯ ಹೊಣೆ ಅವರ ಮೇಲಿತ್ತು. ಎರಡು ವರ್ಷದ ನಂತರ ಅಮಿನಾ ತನ್ನ ಮಗಳನ್ನು ತನ್ನೊಂದಿಗೆ ಇರಿಸುವುದಕ್ಕೆ ಬಯಸುವು ದಾದರೆ ಇಸ್ಲಾಮನ್ನು ತೊರೆಯಬೇಕೆಂದು ಅಲ್ಲಿನ ಕೋರ್ಟು ತೀರ್ಪಿತ್ತಿತ್ತು. ಎಲ್ಲರಿಗಿಂತಲೂ ಹೆಚ್ಚು ಪ್ರಜಾಪ್ರಭುತ್ವವಾದಿ ಆಳ್ವಿಕೆಯನ್ನು ಹೊಂದಿರುವ ರಾಷ್ಟ್ರದ ನ್ಯಾಯಾಲಯದ ಮನೋಭಾವ ಹೀಗಿತ್ತು! ಅಂದರೆ ಸಾಂಪ್ರದಾಯಿಕ ಧರ್ಮದ ಕಾರಣದಿಂದ ಮಕ್ಕಳ ಚಾರಿತ್ರ್ಯಕ್ಕೆ ತೊಡಕಾಗುವುದು ಎಂದು ವಿಶ್ಲೇಷಿಸಲಾಗಿತ್ತು.

ಆದರೆ ಅಮಿನಾರು ಹೇಳುವುದು ಸಾವಿರದ ನಾಲ್ನೂರು ವರ್ಷದ ಹಿಂದೆಯೇ ಇಸ್ಲಾಮ್ ಮಹಿಳೆಯರಿಗೆ ಹಕ್ಕುಗಳನ್ನು ಕೊಡ ಮಾಡಿದೆ. ಅದರ ಮಾನವೀಯ ರೀತಿಗೆ ಬೇರೊಂದು ಸಮಾನ ಹೋಲಿಕೆಯೇ ಅಲಭ್ಯವಾಗಿದೆ. ಇಸ್ಲಾಮಿನಲ್ಲಿ ಮಹಿಳೆಗೆ ಮಗಳು, ಸಹೋದರಿ, ಪತ್ನಿ, ತಾಯಿ ಎಂಬ ನೆಲೆಯಲ್ಲಿ ಬಹಳ ಗೌರವ ಮತ್ತು ಹಕ್ಕುಗಳು ಲಭಿಸಿವೆ. ತಂದೆ, ಪತಿ, ಸಹೋದರ ಮತ್ತು ಮಕ್ಕಳ ಸೊತ್ತಿನಲ್ಲಿಯೂ ಅವಳಿಗೆ ಪಾಲಿದೆ ಮತ್ತು ತಲಾಕ್ ನಡೆದರೂ ಮಕ್ಕಳ ಖರ್ಚನ್ನು ಪತಿ ಹೊರಬೇಕೇ ಹೊರತು ಮಹಿಳೆ ಹೊಣೆ ಮುಕ್ತಳಾಗಿದ್ದಾಳೆ. ಇಸ್ಲಾಮಿನಲ್ಲಿ ತಲಾಕ್ ನೀಡು ವುದು ಅಂತಹ ಅನಿವಾರ್ಯ ಸ್ಥಿತಿಯಲ್ಲಾಗಿರುತ್ತದೆ. ಅಲ್ಲವಾದರೆ ತಲಾಕನ್ನು ಅರೋಚಕ ಒಪ್ಪಂದವೆಂದು ಪರಿಗಣಿಸಲಾಗುತ್ತದೆ. ಮದುವೆಯ ವೇಳೆ ಪತಿ ಪತ್ನಿಗೆ ಮಹರ್‌ನ ರೂಪದಲ್ಲಿ ಹಣ ಇತ್ಯಾದಿಗಳನ್ನು ನೀಡಬೇಕಾಗುತ್ತದೆ ಎಂದು ಇಸ್ಲಾಮ್ ಪತಿಗೆ ಆದೇಶಿಸಿದೆ. ತನ್ನ ಪತ್ನಿಯೊಂದಿಗೆ ಉತ್ತಮವಾಗಿ ವರ್ತಿಸುವಂತೆ ಆದೇಶಿಸಿದೆ. ಪತ್ನಿಯ ತಪ್ಪುಗಳನ್ನು ಕ್ಷಮಿಸಬೇಕೆಂದೂ ಹೇಳಿದೆ. ತಂದೆ ತನ್ನ ಹೆಣ್ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸಬೇಕು. ಉತ್ತಮ ವಾಗಿ ಅವರೊಂದಿಗೆ ವರ್ತಿಸಬೇಕು ಮತ್ತು ಮದುವೆ ಮಾಡಿಕೊಡ ಬೇಕೆಂದು ಇಸ್ಲಾಮ್ ಆದೇಶಿಸಿದೆ. ಮಾತ್ರವಲ್ಲ ಹೀಗೆ ಮಾಡುವವನಿಗೆ ಉನ್ನತ ಸ್ವರ್ಗ ಲಭಿಸುತ್ತದೆ ಎಂದೂ ತಿಳಿಸಿದೆ.

# ಬಾಲಪಂಕ್ತಿ



✍ ಯಾಸೀನ್ ಬಿ.

# ಹತ್ತೊಂಬತ್ತು ಒಂಟೆಗಳು

**ಬು**ದ್ಧಿವಂತರೂ, ಚಿಂತಕರೂ ಆದ ಓರ್ವ ಹಿರಿಯರು ಮರಣಾ ಸನ್ನರಾದ ವೇಳೆ ತನ್ನ ಮೂರು ಮಕ್ಕಳನ್ನು ಕರೆದು ಈ ರೀತಿ ವಸಿಯ್ಯತ್ (ಅಂತಿಮ ಉಯಿಲು) ಹೇಳಿದರು, "ನನ್ನ ಮರಣಾ ನಂತರ ನೀವು ಮೂವರೂ ನನ್ನ ಹತ್ತೊಂಬತ್ತು ಒಂಟೆಗಳನ್ನು ಸರಿಯಾದ ರೀತಿಯಲ್ಲಿ ಹಂಚಿ ಪಡೆದುಕೊಳ್ಳಬೇಕು. ಹಿರಿಯ ಮಗನಿಗೆ ಒಟ್ಟು ಇರುವುದರ ಅರ್ಧ ಭಾಗ, ಎರಡನೆಯವನಿಗೆ ಒಟ್ಟು ಇರುವುದರ ಕಾಲು ಭಾಗ ಮತ್ತು ಕಿರಿಯವನಿಗೆ ಒಟ್ಟು ಇರುವುದರ ಐದನೇ ಒಂದು ಭಾಗವನ್ನು ಕೊಡಬೇಕು. ಆದರೆ ಇದನ್ನು ಮಾರುವುದಾಗಲೀ, ಕಡಿದು ಹಂಚುವುದಾಗಲೀ ಸಲ್ಲದು."

ಕೊನೆಗೆ ಆ ಹಿರಿಯರು ಕೊನೆಯುಸಿರೆಳೆದರು. ಊರಿನ ನಾನಾ ಕಡೆಗಳಿಂದ ಅವರ ಅಂತಿಮ ದರ್ಶನಕ್ಕಾಗಿ ಹಲವು ಜನರು ಬಂದು ಸೇರಿದರು. ಅವರ ಅಂತಿಮ ಯಾತ್ರೆಯಲ್ಲಿ ಜನ ಸಾಗರವೇ ಸೇರಿತ್ತು. ದಫನ ಕ್ರಿಯೆ ನಡೆದು ನಂತರ ಎಲ್ಲರೂ ತಮ್ಮ ತಮ್ಮ ಮನೆಗೆ ತೆರಳಿದರು. ಕೊನೆಗೆ ಮಕ್ಕಳು ತಂದೆಯ ವಸಿಯತ್‌ನಂತೆ ಪಾಲು ಮಾಡಲು ಸೇರಿದರು.

ಆದರೆ ಹೇಗೆ ಲೆಕ್ಕ ಮಾಡಿದರೂ ಪಾಲು ಮಾಡಲು ಲೆಕ್ಕ ಸಿಗುತ್ತಿರಲಿಲ್ಲ. ದೊಡ್ಡ ಮಗನಿಗೆ ನಿಶ್ಚಯಿಸಿದ್ದ 19ರಲ್ಲಿ ಅರ್ಧಭಾಗ ಎಂದರೆ ಒಂಬತ್ತುವರೆಯಾಗುತ್ತದೆ. ಆದರೆ ತುಂಡು ಮಾಡುವಂತಿಲ್ಲ. 2ನೆಯವನಿಗೂ ಕಾಲು ಭಾಗವನ್ನು ಅಂದರೆ ನಾಲ್ಕು ಮುಕ್ಕಾಲು ಆಗುತ್ತದೆ. ಆದರೆ ತುಂಡು ಮಾಡುವಂತಿಲ್ಲ. ಇನ್ನು ಕೊನೆಯವನಿಗೆ ಲೆಕ್ಕ ಮಾಡಿದಾಗ ಮೂರುವರೆಗಿಂತ ಕೆಳಗೆ ಬರುತ್ತದೆ. ಅದನ್ನೂ ನೀಡುವಂತಿಲ್ಲ, ತುಂಡು ಮಾಡಲೂ ಸಾಧ್ಯವಿಲ್ಲ. ಮಕ್ಕಳು ತುಂಬಾ ಚಿಂತಿಸಿದರು. ಕೊನೆಗೆ ಊರಿನ ಗುರುಗಳ ಬಳಿಗೆ ಸಾಗಿದರು. ಫಲ ದೊರೆಯಲಿಲ್ಲ. ಏನೆಲ್ಲ ಮಾಡಿದರೂ ಅವರಿಗೆ ಪರಿಹಾರ ಕಂಡುಕೊಳ್ಳಲು ಸಾಧ್ಯವಾಗಲಿಲ್ಲ.



ಹೀಗೆ ಜನ ಗುಂಪುಗೂಡಿರುವಾಗ ವಿಶೇಷ ಪಾಂಡಿತ್ಯ ಇಲ್ಲದ ಸಾಮಾನ್ಯ ವ್ಯಕ್ತಿಯೊಬ್ಬರು ಆ ದಾರಿಯಾಗಿ ಹಾದು ಹೋಗುತ್ತಿದ್ದರು. ಗುಂಪಿನಿಂದ ಓರ್ವ ವ್ಯಕ್ತಿ ಇವರನ್ನೂ ಕರೆದರು. ಆ ವ್ಯಕ್ತಿ ಬಹಳ ಗೌರವದಿಂದ ಅವರ ಬಳಿಗೆ ಹೋದರು. ಅವರನ್ನು ಪರಿಹಾಸ್ಯ ಮಾಡಬೇಕೆಂದು ಉದ್ದೇಶಿಸಿ ಅದನ್ನು ತೋರ್ಪಡಿಸದೆ ಗೌರವದಂತೆ ನಟಿಸಿ ಅವರಲ್ಲಿ ಈ ವಿಷಯ ಪ್ರಸ್ತಾಪಿಸುತ್ತಾ, "ತಾವು ದೀನೀ ಪ್ರವರ್ತಕರಲ್ಲವೇ? ಈ ಸಮಸ್ಯೆಗೊಂದು ಪರಿಹಾರ ನೀವು ನೀಡಲೇಬೇಕು. ಇಂತಹ ಸಮಸ್ಯೆಗಳು ತಮಗೆ ಸುಲಭ ಅಲ್ಲವೇ?" ಎಂದು ಹೇಳಿದರು.

ಆ ದೀನೀ ಪ್ರವರ್ತಕರು ಏನೂ ಆಲೋಚಿಸದೆ ಈ ರೀತಿ ಹೇಳಿದರು, "ಈ ಸಮಸ್ಯೆಯನ್ನು ಪರಿಹರಿಸಬಹುದು. ನನ್ನ ಬಳಿ ಒಂದು ಒಂಟೆಯಿದೆ. ಅದನ್ನು ಈ ಮಕ್ಕಳಿಗೆ ದಾನ ನೀಡುತ್ತೇನೆ. ಈಗ ಒಂಟೆಗಳ ಸಂಖ್ಯೆ ಇಪ್ಪತ್ತಾಯಿತು. ಇಪ್ಪತ್ತರಲ್ಲಿ ಹತ್ತು ಒಂಟೆಯನ್ನು ಹಿರಿಯ ಮಗನಿಗೆ ಕೊಡಿರಿ. ಉಳಿದುದರ ಕಾಲು ಭಾಗವಾದ 5 ಒಂಟೆಗಳನ್ನು 2ನೇಯವನಿಗೂ ಇಪ್ಪತ್ತರಲ್ಲಿ ಐದನೇ ಒಂದು ಭಾಗ ಅಂದರೆ ನಾಲ್ಕು ಒಂಟೆಗಳನ್ನು ಕಿರಿಯವನಿಗೆ ನೀಡಿರಿ. ಉಳಿದ ಒಂದು ಒಂಟೆಯನ್ನು ನಮಗೆ ಬೇಕಾದಂತೆ ಮತ್ತೆ ತೀರ್ಮಾನಿಸುವ."

ಇದು ಕೇಳಿದಾಗ ನೆರದಿದ್ದವರು ಬೆಚ್ಚಿಬಿದ್ದರು. ನಮ್ಮಷ್ಟು ವಿದ್ಯಾಭ್ಯಾಸ ಇಲ್ಲದ ಈ ಸಾಮಾನ್ಯ ಮನುಷ್ಯ ಈ ಸಮಸ್ಯೆಯನ್ನು ಎಷ್ಟು ಸುಂದರವಾಗಿ ಪರಿಹರಿಸಿದರು. ಮಹಾ ಗ್ರಂಥಗಳಿಗಿಂತ, ಅನುಭವದಿಂದ ಸಿಗುವ ವಿದ್ಯೆ ಮೇಲು ಆದರೆ ಸತ್ಯವಿಶ್ವಾಸಿಗಳಿಗೆ ಈ ಎರಡೂ ಶಿಕ್ಷಣಗಳ ಅಗತ್ಯವಿದೆ.

"ಅಲ್‌ಹಮ್ದುಲಿಲ್ಲಾಹ್! ಅತ್ಯುತ್ತಮವಾಗಿ ನಮ್ಮ ಸಮಸ್ಯೆಯನ್ನು ನೀವು ಪರಿಹರಿಸಿದ್ದೀರಿ. ನೀವು ನಮಗೆ ನೀಡಿದ ಒಂಟೆಯನ್ನು ನಿಮಗೇ ಮರಳಿಸಿದ್ದೇವೆ. ಕರುಣಾ ಮಯಿಯಾದ ಅಲ್ಲಾಹನು ನಿಮ್ಮನ್ನು ಅನುಗ್ರಹಿಸಲಿ" ಎಂದು ಮೂರು ಮಕ್ಕಳೂ ಸೇರಿ ಹೇಳಿದರು.

## ಅರಬಿ ಸುಡೊಕು 74

| | | | | | |
|---|---|---|---|---|---|
| | | ح | ت | | |
| | | ت | ح | | |
| | | | | | |
| ا | | ث | ج | | ح |
| ج | | ا | ث | | ت |
| ت | | | | | ج |

**ಅರಬಿ ಸುಡೊಕು 73ರ ಉತ್ತರ**

| | | | | | |
|---|---|---|---|---|---|
| ح | ب | ت | ا | ث | ج |
| ا | ث | ج | ح | ب | ت |
| ب | ا | ح | ج | ت | ث |
| ت | ج | ث | ب | ح | ا |
| ث | ح | ا | ت | ج | ب |
| ج | ت | ب | ث | ا | ح |

ಆಟದ ನಿಯಮ:

ಖಾಲಿ ಜಾಗದಲ್ಲಿ ا ನಿಂದ ح ವರೆಗಿನ ಅರಬಿ ಅಕ್ಷರಗಳನ್ನು ತುಂಬಬೇಕು. ಉದ್ದ ಸಾಲು, ಅಡ್ಡ ಸಾಲು ಹಾಗೂ 2x3 ಜಾಗದ ಚೌಕದಲ್ಲಿ ಯಾವುದೇ ಅಕ್ಷರ ಎರಡು ಬಾರಿ ಬರುವಂತಿಲ್ಲ. ನಿಮ್ಮ ಜಾಣ್ಮೆಗೆ, ತಾಳ್ಮೆಗೆ, ಬುದ್ಧಿವಂತಿಕೆಗೆ ಇಲ್ಲಿದೆ ಚಾಲೆಂಜ್!

# ದಯವಿಟ್ಟು ನಿಲ್ಲಿಸಿ, ಸುಡಬೇಡಿ!

(5ನೇ ಪುಟದಿಂದ)

ಲಾಭಗಳಿಸುವ ಅವಕಾಶ ಒದಗಿಸುತ್ತದೆ.

ಮಅದನಿಯವರು ಹತ್ತು ವರ್ಷ ಜೈಲಿನಲ್ಲಿ ಕಳೆದ ಬಳಿಕ ನಿರಪರಾಧಿಯೆಂದು ಬಿಡುಗಡೆಗೊಂಡವರು. ಜೈಲಿನಿಂದ ಹೊರಗೆ ಬಂದ ಕೂಡಲೇ ತನ್ನ ಲೋಪ ದೋಷಗಳನ್ನು ಜ್ಞಾಪಿಸಿ, ಹೊಸ ಜೀವನ ಸಾಗಿಸಲು ಅವಕಾಶ ನೀಡಬೇಕೆಂದು ವಿನಂತಿಸಿದರು.ಈಗಲೂ ರೋಗಿ ಮತ್ತು ದುರ್ಬಲರಾಗಿರುವ ಅವರನ್ನು ಬೇಟೆಯಾಡುವುದು ನ್ಯಾಯವಲ್ಲ. ಸಂಕುಚಿತ ರಾಜಕಿಯ ಹಿತಾಸಕ್ತಿಗಳನ್ನು ಬದಿಗಿರಿಸಿ, ಮಅದನಿಯವರಿಗೆ ಮಾನವೀಯ ನ್ಯಾಯ ದೊರಕಿಸಲು ರಾಜಕೀಯ ಸಂಘಟನೆಗಳು ಮತ್ತು ನಾಗರಿಕರು ಮುಂದಾಗಬೇಕು.

ಕಳೆದ ಲೋಕಸಭಾ ಚುನಾವಣೆಯಲ್ಲಿ ಮತ್ತು ಅದಕ್ಕಿಂತ ಮುಂಚೆ ಯುಪಿಎ ಸರಕಾರವನ್ನು ಅಧಿಕಾರಕ್ಕೇರಿಸುವುದರಲ್ಲಿ ಮುಸ್ಲಿಮ್ ಓಟುಗಳು ನಿರ್ಣಾಯಕ ಪಾತ್ರವಹಿಸಿದ್ದುವು. ಇದು ಎಲ್ಲ ಕಾಂಗ್ರೆಸ್ಸಿಗರೂ ಒಪ್ಪುವ ಸತ್ಯ. ರಾಷ್ಟ್ರ ಮಟ್ಟದಲ್ಲಿ ಯುಪಿಎ ಪರ ಮತದಾನದಲ್ಲಿ ಜಮಾಅತೆ ಇಸ್ಲಾಮಿಯ ನಾಯಕತ್ವದಲ್ಲಿ ಮುಸ್ಲಿಮ್ ಸಂಘಟನೆಗಳು ವಹಿಸಿದ ಪಾತ್ರವು ಸುವಿಧಿತವಾಗಿದೆ, ಎಲ್ಲ ಭಿನ್ನಮತದೊಂದಿಗೆ ದೇಶದ ಜಾತ್ಯತೀತ ಶಕ್ತಿಯೆಂಬ ನೆಲೆಯಲ್ಲಿ ಜಮಾಅತೆ ಇಸ್ಲಾಮಿಯು ಕಾಂಗ್ರೆಸ್ ಪರ ಧೋರಣೆಯನ್ನು ವಹಿಸುತ್ತಾ ಬಂದಿದೆ. ಈಗ ಮಾರ್ಕ್ಸಿಸ್ಟರು ಮತ್ತು ಎಡಪಂಥೀಯರು ರಾಜಕೀಯ ಲಾಭವನ್ನು ದೃಷ್ಟಿಯಲ್ಲಿರಿಸಿ ಉಗ್ರವಾದಿ ಮೊಹರು ಹಾಕುವಾಗ ಹಿಂದೂ ಓಟು ನಷ್ಟವಾದೀತೇ ಎಂಬ ಆಶಂಕೆಯಿಂದ ಕಾಂಗ್ರೆಸ್ ನಾಯಕರಲ್ಲಿ ಕೆಲವರಾದರೂ ಜಮಾಅತೆ ಇಸ್ಲಾಮಿಗೆ ಭಯೋತ್ಪಾದನೆಯ ಮೊಹರು ಹಾಕಲು ಉತ್ಸುಕರಾಗಿರುವುದು ಹಾಸ್ಯಾಸ್ಪದ. ಜಮಾಅತೆ ಇಸ್ಲಾಮಿಯು ಉಗ್ರವಾದಿ ಆಂದೋಲನವೋ ಎಂಬುದನ್ನು ಹಿರಿಯ ನಾಯಕರಲ್ಲಿ ಕೇಳಿ ತಿಳಿಯುವುದು ಉತ್ತಮ.

ಮುಸ್ಲಿಮ್ ಲೀಗ್ ನಾಯಕರಿಗೆ ಕಿವಿ ಮಾತು. ನಮ್ಮ ಮಧ್ಯೆ ಇದು ಬೇಕೇ? ಜಮಾಅತೆ ಇಸ್ಲಾಮಿಯನ್ನು ಭಯೋತ್ಪಾದಕಗೊಳಿಸಿ ನಿಮಗೆ ಪಾರಾಗಬಹುದೆಂದು ಭಾವಿಸುತ್ತೀರಾ? ಗತಕಾಲದಲ್ಲಿ ನಾವು ಮಾಡಿದ್ದ ರಾಜಕೀಯ ಚರ್ಚೆಗಳನ್ನು ಮರೆತಿರಾ? ಶಿಹಾಬ್ ತಂಙಳ್, ಇ ಅಹ್ಮದ್, ಗಲ್ಫಾರ್ ಮುಹಮ್ಮದಲಿಯವರ ಸಮ್ಮುಖದಲ್ಲಿ ಕೊಝಿಕೋಡ್ ಮಲಬಾರ್ ಪ್ಯಾಲೇಸ್‌ನಲ್ಲಿ ನಾವು ನಡೆಸಿದ ಚರ್ಚೆಯು ಯಾವ ಧಾರ್ಮಿಕ ವಿಷಯದ ಬಗ್ಗೆಯಾಗಿತ್ತು? ಅಂಥ ಅದೆಷ್ಟು ಮಾತುಕತೆ ನಡೆದಿಲ್ಲ? ಹೊಸನಾಯಕರಿಗೆ ತಿಳಿದಿಲ್ಲದಿದ್ದರೆ ಹಿರಿಯ ನಾಯಕರು ಅದನ್ನು ಅವರಿಗೆ ತಿಳಿಸಬೇಕು. ಸಾಮ್ರಾಜ್ಯಶಾಹಿತ್ವ ಮತ್ತು ಸಂಘಪರಿವಾರವು ನಿಮ್ಮ ಧೋರಣೆಯನ್ನು ನೋಡಿ ನಗುತ್ತಿರಬಹುದು. ಸಮುದಾಯದ ಐಕ್ಯವೇ ಅತಿ ಪ್ರಧಾನ. ಕಳೆದ ಚುನಾವಣೆಯಲ್ಲಿ ಕೆಲವೆಡೆಗಳಲ್ಲಿ ಮುಸ್ಲಿಮ್‌ಲೀಗಿಗೆ ಓಟು ನೀಡಲಿಲ್ಲ ಅಥವಾ ಎಸೆಂಬ್ಲಿ ಚುನಾವಣೆಯಲ್ಲಿ ಎಡ ಪಕ್ಷವನ್ನು ಬೆಂಬಲಿಸಿರುವುದು ಸಹೋದರ ಸಂಘಟನೆಯನ್ನು ಭಯೋತ್ಪಾದಕ ಆಂದೋಲನವೆಂದು ಮೊಹರು ಹಾಕಲು ಕಾರಣವಾಗಬಾರದು. ಇತರೆಲ್ಲರಿಗಿಂತ ಹೆಚ್ಚಾಗಿ ನಿಮಗೆ ಅದು ತಿಳಿದಿದೆ. ಮಾರ್ಕ್ಸಿಸ್ಟರ ಬೆದರುಗೊಂಬೆಯಿಂದ ನೀವು ವಿಚಲಿತರಾಗಬಾರದು. ಧಾರ್ಮಿಕ ಸಂಘಟನೆಗಳ ಅವಸ್ಥೆ ಶೋಚನೀಯ. ಅವರಿಗೆ ತಮ್ಮ ಕಣ್ಣೆದುರಲ್ಲಿರುವುದರ ಹೊರತು ಬೇರೇನೂ ಕಾಣಿಸುವುದಿಲ್ಲ. ಅವರು ಅದೆಷ್ಟು ಕ್ಷಿಪ್ರವಾಗಿ ಅವರು ಇದಿರಾಳಿಗಳ ಬಗ್ಗೆ ಕುಫ್ರ್ ಪತ್ವ ಹೊರಡಿಸುತ್ತಿದ್ದಾರೆ? ಅವರನ್ನು ನಿರ್ಲಕ್ಷಿಸಿರಿ. ನಿಮ್ಮಂಥ ಪಕ್ವಮತಿಯಾದ ಓರ್ವ ರಾಜಕಾರಣಿಯು ಅವರಿಗೆ ವಿಷಯಗಳನ್ನು ಮನಗಾಣಿಸಬೇಕು. ಈ ಎಲ್ಲ ವಿಭಾಗಗಳ ಪ್ರತಿನಿಧಿಗಳು ದೆಹಲಿಯಲ್ಲಿ ಜಮಾಅತೆ ಇಸ್ಲಾಮಿಯ ನಾಯಕತ್ವದಲ್ಲಿ ಒಟ್ಟಾಗಿ ಕೆಲಸ ಮಾಡುತ್ತಿದ್ದಾರೆ. ದೇವುಬಂದ್, ಸಲಫಿ, ಬರೇಲ್ವಿ ಮತ್ತು ಜಮಾಅತ್ ಹೀಗೆ ಎಲ್ಲರೂ ಹೊಂದಾಣಿಕೆಯಿಂದ ಕೆಲಸ ಮಾಡುತ್ತಿದ್ದಾರೆ.

ಜಮಾಅತೆ ಇಸ್ಲಾಮಿಯು ಯಾವುದೇ ರಾಜಕೀಯ ಅಥವಾ ಧಾರ್ಮಿಕ ಸಂಘಟನೆಯ ನೆರಳಲ್ಲಿ ಬೆಳೆದಿಲ್ಲ. ಅದು ಎತ್ತಿ ಹಿಡಿದಿರುವ ಮೌಲ್ಯಗಳ ಬಲದಿಂದ ಅದು ನಿಂತಿದೆ.ಅದು ದೇವನ ಆಂದೋಲನ. ಪ್ರವಾದಿಯವರ ಆಂದೋಲನ. ಆದ್ದರಿಂದ ಅವರು ಆತ್ಮ ವಿಶ್ವಾಸದಿಂದ ಮುಂದೆ ಸಾಗುವರು. ಭಾರತವು ನಮ್ಮ ತಾಯಿ ನಾಡು. ಭಾರತೀಯ ಜನತೆಯು ನಮ್ಮ ಸಹೋದರರು. ತಾಯಿನಾಡಿನ ಉನ್ನತಿ ಮತ್ತು ಕಲ್ಯಾಣಕಾರಿ ಸೇವೆಯೇ ನೈಜ ಇಸ್ಲಾಮಿ ಸೇವೆ.

ಇತರರಿಗೆ ಭಯೋತ್ಪಾದನೆಯ ಮೊಹರು ಹಾಕುವ ಎಲ್ಲರೊಡನೆ ನನಗೆ ಹೇಳಲಿಕ್ಕಿರುವುದಿಷ್ಟೆ; ಸಾಕು ಮಿತ್ರರೇ ಸಾಕು, ಈ ಆಟ ಬೆಂಕಿಯಾಟ.





**ಹೋಲಿ ರಮಝಾನ್ ಕಾರ್ಯಕ್ರಮ**
ಪ್ರತಿದಿನ ರಾತ್ರಿ 10 ಗಂಟೆಗೆ.
ಮರು ಪ್ರಸಾರ ಮಧ್ಯಾಹ್ನ 2:30ಕ್ಕೆ

**ರಮಝಾನ್ ನಸೀಹತ್**
ಪ್ರತಿದಿನ ರಾತ್ರಿ 7:30ಕ್ಕೆ.
ಮರು ಪ್ರಸಾರ ಮಧ್ಯಾಹ್ನ 2:00ಕ್ಕೆ

ಕಥೆ

# ಬಾಳು ಕೊಟ್ಟವರು

ಇಮ್ರಾನ್ ಉಳ್ಳಾಲ

**ಒ**ಪ್ಪನ ಪಾಟ್, ಮ್ಯೊಲಾಂಜಿ ಶಾಸ್ತ್ರ, ಮನೆಯಿಡೀ ಮಕ್ಕಳ ಮತ್ತು ಸಂಬಂಧಿಕರ ಗಜಿಬಿಜಿ. ಇದೆಲ್ಲದರ ನಡುವೆ ಸುಮ್ಮನೆ ಕುಳಿತಿದ್ದಳು ಆಯಿಶಾ. ಮ್ಯೊಲಾಂಜಿ ಇಡಲೆಂದು ಗೆಳತಿಯರೆದುರು ಕೈಚಾಚಿ ಕುಳಿತಿದ್ದಳು. ವಾಸ್ತವದಲ್ಲಿ ಅವಳ ಮನಸ್ಸು ಚಿಂತೆಗಳ ಸುತ್ತ ಗಿರಕಿ ಹೊಡೆಯುತ್ತಿತ್ತು. ಕೈಯನ್ನು ಒಮ್ಮೆ ನೋಡಿದಳು. ಅಂಗೈಯ ಮಧ್ಯದಲ್ಲಿ ಮೆಹಂದಿ ಚಿತ್ತಾರದ ನಡುವೆ ಆಯಿಶಾ ಆರಿಫ್ ಎಂದು ಸುಂದರವಾಗಿ ಬರೆಯಲಾಗಿತ್ತು. ಆರಿಫ್ ಎಂದು ಮದುಮಗನ ಹೆಸರು. ನಾಳೆ ಆಯಿಶಾಳ ಮದುವೆ. ಇಂದು ಮ್ಯೊಲಾಂಜಿ ಶಾಸ್ತ್ರ. ಮೂಗಿಗೆ ಘಮ್ಮೆಂದು ಬಡಿಯುವ ಮ್ಯೆಲಾಂಜಿಯ ಪರಿಮಳ. ಅದೇ ರೀತಿ ಗೋಡೆಗೆ ಒರೆಸಲಾಗಿದ್ದ ಪೈಂಟಿನ ವಿಶಿಷ್ಟ ಪರಿಮಳ, ಮನೆಯ ತುಂಬಾ ನೆಂಟರು. ಆ ಜನಗಳ ಓಡಾಟದ ಮಧ್ಯೆ ಆಯಿಶಾ ಕಂಡಳು ತನ್ನ ಅಬ್ಬನ ಸೊರಗಿದ ಮುಖ. ಯಾವಾಗಲೂ ಸಂತೋಷದಿಂದ ಇರುವವರು ಇಂದು ಸೊರಗಿದ್ದಾರೆ. ದೃಢಕಾಯರಾಗಿದ್ದ ತನ್ನ ಅಬ್ಬನಿಗೆ ಮದುವೆ ವಯಸ್ಸಿಗೆ ಬಂದ ಇಷ್ಟು ದೊಡ್ಡ ಹೆಣ್ಣು ಮಗಳಿದ್ದಾಳೆ ಎಂದರೆ ಯಾರೂ ನಂಬುತ್ತಿರಲಿಲ್ಲ. ಈಗ ಅವರ ವಯಸ್ಸಿಗೂ ಮೀರಿದ ಮುಪ್ಪು ಆವರಿಸಿದೆ



ಎಂದು ಅವರ ಗುಳಿಬಿದ್ದ ಕಣ್ಣುಗಳು, ಸಣಕಲಾದ ಶರೀರ ಸೂಚಿಸುತ್ತಿತ್ತು. ಯಾವಾಗಲೂ ಹಸನ್ಮುಖಿಯಾಗಿರುತ್ತಿದ್ದ ಅಬ್ಬ ಗಂಭೀರವಾಗಲು ಕಾರಣವೇನು ಎಂದು ಯೋಚಿಸಿದಳು.

ವರದಕ್ಷಿಣೆ ಎಂಬುದು ಇಂದು ಸಮಾಜದಲ್ಲಿರುವ ಬಡ ಹೆಣ್ಣು ಮಕ್ಕಳ ಜೀವನವನ್ನು ಜೀವಂತವಾಗಿ ಸುಟ್ಟು ತಿನ್ನುವ ಜ್ವಾಲೆಯಾಗಿ ಮಾರ್ಪಟ್ಟಿದೆ.

ಹುಡುಗ ಗುಣವಂತ, ಯಾವುದೇ ದುರಾಭ್ಯಾಸಗಳಿಲ್ಲ. ಅಲ್ಲದೆ ಕೈತುಂಬಾ ಸಂಬಳವಿರುವ ಒಳ್ಳೆಯ ಉದ್ಯೋಗದಲ್ಲಿದ್ದಾನೆ. ಮೇಲಾಗಿ ನಿಮ್ಮ ಆಯಿಶಾಳನ್ನು ನೋಡಿ ಒಪ್ಪಿದ್ದಾನೆ ಎಂದು ಬ್ರೋಕರ್ ಅಬ್ಬು ಹೇಳಿದಾಗ ಮ್ಯೊದಿನ್‌ರವರು ತುಂಬಾ ಖುಷಿಯಾಗಿದ್ದರು.

ಹೆಣ್ಣು ನೋಡುವ ಶಾಸ್ತ್ರ ಮುಗಿದ ನಂತರ ಇದ್ದಕ್ಕಿದ್ದಂತೆ ಬ್ರೋಕರ್ ಅಬ್ಬುರ ಮೂಲಕ 2 ಲಕ್ಷ ವರದಕ್ಷಿಣೆ ವಿಚಾರ ಮುಂದಿಟ್ಟಾಗ ಮ್ಯೊದಿನ್‌ರವರು ಒಮ್ಮೆಲೇ ಕುಗ್ಗಿ ಹೋಗಿದ್ದರು. ಅವರಿಗೆ ಏನೂ ತೋಚದಾಯಿತು. ನಿಶ್ಚಿತಾರ್ಥವಾದ ಮದುವೆ ನಿಂತು ಹೋದರೆ ಮನೆ ಮರ್ಯಾದೆ ಬೀದಿ ಪಾಲಾಗುತ್ತದೆ. ಅಲ್ಲದೆ ನಡೆಯಬೇಕಾಗಿದ್ದ ನನ್ನ ಮಗಳ ಮದುವೆ ಆಗದೇ ಇದ್ದರೆ ಬೇರೆ ಯಾವ ಗಂಡು ಕೂಡ ನನ್ನ ಮಗಳನ್ನು ಮದುವೆಯಾಗಲು ಮುಂದೆ ಬರಲಿಕ್ಕಿಲ್ಲ ಎಂದು ತನ್ನ ಮಗಳಿಗಾಗಿ ಮ್ಯೊದಿನ್‌ರವರು ವರದಕ್ಷಿಣೆ ಕೊಡುವುದಾಗಿ ಮಾತು ಕೊಟ್ಟಿದ್ದರು.

ತಾಯಿಯ ಚಿನ್ನ ಮತ್ತು ಅಜ್ಜಿ ಉಳಿಸಿಟ್ಟು ಹೋಗಿದ್ದ ಅಷ್ಟು-ಇಷ್ಟು ಚಿನ್ನವನ್ನು ಒಂದುಗೂಡಿಸಿ 20 ಪವನ್ ಚಿನ್ನವನ್ನು ಗಂಡಿನ ಕಡೆಯವರ ಆದೇಶದ ಮೇರೆಗೆ ಹೊಸ ಮಾದರಿಯಲ್ಲಿ ಕೊಳ್ಳಲಾಯಿತು. ಆದರೆ ಇನ್ನುಳಿದ 10 ಪವನ್ ಚಿನ್ನಕ್ಕೆ ಎಲ್ಲಿ ಹೋಗುವುದು? ಯಾರಲ್ಲಿ ಕೇಳುವುದು ಎಂದು ಮ್ಯೊದಿನ್‌ರವರಿಗೆ ತೋಚಲಿಲ್ಲ. ಅಲ್ಲದೆ ವರದಕ್ಷಿಣೆ ಹಣವನ್ನು ನಿಕಾಹ್‌ಗೆ 1 ಗಂಟೆ ಮುಂಚಿತವಾಗಿ ತಲುಪಿಸುವುದಾಗಿ ಅಬ್ಬ ಮಾತು ಕೊಟ್ಟಿದ್ದರು. ವರದಕ್ಷಿಣೆ ಹಣ ಹೇಳಿದ ಸಮಯಕ್ಕೆ ಕೊಡದಿದ್ದರೆ ನಿಕಾಹ್ ನಡೆಯುವುದಿಲ್ಲ ಎಂದು ಖಡಾಖಂಡಿತವಾಗಿ ಆರಿಫ್‌ನ ತಂದೆ ಅಬ್ಬನ ಬಳಿ ಹೇಳಿದ್ದರು. ಇನ್ನು ಮದುವೆಗೆ ಉಳಿದಿರುವುದು ಕೇವಲ ಒಂದೇ ದಿನ. ಎಷ್ಟೇ ಪ್ರಯತ್ನಪಟ್ಟರೂ ಇನ್ನುಳಿದ ಹಣ ಮತ್ತು ಚಿನ್ನವನ್ನು ಹೊಂದಿಸಲು ಅವರಿಗೆ ಸಾಧ್ಯವಿಲ್ಲ. ತನ್ನ ಮದುವೆ ನಡೆಯದಿದ್ದರೆ ಇಷ್ಟು ದಿನಗಳ ಕಾಲ ನನ್ನ ಮದುವೆಯ ನಿರೀಕ್ಷೆಯಲ್ಲೇ ಕಾದು ನಿಂತ ನನ್ನ ತಾಯಿ ಬದುಕುವಳೇ? ಉಹುಂ! ಇಲ್ಲ, ಹಾಗಾಗಬಾರದು. ಮನವಿಡೀ ಗೊಂದಲದ ಗೂಡಾಗಿತ್ತು. ಹೀಗೆಲ್ಲಾ ಆಲೋಚಿಸುತ್ತಿದ್ದವಳನ್ನು ವಾಸ್ತವ ಲೋಕಕ್ಕೆ ಕರೆತಂದದ್ದು ಗೆಳತಿ ರಾಬಿಯಾ. "ಏನೇ? ಅಲ್ಲ, ಅಷ್ಪೊತ್ತಿನಿಂದ ನೋಡ್ತಾ ಇದ್ದೀನಿ. ಒಂಥರಾ ಇದ್ದೀಯಲ್ಲೇ. ಮದುಮಗಳು ನಗುನಗುತ್ತಾ ಇರಬೇಕು. ನೀನೇಕೆ ಮಂಕಾಗಿ ಕೂತಿದ್ದೀಯಾ? ಓ... ಆರಿಫ್‌ನ ನೆನಪು ಆಗುತ್ತಾ ಇದೆಯಾ? ಯಾವಾಗ ನಾಳೆ ಆಗುವುದು ಎಂದು ಯೋಚಿಸುತ್ತಾ ಇದ್ದೀಯಾ" ಎಂದು ಗೆಳತಿ ಆಯಿಶಾಳ ಕೆನ್ನೆ ಹಿಡಿದು ಕೇಳಿದಾಗ ಏನೂ ಹೇಳದೇ ತನ್ನ ಕೋಣೆಗೆ ಎದ್ದು ಹೋದ ಆಯಿಶಾಳನ್ನು ಆತಂಕದಿಂದಲೇ ಹಿಂಬಾಲಿಸಿದಳು ರಾಬಿಯಾ.

ಗೆಳತಿಯ ಇರುವಿಕೆಯನ್ನರಿತ ಆಯಿಶಾ ಅವಳ ಸಮೀಪಕ್ಕೆ ಬಂದು ಅವಳ ಎದೆಗೊರಗಿ ಅತ್ತುಬಿಟ್ಟಳು. ಆಯಿಶಾಳ ಅನಿರೀಕ್ಷಿತ ವರ್ತನೆಯಿಂದ ಆಶ್ಚರ್ಯಕ್ಕೊಳಗಾಗಿದ್ದ ರಾಬಿಯಾ ಅವಳೇ ಹೇಳುವ ವರೆಗೆ ಇವಳೇನೂ ಕೇಳಲಿಲ್ಲ. ಕೆಲವು ನಿಮಿಷಗಳ ನಂತರ ಚೇತರಿಸಿಕೊಂಡ ಆಯಿಶಾ, ತನ್ನ ಅಬ್ಬ ವರದಕ್ಷಿಣೆ ಹೊಂದಿಸಲಿಕ್ಕಾಗಿ ಪಡುತ್ತಿರುವ ಬವಣೆ, ತನ್ನ ಮನೆಯ ಪರಿಸ್ಥಿತಿ, ಹೀಗೆ ಮನದಲ್ಲಿದ್ದ ಬೇಗೆಯನ್ನು ಒಂದೊಂದಾಗಿ ಹೊರಹಾಕಿದಳು. ಅವಳ ಮಾತನ್ನು ಆಲಿಸಿದ ರಾಬಿಯಾಳಿಗೆ ದುಃಖದ ಜೊತೆಗೆ ಭಯವೂ ಆಗಿತ್ತು. ನಾಳೆ ತನ್ನ ಪ್ರಾಣ ಸ್ನೇಹಿತೆಯ ಮದುವೆ ನಡೆಯಬಹುದೇ? ವರದಕ್ಷಿಣೆ ವರದಕ್ಷಿಣೆ ಎಂದು ಯಾಕೆ ಈ ಬಡ ಹೆಣ್ಣು ಮಕ್ಕಳ ಜೀವ ಹಿಂಡುತ್ತಾರೋ ಯಾ ರಬ್ಬೇ! ನನ್ನ ಗೆಳತಿಯನ್ನು ವರದಕ್ಷಿಣೆ ಎಂಬ ಪಿಶಾಚಿಯ ಬಾಯಿಯಿಂದ ರಕ್ಷಿಸು. ಅವಳ ಕತ್ತಲಾದ ಬಾಳನ್ನು ಬೆಳಗಿಸು ಎಂದು ಮನದಲ್ಲೇ ಮೊರೆಯಿಟ್ಟಳು. ಇವರಿಬ್ಬರ ಆಲೋಚನೆಗೆ ಕಡಿವಾಣ ಹಾಕುವಂತೆ ಗಡಿಯಾರವೂ ತನ್ನ ದಿನಚರಿಯಂತೆ 6 ಗಂಟೆ ಬಾರಿಸಿದಾಗ ವಾಸ್ತವಕ್ಕಿಳಿದ ರಾಬಿಯಾ. "ನಾನು ಬಂದು ತುಂಬಾ ಹೊತ್ತಾಯ್ತು. ನನ್ನನ್ನು ಮನೆಯಲ್ಲಿ ಕಾಯ್ತಾ ಇದ್ದಾರೆ. ನಾನು ಬೇಗ ಮನೆಗೆ ಹೋಗಬೇಕು" ಎಂದು ಹೊರಡಲು ಅನುವಾದ ರಾಬಿಯಾ ಮತ್ತೊಮ್ಮೆ ಆಯಿಶಾಳ ಕೈಹಿಡಿದು ಕೆಲವು ಸಾಂತ್ವನದ ನುಡಿಗಳನ್ನು ಹೇಳಿ ಒಲ್ಲದ ಮನಸ್ಸಿನಿಂದಲೇ ಹೊರಟಳು. ದಾರಿಯುದ್ದಕ್ಕೂ ಆಯಿಶಾಳ ಮಾತುಗಳು ಕಿವಿಗೆ ಅಪ್ಪಳಿಸಿದಂತಾಯಿತು. ತನ್ನ ಪ್ರಾಣ ಸ್ನೇಹಿತೆಗಾಗಿ ನಾನು ಏನೂ ಮಾಡಲು ಆಗುವುದಿಲ್ಲವೇ ಎಂದು ಅವಳು ತನ್ನಲ್ಲಿಯೇ ಪ್ರಶ್ನಿಸಿದಳು. ಹೌದು! ನಾನು ಏನಾದರೂ ಮಾಡಬೇಕು ಎಂದು ಮನದಲ್ಲೇ ಒಂದು ದೃಢನಿರ್ಧಾರ ಕೈಗೊಂಡಿದ್ದಳು.

❖ ❖ ❖

'ಅಲ್ಲಾಹು ಅಕ್ಬರ್ ಅಲ್ಲಾಹು ಅಕ್ಬರ್' ಮಸೀದಿಯಲ್ಲಿ ಸುಬಹ್ ಬಾಂಗ್ ಕೇಳಿಸುತ್ತಿತ್ತು. ಎಚ್ಚರಗೊಂಡ ಆಯಿಶಾ ಬೇಗನೇ ವುಝೂ ಮುಗಿಸಿ ನಮಾಝ್ ಮಾಡಿದಳು. ನಂತರ ಎರಡೂ ಕೈಗಳನ್ನು ಮೇಲಕ್ಕೆತ್ತಿ, "ಯಾ ಅಲ್ಲಾಹ್! ನನ್ನನ್ನು, ನನ್ನ ಪರಿವಾರವನ್ನು ರಕ್ಷಿಸು. ನನ್ನ ಅಬ್ಬ ಮತ್ತು ಉಮ್ಮನಿಗೆ ಸಂಯಮ ಮತ್ತು ಧೈರ್ಯವನ್ನು ನೀಡು ಯಾರಬ್ಬೇ" ಎಂದು ಮೊರೆಯಿಟ್ಟಳು. ಹಾಗೆಯೇ ಕಪಾಟಿನಲ್ಲಿ ಭದ್ರವಾಗಿಟ್ಟಿದ್ದ ಕುರ್‌ಆನ್ ತೆಗೆದು ಓದಲಾರಂಭಿಸಿದಳು. ಮನೆಯಿಡೀ ಸ್ಮಶಾನ ಮೌನ, ದುಃಖದ ವಾತಾವರಣ. ವರದಕ್ಷಿಣೆ ಕೊಡಬೇಕಾಗಿದ್ದ ಸಮಯ ಮೀರಿಯಾಗಿತ್ತು. ತನ್ನ ಮಗಳ ಮದುವೆ ನಡೆಯುವುದಿಲ್ಲವೆಂದು ಮ್ಯೊದಿನ್‌ರವರಿಗೆ ಖಾತ್ರಿಯಾಗಿತ್ತು. ಈಗೇನು ಮಾಡುವುದೆಂದು ಮುಖವನ್ನು ಸೆರಗಿನಿಂದ ಮುಚ್ಚಿ ಅಳುತ್ತಿದ್ದ ತಾಯಿ. ಇಂತಹ ಸನ್ನಿವೇಶವನ್ನು ಮೊದಲೇ ನಿರೀಕ್ಷಿಸಿದ್ದ ಆಯಿಶಾ ಅಳುತ್ತಿರಲಿಲ್ಲ. ಮೂಕಪ್ರೇಕ್ಷಕಿಯಾಗಿದ್ದಳು. ಎದೆಯಲ್ಲಿ ಬೆಂಕಿ ಉರಿಯುತ್ತಿತ್ತು. ಬಂಧು-ಬಳಗದವರು ತಂದೆ-ತಾಯಿಗೆ ಸಮಾಧಾನ ಹೇಳುತ್ತಿದ್ದರು. ಆದರೆ ಶಿಲೆಯಂತಿದ್ದ ಆಯಿಶಾಳಿಗೆ ಸಮಾಧಾನ ಹೇಳಲು ಯಾರೂ ಮುಂದೆ ಬರಲಿಲ್ಲ, ಆಪ್ತ ಗೆಳತಿಯಾದ ರಾಬಿಯಾಳನ್ನು ಬಿಟ್ಟು. ಆಯಿಶಾಳ ಮನಸ್ಸಿನ ತುಮುಲವನ್ನರಿತ ರಾಬಿಯಾ ತಾನೂ ಮೌನಿಯಾಗಿದ್ದಳು.

ಈಗ ಎಲ್ಲರ ಮುಂದೆ ಒಂದೇ ಪ್ರಶ್ನೆ- ಮುಂದೇನು?

ಆಗ ಬಂದವನೇ ನೌಶಾದ್, ಎದೆಗೆ ಕೈಯೊತ್ತಿ ಬೀಳುತ್ತಿದ್ದ ಮ್ಯೊದಿನ್‌ರವರಿಗೆ ಆಸರೆಯಾಗಿ ಬಂದು ಅವರ ಕೈಹಿಡಿದು ಅವರನ್ನು ಸಮಾಧಾನಪಡಿಸಿ, "ನೀವೇನೂ ಚಿಂತಿಸಬೇಡಿ ಕಾಕಾ. ನಿಮ್ಮ ಮಗಳು ಆಯಿಶಾಳನ್ನು ನಾನು ಮದುವೆಯಾಗುತ್ತೇನೆ. ನನ್ನ ಮನೆಯವರ ಸಂಪೂರ್ಣ ಒಪ್ಪಿಗೆಯಿದೆ. ನೀವು ವರದಕ್ಷಿಣೆ ಕೊಡಬೇಕಾಗಿಲ್ಲ. ಈಗಲೂ ಇನ್ನು ಮುಂದೆಯೂ. ನಿಮ್ಮ ಅಭ್ಯಂತರವಿಲ್ಲದಿದ್ದರೆ ನಿಮ್ಮ ಮಗಳು ಆಯಿಶಾಳನ್ನು ನಾನು ನಿಕಾಹ್ ಆಗುತ್ತೇನೆ" ಎಂದಾಗ ಮ್ಯೊದಿನ್‌ರಿಗೆ ಹೋದ ಜೀವ ಮರಳಿದಂತಾಯಿತು. ತಾನು ಕನಸು ಕಾಣುವುದೋ ಎಂದು ನೆನೆಸಿದರು. ತಾನು ಕೇಳುವುದು ನನಸು ಎಂದು ತಿಳಿದಾಕ್ಷಣ ಅವರ ಮುಖದಲ್ಲಿ ಹೊಸ ಚೈತನ್ಯ ಮೂಡಿತು. ಅವರ ಕಣ್ಣಲ್ಲಿ ಆನಂದಭಾಷ್ಪ ಹರಿಯಿತು. ಅವರು ನೌಶಾದ್‌ನ ಕೈಹಿಡಿದು ನನ್ನ ಹರಾಜಾಗುತ್ತಿದ್ದ ಮರ್ಯಾದೆಯನ್ನು ನೀನು ಉಳಿಸಿದೆ ಎಂದು ಬಿಕ್ಕಿಬಿಕ್ಕಿ ಅತ್ತರು. ಆಯಿಶಾ ಇಂತಹ ಅನಿರೀಕ್ಷಿತ ಸನ್ನಿವೇಶವನ್ನು ಕನಸಲ್ಲೂ ನೆನೆಸಿರಲಿಲ್ಲ. ನಿಂತಲ್ಲೇ ದೇವನನ್ನು ಸ್ಮರಿಸಿದಳು.

ಆಯಿಶಾಳ ಪರಿಸ್ಥಿತಿಯನ್ನರಿತ ನೌಶಾದ್ ಅವಳ ಸಮೀಪಕ್ಕೆ ಬಂದು, "ರಾತ್ರಿ ಮನೆಯಲ್ಲಿ ರಾಬಿಯಾ ನನ್ನ ಬಳಿ ನಿನ್ನ ಕಥೆಯನ್ನು ಹೇಳಿದಳು. ತನಗಾಗಿ ಏನೂ ಮಾಡಲು ಸಿದ್ಧನಿದ್ದ ಅಣ್ಣನಲ್ಲಿ ತನ್ನ ಗೆಳತಿಗೆ ಬಾಳು ಕೊಡಲು ನಿನ್ನಿಂದ ಸಾಧ್ಯವೇ ಎಂದು ಕೇಳಿದಳು. 'ಅಣ್ಣಾ, ನೀನು ಆಯಿಶಾಳನ್ನು ಮದುವೆಯಾಗುತ್ತೀಯಾ?' ಎಂಬ ಮುಗ್ಧ ಪ್ರಶ್ನೆಗೆ ಮೊದಲು ಕಕ್ಕಾಬಿಕ್ಕಿಯಾಗಿದ್ದೆ. ಯಾವುದೇ ಅಪೇಕ್ಷೆಯಿಲ್ಲದೆ ಒಂದು ಬಡ ಹೆಣ್ಣಿಗೆ ಬಾಳು ಕೊಡುವುದು ಅಲ್ಲಾಹನಿಗೆ ಇಷ್ಟವಾದ ಕಾರ್ಯವಾಗಿದೆ. ರಾತ್ರಿಯಿಡೀ ಯೋಚಿಸಿ ಈ ನಿರ್ಧಾರಕ್ಕೆ ಬಂದೆ" ಎಂದಾಗ ಆಯಿಶಾಳಿಗೆ ಆಶ್ಚರ್ಯವಾಗಿತ್ತು. ತನ್ನ ಗೆಳತಿ ಬಹಳ ಎತ್ತರಕ್ಕೇರಿದಂತೆ ತೋರಿದಳು. ಹರಟೆ ಹೊಡೆಯಲು, ಟೈಂಪಾಸ್‌ಗಾಗಿ ಗೆಳೆತನ ಮಾಡುವ ಇಂದಿನ ಯುವಪೀಳಿಗೆಯಲ್ಲಿ ತನ್ನ ಜೀವನವನ್ನು ರೂಪಿಸಲು ತನ್ನ ಅಣ್ಣನನ್ನೇ ಮುಂದಿರಿಸಿದ ರಾಬಿಯಾ ಆಯಿಶಾಳ ಕಣ್ಣಿಗೆ ಮಹಾನ್ ನಕ್ಷತ್ರದಂತೆಯೇ ಕಂಡಳು.

"ಹೇಳು ಪ್ರಾಣ ಸ್ನೇಹಿತೆಗಾಗಿ ನಾನು ಮಾಡಿದ್ದು ಸರಿಯಲ್ಲವೇ?" ಎಂದು ರಾಬಿಯಾ ಕೇಳಿದಾಗ ಆಯಿಶಾ ಅವಳನ್ನು ಅಪ್ಪಿ ಬಿಕ್ಕಿಬಿಕ್ಕಿ ಅತ್ತಳು. ಈಗ ಮನೆಯ ವಾತಾವರಣವೇ ಬದಲಾಗಿತ್ತು.

ಧಾರಾಕಾರವಾಗಿ ಸುರಿದ ಮಳೆ ಒಮ್ಮೆಲೇ ನಿಂತು ಪ್ರಕೃತಿ ಶಾಂತವಾದಂತೆ ಮದುವೆ ಮನೆಯಲ್ಲಿ ಸಂತಸದ ವಾತಾವರಣ ಮೂಡಿತ್ತು.

## ನಿರ್ಣಯ

**ತಿರುಗುತ್ತಿದೆ ನಭೋಮಂಡಲದ**
**ಗ್ರಹಗಳೆಲ್ಲವೂ ಒಂದರ ಹಿಂದೊಂದು**
**ಕೆಲವೊಮ್ಮೆ ವಿಕೋಪಗಳು**
**ಸುನಾಮಿ, ಭೂಕಂಪ, ಜ್ವಾಲಾಮುಖಿ**
**ಹೇಳಿ ಇಲ್ಲಾರು ಸುಖಿ...?**
**ಜೀವನ ಸಾಗಿಸಲು ಇದೆಯೊಂದು ಪಥ**
**ಹೃದಯದಲಿ ಇರಬೇಕು ಶಪಥ**
**ನಂಬುವುದೊಬ್ಬನನ್ನೆ; ಸಿಕ್ಕಿದನ್ನೆಲ್ಲಾ ಅಲ್ಲ**
**ಅವನಿಗೇನು ಗೊತ್ತು ಜೋತಿಷಿಗೆ**
**ಮರುಗಳಿಗೆಯ ಭವಿಷ್ಯ**
**ನೋಡಿಲ್ಲವೇ? ಅವನ ನಂಬಿದವರ ಸ್ಥಿತಿ**
**ಅದೆಷ್ಟು ಕನಸುಗಳು**
**ಮೋಡಗಳ ಸೀಳಿ, ಮುಗಿಲಲ್ಲಿ ತೇಲಿ**
**ಹಾರುವ ಆ ಹಕ್ಕಿಯ ಹೊಟ್ಟೆಯೊಳಗೆ**
**ಭೂಸ್ಪರ್ಶಿಸಲು ಕೆಲವೇ ಕ್ಷಣ**
**ತಮ್ಮವರ ಕಾಣ ತವಕಿಸುತ್ತಿದ್ದ ಮನ**
**ವಿಧಿ ಬಗೆದದ್ದೇ ಬೇರೆ**
**ಕೆಂಜಾರು ಇವರೆಲ್ಲರಿಗೂ ಮಸಣ**

**ಎಚ್.ಆರ್. ಅರ್ಕುಳ**

## ಇರಾಕ್‌ನಿಂದ ಅಮೇರಿಕ ಸೇನೆ ನಿರ್ಗಮನ



**ಬಗ್ದಾದ್: ಇರಾಕ್‌ನಲ್ಲಿ ಬೀಡು ಬಿಟ್ಟಿದ್ದ ಅಮೇರಿಕನ್ ಸೇನೆಯ ಪೈಕಿ ನಾಲ್ಕು ಸಾವಿರ ಯೋಧರ ಕೊನೆಯ ಸೇನಾ ತುಕಡಿಯು ಪೂರ್ವ ನಿರ್ಧರಿತ ಸಮಯಕ್ಕಿಂತ (ಆಗಸ್ಟ್-31) ಎರಡು ವಾರ ಮೊದಲೇ (ಆಗಸ್ಟ್-19) ದೇಶದಿಂದ ನಿರ್ಗಮಿಸಿದೆ. ಆದಾಗಿಯೂ 56 ಸಾವಿರ ಅಮೇರಿಕನ್ ಅಧಿಕಾರಿಗಳು ಇರಾಕ್‌ನಲ್ಲಿ ಉಳಿಯಲಿದ್ದಾರೆ. ಜುಲೈ 2011ರ ವೇಳೆಗೆ ಆ ಸಂಖ್ಯೆಯು 50 ಸಾವಿರಕ್ಕೆ ಇಳಿಯಲಿದೆ.**

**ಪೆಂಟಗನ್‌ನ ವರದಿಯ ಪ್ರಕಾರ, ಸರಕಾರಿ ನೆಲೆಯಲ್ಲಿ ಆಪರೇಶನ್ ಫ್ರೀಡಮ್ ಇರಾಕ್ ಈ ತಿಂಗಳ ಅಂತ್ಯದೊಂದಿಗೆ ಕೊನೆಗೊಳ್ಳಲಿದೆ. ಆ ಬಳಿಕ ಅಮೇರಿಕನ್ ಸೇನೆಯು ಇರಾಕಿ ಆಡಳಿತದ ವಿಶೇಷ ಮಾರ್ಗದರ್ಶನದಂತೆ ಕೆಲಸ ಮಾಡಲಿದೆ ಹಾಗೂ ಇರಾಕ್‌ನಲ್ಲಿ ಅಮೇರಿಕದ ಹಿತವನ್ನು ಕಾಪಾಡಲಿದೆ.**

**"ನಾವು ಇರಾಕ್‌ನಿಂದ ನಿರ್ಗಮಿಸಿದ್ದು ಮಾತ್ರ. ಅಲ್ಲಿ ಇನ್ನೂ ಹಲವು ಪ್ರಮುಖ ಕೆಲಸಗಳು ಬಾಕಿ ಉಳಿದಿವೆ" ಎಂದು ಅಮೇರಿಕನ್ ವಿದೇಶ ಸಚಿವಾಲಯದ ವಕ್ತಾರ ಫಿಲಿಪ್ ಕ್ರೌಲೀ ಹೇಳಿದ್ದಾರೆ. ಅದೇನಿದ್ದರೂ ಇರಾಕ್ ಯುದ್ಧವು ಅಮೇರಿಕಕ್ಕೆ ಬಹಳ ತುಟ್ಟಿಯಾಗಿ ಪರಿಣಮಿಸಿದೆ. ಅದರಲ್ಲಿ ಅಮೇರಿಕಕ್ಕೆ ಸುಮಾರು ಹತ್ತು ಸಾವಿರ ಕೋಟಿ ಡಾಲರ್ ವೆಚ್ಚವಾಗಿತ್ತಲ್ಲದೆ, ತನ್ನ 4,400 ಸೇನಾ ಜವಾನರನ್ನು ಅದಕ್ಕೆ ಕಳಕೊಳ್ಳಬೇಕಾಗಿತ್ತು.**

## ಇಸ್ರೇಲಿ ಜೈಲಿನಲ್ಲಿ 300 ಮಕ್ಕಳು

**ಆಕ್ರಮಿತ ಬೈತುಲ್ ಮುಕದ್ದಸ್:** ಯಹೂದಿ ವಸತಿಗಳನ್ನು ವಿಸ್ತರಿಸಲು ದ್ವೇಶಿಸಿರುವ ಬೈತುಲ್ ಮುಕದ್ದಸ್‌ನ ಪ್ರದೇಶಗಳಲ್ಲಿ ಇಸ್ರೇಲ್ ಆಡಳಿತವು ಫೆಲೆಸ್ತೀನಿನ ಮಕ್ಕಳ ವಿರುದ್ಧ ಕಾರ್ಯಾಚರಣೆಯಲ್ಲಿ ತೊಡಗಿದೆ ಎಂದು 'ಫೆಲೆಸ್ತೀನ್ ಅಸೋಸಿಯೇಶನ್ ಫಾರ್ ಸಿವಿಲಿಯನ್ ರೈಟ್ಸ್' ಎಂಬ ಸಂಸ್ಥೆ ವರದಿ ಮಾಡಿದೆ. ಅದು ಸಲ್ಲಿಸಿದ ವರದಿಯ ಪ್ರಕಾರ, ಝಿಯೋನಿಸ್ಟ್ ಪೊಲೀಸರು ಮತ್ತು ಯೋಧರು ಮಸ್ಜಿದುಲ್ ಅಕ್ಸಾದ ಉತ್ತರಕ್ಕಿರುವ ಸಲ್ವಾನ್ ಎಂಬ ಪ್ರದೇಶದಿಂದ ಸುಮಾರು 300 ಫೆಲೆಸ್ತೀನಿ ಮಕ್ಕಳನ್ನು ಬಂಧಿಸಿದ್ದಾರೆ. ಆ ಪೈಕಿ ಹೆಚ್ಚಿನ ಮಕ್ಕಳು 10ರಿಂದ 15 ವರ್ಷದೊಳಗಿನವರಾಗಿದ್ದಾರೆ.

## ಮ್ಯಾನ್ಮಾರ್‌ನಲ್ಲಿ ಮಹಾಚುನಾವಣೆ



**ಯಂಗೂನ್:** ಮ್ಯಾನ್ಮಾರ್‌ನ (ಬರ್ಮಾ) ಸೇನಾಡಳಿತವು ಇದೇ ಬರುವ ನವೆಂಬರ್ 7ರಂದು ಮಹಾ ಚುನಾವಣೆ ನಡೆಸುವುದಾಗಿ ಘೋಷಿಸಿದೆ. ಈ ರಾಷ್ಟ್ರದಲ್ಲಿ ಇಪ್ಪತ್ತು ವರ್ಷಗಳ ನಂತರ ನಡೆಯುತ್ತಿರುವ ಚುನಾವಣೆಯಾಗಿದೆ ಇದು. ಈ ಹಿಂದೆ, ಅಂದರೆ 1990ರಲ್ಲಿ ನಡೆದ ಚುನಾವಣೆಯಲ್ಲಿ ಪ್ರಜಾಪ್ರಭುತ್ವವಾದಿ ಆ್ಯಂಗ್ ಸಾನ್ ಸೂ ಕಿಯವರ ಪಕ್ಷಕ್ಕೆ ಸ್ಪಷ್ಟ ಬಹುಮತ ದೊರೆತಿತ್ತು. ಆದರೆ ಸೇನೆಯು ಅವರಿಗೆ ಆಡಳಿತ ಚುಕ್ಕಾಣಿ ವಹಿಸಿಕೊಡುವ ಬದಲು ಜೈಲಿಗೆ ತಳ್ಳಿತ್ತು ಹಾಗೂ ಅವರ ಪಕ್ಷದ ಮೇಲೆ ನಿಷೇಧ ಹೇರಿತ್ತು.

ಇದೀಗ ನೂತನ ಸಂವಿಧಾನದ ಪ್ರಕಾರ, ಸಂಸತ್ತಿನ 25 ಶೇಕಡ ಸ್ಥಾನಗಳನ್ನು ಸೇನೆಗೆ ಮೀಸಲಿರಿಸಲಾಗಿದೆ.

## ಗ್ರೌಂಡ್ ಝೀರೋ ಮಸ್ಜಿದ್: ಒಬಾಮಾ ಸ್ಪಷ್ಟೀಕರಣ



ಕೊಲಂಬಸ್: ನ್ಯೂಯಾರ್ಕ್‌ನಲ್ಲಿ ಗ್ರೌಂಡ್ ಝೀರೋ ಬಳಿ ಮುಸ್ಲಿಮ್ ಕಮ್ಯುನಿಟಿ ಸೆಂಟರ್ ಮತ್ತು ಮಸ್ಜಿದನ್ನು ನಿರ್ಮಿಸುವುದರ ವಿರುದ್ಧ ಎದ್ದ ವಿವಾದದಿಂದ ತನಗೇನೂ ಖೇದವುಂಟಾಗಿಲ್ಲ ಎಂದು ಅಮೇರಿಕನ್ ಅಧ್ಯಕ್ಷ ಬರಾಕ್ ಒಬಾಮಾ ಹೇಳಿದ್ದಾರೆ. ಈ ಹಿಂದೆ ಅವರು, ಮುಸ್ಲಿಮರಿಗೆ ಗ್ರೌಂಡ್ ಝೀರೋ ಸನಿಹದಲ್ಲಿ ಕಮ್ಯುನಿಟಿ ಸೆಂಟರ್ ಮತ್ತು ಮಸೀದಿ ನಿರ್ಮಿಸುವ ಹಕ್ಕು ಇದೆ ಎಂದಿದ್ದರು. ಅವರ ಈ ಹೇಳಿಕೆಯಿಂದ ದೇಶದಾದ್ಯಂತ ಬಿಸಿ ಬಿಸಿ ಚರ್ಚೆ ಆರಂಭವಾಗಿದೆ. ವಿಪಕ್ಷವಾಗಿರುವ ರಿಪಬ್ಲಿಕನ್ ಪಾರ್ಟಿಯು ಅವರ ಹೇಳಿಕೆಗೆ ತೀವ್ರ ಖಂಡನೆ ವ್ಯಕ್ತಪಡಿಸಿದೆಯಲ್ಲದೆ, ಅದರ ರಾಜಕೀಯ ಪ್ರಯೋಜನ ಪಡೆಯುವ ಹುನ್ನಾರದಲ್ಲಿಯೂ ತೊಡಗಿದೆ. ಈ ಹಿಂದೆ ವಿಶ್ವವಾಣಿಜ್ಯ ಕೇಂದ್ರ ಕಟ್ಟಡ ಇದ್ದ ಜಾಗಕ್ಕೆ ಈಗ ಗ್ರೌಂಡ್ ಝೀರೋ ಎಂದು ಹೇಳಲಾಗುತ್ತದೆ.

## 2011ರ ವರೆಗೆ ಸೇನಾ ತೆರವು ಸಾಧ್ಯವಿಲ್ಲ?

**ಕಾಬುಲ್: "ಅಫಘಾನಿಸ್ತಾನದಿಂದ ಸೇನೆ ತೆರವುಗೊಳಿಸಲು ಗಡು ವಿಧಿಸುವುದು ಉಚಿತವಲ್ಲ" ಎಂದು ಅಫಘಾನ್‌ನಲ್ಲಿ ಅಮೇರಿಕನ್ ಸೇನಾ ಕಮಾಂಡರ್ ಆಗಿರುವ ಜನರಲ್ ಡೇವಿಡ್ ಪೇಟ್ರಿಯಾಸ್ ಹೇಳಿರುವ ಬೆನ್ನಿಗೇ, "ಮುಂದಿನ ವರ್ಷ ಜುಲೈಯಿಂದ ಅಫಘಾನ್‌ನಲ್ಲಿರುವ ತನ್ನ ಸೇನೆಯನ್ನು ಹಂತಹಂತವಾಗಿ ಹಿಂದಕ್ಕೆ ಕರೆಸಲಾಗುವುದು" ಎಂದು ಅಮೇರಿಕದ ರಕ್ಷಣಾ ಸಚಿವ ಹೇಳಿಕೆಯಿತ್ತಿದ್ದಾರೆ.**

**ಅದೇ ವೇಳೆ, "ಅಫಘಾನ್ ಹೋರಾಟ ಒಂದು ಕ್ಲಿಷ್ಟಕರ ಹೋರಾಟ ಆಗಿದೆ. ಅದು ಮುಂದೆಯೂ ಕ್ಲಿಷ್ಟಕರವಾಗಿಯೇ ಇರು ವುದು. 2011ರ ವೇಳೆಗೆ ಆರಂಭವಾಗಲಿದೆ ಯೆನ್ನಲಾಗುವ ಸೇನಾ ತೆರವು ಪ್ರಕ್ರಿಯೆಯು ಈಗಿನ ಪರಿಸ್ಥಿತಿಯಲ್ಲಿ ಎಷ್ಟು ಸಮಂಜಸ ಎಂಬುದನ್ನು ಅಧ್ಯಕ್ಷ ಒಬಾಮರೂ ಸ್ಪಷ್ಟ ಪಡಿಸಿಲ್ಲ" ಎಂದು ಪೇಟ್ರಿಯಾಸ್ ಹೇಳಿದ್ದಾರೆ.**

## 'ಇಸ್ಲಾಮಿ' ಉಗ್ರ ವಿಜಯಕುಮಾರ್!



ವಾಷಿಂಗ್ಟನ್: ಇಸ್ಲಾಮಿ ಉಗ್ರನೆಂಬ ಆರೋಪದಲ್ಲಿ ಅಮೇರಿಕದಲ್ಲಿ ಬಂಧಿತನಾದ ವ್ಯಕ್ತಿ ಮುಂಬೈ ಮೂಲದ ವಿಜಯ ಕುಮಾರ್(40) ಎಂದು ವರದಿಯಾಗಿದೆ.

ಕಳೆದ ವಾರ ಜಾರ್ಜ್ ಬುಶ್ ವಿಮಾನ ನಿಲ್ದಾಣದಲ್ಲಿ ಬಂಧಿತನಾದ ಈತನ ಚೀಲದಲ್ಲಿ ಬಂದೂಕು, ಸ್ಫೋಟಕ ವಸ್ತುಗಳು ಹಾಗೂ ಉಗ್ರವಾದಕ್ಕೆ ಸಂಬಂಧಿಸಿದ ಪುಸ್ತಕಗಳು ಪತ್ತೆಯಾಗಿವೆ.

ಬಾಂಬ್ ನಿರ್ಮಿಸುವ, ಗೂಢಾಲೋಚನೆ ನಡೆಸುವ ಕೆಲವು ಪುಸ್ತಕಗಳೂ ದೊರೆತಿವೆ. ಈತನ ಬಂಧನವಾದ ಕೂಡಲೇ ಅಮೇರಿಕದಲ್ಲಿ ಭಾರತದ ಮುಸ್ಲಿಮ್ ಭಯೋತ್ಪಾದಕನ ಸೆರೆ ಯಾಗಿದೆಯೆಂದು ವ್ಯಾಪಕವಾಗಿ ಪ್ರಚಾರ ಮಾಡಲಾಗಿತ್ತು. ಮುಸ್ಲಿಮ್ ಉಗ್ರರ ಬೆಂಬಲದಿಂದ ಈತ ಅಮೇರಿಕಾಗೆ ಪ್ರವೇಶಿಸಿದನೆಂದು ಸಿ.ಎನ್.ಎನ್. ವರದಿ ಮಾಡಿತ್ತು.

ನಂತರ ನಡೆದ ವಿಚಾರಣೆಯಲ್ಲಿ ಭಾರತದ ಬಲಪಂಥೀಯ ಸಂಘಟನೆಗಳ ಭಯೋತ್ಪಾದಕ ಯೋಜನೆಗಳನ್ನು ಕಾರ್ಯಗತಗೊಳಿಸುವ ನಿಮಿತ್ತ ಬಂದಿರುವುದಾಗಿ ತಿಳಿದು ಬಂದಿದೆ. ಕಿರು ಚಿತ್ರಗಳ (ಡಾಕ್ಯುಮೆಂಟರಿ) ನಿರ್ದೇಶಕನಾದ ಈತ 'ಹಿಂದೂ ಕಾಂಗ್ರೆಸ್ ಆಫ್ ಅಮೇರಿಕಾ' ಎಂಬ ಸಂಘಟನೆ ನಡೆಸುವ ಸೆಮಿನಾರ್‌ನಲ್ಲಿ 'ಇಸ್ಲಾಮಿ ಭಯೋತ್ಪಾದನೆ'ಯ ಕುರಿತು ಮಾತನಾಡಲು ಬಂದಿದ್ದಾಗಿ ನ್ಯಾಯಾಲಯದಲ್ಲಿ ತಿಳಿಸಲಾಗಿದೆ. ಈತನಿಂದ ಅಮೇರಿಕಕ್ಕೆ ಯಾವುದೇ ಅಪಾಯವಿಲ್ಲವೆಂದೂ, ಆಕಾಡೆಮಿಯ ಅಗತ್ಯಕ್ಕಾಗಿ ಈ ಪುಸ್ತಕಗಳನ್ನು ಇಟ್ಟು ಕೊಂಡಿದ್ದಾಗಿಯೂ ಆತನ ವಕೀಲರು ಕೋರ್ಟಿನಲ್ಲಿ ವಾದಿಸಿದರು. ನಂತರ 50 ಸಾವಿರ ಡಾಲರ್ ದಂಡವನ್ನು 5 ಸಾವಿರಕ್ಕೆ ಇಳಿಸಲಾಯಿತು. ನಂತರ ಈತ ಶಾಂತಿಗಾಗಿ ಕೆಲಸ ಮಾಡುವ ಕಾರ್ಯಕರ್ತ ಎಂದು ಬಣ್ಣಿಸಿ ಅಮೇರಿಕಾದ ಕೋರ್ಟು ತೀರ್ಪಿತ್ತಿತು.

## ಲೆಬನಾನಿನಲ್ಲಿ ಫೆಲೆಸ್ತೀನಿಯರಿಗೆ ಉದ್ಯೋಗದ ಹಕ್ಕು

**ಬೈರೂತ್:** ಲೆಬನಾನ್ ಸಂಸತ್ತು ಫೆಲೆಸ್ತೀನಿಯರಿಗೆ ಪೂರ್ಣ ಪ್ರಮಾಣದ ಉದ್ಯೋಗ ಹೊಂದುವ ಹಕ್ಕನ್ನು ನೀಡಬಲ್ಲ ಅಧ್ಯಾದೇಶವನ್ನು ಮಂಜೂರು ಮಾಡಿದೆ. ಅದರ ಪ್ರಕಾರ, ಲೆಬನಾನಿನಾದ್ಯಂತ ನಿರಾಶ್ರಿತ ಜೀವನ ನಡೆಸುತ್ತಿರುವ ಸುಮಾರು ನಾಲ್ಕು ಲಕ್ಷ ಫೆಲೆಸ್ತೀನಿಯರ ಮೇಲೆ ಉದ್ಯೋಗ ಹೊಂದುವುದರ ಮೇಲಿದ್ದ ನಿರ್ಬಂಧವನ್ನು ರದ್ದು ಪಡಿಸಲಾಗಿದೆ. ಇನ್ನು ಆ ವಿದೇಶಿಯರಿಗೆ ಲೆಬನಾನಿನ ಹಲವು ಕ್ಷೇತ್ರ ಗಳಲ್ಲಿ ಉದ್ಯೋಗ ಅವಕಾಶ ಲಭಿಸಿದೆ. ಮಾತ್ರವಲ್ಲ, ಅವರು ಶಿಕ್ಷಣ ಮತ್ತು ಸಾಮಾಜಿಕ ಭದ್ರತೆಯೊಂದಿಗೆ ಉದ್ಯೋಗ ಮತ್ತು ಸ್ವೋದ್ಯೋಗವನ್ನು ಹೊಂದ ಬಹುದಾಗಿದೆ.

ಭೂಮಿಯಲ್ಲಿರುವುದನ್ನೆಲ್ಲ ನಿಮಗಾಗಿಯೇ ಸೃಷ್ಟಿಸಿದವನು ಆತನೇ.
ಬಳಿಕ ಗಗನದೆಡೆ ಗಮನ ಹರಿಸಿ ಸಪ್ತ ಗಗನಗಳಿಗೆ ರೂಪುಕೊಟ್ಟನು.
ಆತನು ಸಕಲ ವಿಷಯಗಳ ಜ್ಞಾನಿಯಾಗಿರುತ್ತಾನೆ.

(ಕುರ್‌ಆನ್ 2:29)

*Managing Partner*

**RAJA BRICKS & TILE INDUSTRIES**

*P.B. No. 34, Rajanagar, Sira Road,*
*Tumkur - 572 101. Karnataka, India*
*Ph: 0816 - 6531933/44/55, Fax: 0816 - 2211633*

**ಸನ್ಮಾರ್ಗ ಚಂದಾ ದರ**

| | | |
|---|---|---|
| ವಾರ್ಷಿಕ | ರೂ. | 390.00 |
| ಅರ್ಧವಾರ್ಷಿಕ | ರೂ. | 195.00 |
| ಗಲ್ಫ್ ರಾಷ್ಟ್ರಗಳಲ್ಲಿ | | |
| ವಾರ್ಷಿಕ | ರೂ. | 1,200.00 |
| ಅರ್ಧವಾರ್ಷಿಕ | ರೂ. | 650.00 |

## ಸನ್ಮಾರ್ಗ 25 ವರ್ಷಗಳ ಹಿಂದೆ

❖ ಸಂಪುಟ: 8 ❖ ಸಂಚಿಕೆ: 25 ❖ 1985 ಅಕ್ಟೋಬರ್ 06–12

### ಅಲ್ಪಸಂಖ್ಯಾತ ಆಯೋಗದ ಹೊಸ ಹೆಜ್ಜೆ!

ಅಲ್ಪಸಂಖ್ಯಾತ ಆಯೋಗದ ರಚನೆಯಿಂದ ಅಲ್ಪಸಂಖ್ಯಾತರ, ವಿಶೇಷತಃ ಮುಸಲ್ಮಾನರ ಚಿರಕಾಲದ ಕನಸೊಂದು ನನಸಾಗಿತ್ತು. ಅದರ ಪ್ರಥಮ ಅಧ್ಯಕ್ಷ ಜಸ್ಟಿಸ್ ಅನ್ಸಾರಿಯವರು ಆಯೋಗದ ಚಟುವಟಿಕೆಗಳ ಬಗ್ಗೆ ವಿಶೇಷ ಆಸಕ್ತಿಯಿರಿಸಿದ್ದರು. ಆದರೆ, ಆಯೋಗವನ್ನು ರಚಿಸಿದ ಜನತಾ ಸರಕಾರವು ಅದಕ್ಕೆ ಸಾಂವಿಧಾನಿಕ ಸ್ಥಾನಮಾನ ನೀಡಲೊಪ್ಪದ ಕಾರಣದಿಂದ ಅದರಿಂದ ನಿರೀಕ್ಷಿತ ಫಲ ಸಾಧನೆಯಾಗಲಿಲ್ಲ. ಅಂದು ಜನತಾ ಸರಕಾರದ ಖಂಡನೆಗೆ ಕಾಂಗ್ರೆಸ್ ಧುರೀಣರು ಅದಕ್ಕೇ ಪ್ರಬಲ ಅಸ್ತ್ರವಾಗಿ ಬಳಸಿದ್ದರು. ಆದರೆ ಕಾಂಗ್ರೆಸ್ ಅಧಿಕಾರಕ್ಕೆ ಮರಳಿದ ಬಳಿಕ ಆಯೋಗದ ಪರಿಸ್ಥಿತಿಯೇನೂ ಉತ್ತಮವಾಗಲಿಲ್ಲ. ಆಯೋಗವನ್ನು ವಿಸರ್ಜಿಸದಿರುವ ಔದಾರ್ಯವನ್ನಷ್ಟೇ ಅದು ತೋರಿತು. ಅದೇ ವೇಳೆ ಆಯೋಗವನ್ನು ನಿಷ್ಕ್ರಿಯಗೊಳಿಸುವ ಪ್ರಯತ್ನಕ್ಕೂ ತೊಡಗಿತು. ನಿವೃತ್ತ ನ್ಯಾಯಾಧೀಶ ಎಂ.ಹೆಚ್. ಬೇಗ್‌ರನ್ನು ಅದರ ಅಧ್ಯಕ್ಷರಾಗಿ ನೇಮಿಸಿದ್ದು, ಪ್ರಸ್ತುತ ಪ್ರಯತ್ನದ ಭಾಗವೇ ಆಗಿತ್ತು. ಬೇಗ್‌ರು, ಅಲ್ಪಸಂಖ್ಯಾತರಲ್ಲಿ ಬಹುಸಂಖ್ಯಾತರಾಗಿರುವ ಮುಸ್ಲಿಮರ ಭಾವನೆಗಳೊಂದಿಗೆ ಸರ್ವಥಾ ಸಹಮತವಿಲ್ಲದ ವ್ಯಕ್ತಿಯೆಂಬುದು ಅಜ್ಞಾತವಲ್ಲ. ಅವರ ಪೂರ್ವ ಚಟುವಟಿಕೆ ಮತ್ತು ಹೇಳಿಕೆಗಳೆಲ್ಲವೂ ಅದನ್ನು ಸ್ಪಷ್ಟೀಕರಿಸುತ್ತದೆ.

ಈಗ ಆಯೋಗವು ವಸ್ತುತಃ ಶೂನ್ಯಾವಸ್ಥೆಯನ್ನು ತಲುಪಿದೆಯೆಂದು ತಿಳಿದು ಬರುತ್ತದೆ. ಅದರ ಪಂಚ ಸದಸ್ಯರ ಅಧಿಕಾರಾವಧಿ ಮುಗಿದಿದೆ. ಕಾರ್ಯದರ್ಶಿಯ ಸೇವೆಯೂ ಕೊನೆಗೊಂಡಿದೆ. ಜತೆ ಕಾರ್ಯದರ್ಶಿ ಎಸ್.ಕೆ. ಝೂರನ್ನು ವರ್ಗಾಯಿಸಲಾಗಿದೆ. ಸದಸ್ಯರ ತೆರವಿನಿಂದ ಆಯೋಗದ ಸಕ್ರಿಯ ಚಟುವಟಿಕೆಗಳಿಗೆ ಯಾವ ತೊಂದರೆಯೂ ಆಗಿಲ್ಲವೆಂದು ಬೇಗ್ ಹೇಳಿದ್ದಾರೆಂದು ಯು.ಎನ್.ಐ. ವರದಿ ಮಾಡಿದೆ. ಮೂರು ತಿಂಗಳ ಹಿಂದೆ ಸರಕಾರಕ್ಕೆ ಸಲ್ಲಿಸಿದ ನಾಲ್ಕನೇ ವಾರ್ಷಿಕ ವರದಿಯಲ್ಲಿ ಆಯೋಗವನ್ನು ಇನ್ನಷ್ಟು ಸುಭದ್ರ ಮತ್ತು ಸಕ್ರಿಯಗೊಳಿಸಲಿಕ್ಕಾಗಿ ಶಿಫಾರಸ್ಸು ಮಾಡಿರುವುದಾಗಿ ಬೇಗ್ ಹೇಳಿದ್ದಾರೆ. ಸೂಕ್ತ ಅಧಿಕಾರವಿರುವ ನಿರ್ದಿಷ್ಟ ಆಯೋಗದಿಂದ ಎಲ್ಲ ಅಲ್ಪ ಸಂಖ್ಯಾತ, ಹಿಂದುಳಿದ ವರ್ಗಗಳ ದೂರುಗಳನ್ನು, ಸಂಕಷ್ಟಗಳನ್ನೂ ಪರಿಶೀಲಿಸಬಹುದೆಂದು ಅವರು ಅಭಿಪ್ರಾಯ ಪಟ್ಟಿದ್ದಾರೆ. (ಮುಖಪುಟದಿಂದ)

# ಕುರ್‌ಆನ್ ಪ್ರವಚನ




**ಬಿಜಾಪುರ:** ನಗರದ ಕಂದಗಲ್ ಹನಮಂತರಾಯ ರಂಗಮಂದಿರದಲ್ಲಿ ಜಮಾಅತೆ ಇಸ್ಲಾಮಿ ಹಿಂದ್ ಹಾಗೂ ರಾಜ್ಯ ಮಾನವ ಹಕ್ಕುಗಳ ಮಂಡಳಿಯ ಸಂಯುಕ್ತಾಶ್ರಯದಲ್ಲಿ 'ಮಾನವ ಹಕ್ಕುಗಳು' ಎಂಬ ವಿಷಯದಲ್ಲಿ ಪವಿತ್ರ ಕುರ್‌ಆನ್ ಪ್ರವಚನ ಕಾರ್ಯಕ್ರಮ ಜರಗಿತು.

ಸಾನಿಧ್ಯ ವಹಿಸಿದ ಶ್ರೀ ಶ್ರೀ ಶ್ರೀ ಸಂಗನಬಸವ ಸ್ವಾಮೀಜಿ ವಿರಕ್ತ ಮಠ ಯರನಾಳ ಮಾತನಾಡಿ, "ಪ್ರವಾದಿ ಮುಹಮ್ಮದರು(ಸ) ಮಾನವ ಹಕ್ಕುಗಳ ರಕ್ಷಣೆ ಮಾಡುವಲ್ಲಿ ಪ್ರಥಮವಾಗಿದ್ದರು. ಶಾಂತಿ, ಪರೋಪಕಾರ ಗುಣ, ದುರ್ಬಲರಿಗೆ ಸಹಾಯ ಹಸ್ತ, ಹಿರಿಯರನ್ನು ಗೌರವಿಸುವುದು, ಕಿರಿಯವರನ್ನು ಪ್ರೀತಿಸುವುದು ಇತ್ಯಾದಿ ಅಂಶಗಳು ಪ್ರಸ್ತಾಪಿಸಲಾಗಿದೆ. ಧರ್ಮದ ತಿರುಳನ್ನು ಅರಿಯದ ಅಧರ್ಮಿಯರು ಮಾನವ ಹಕ್ಕುಗಳನ್ನು ರಕ್ಷಿಸಲಾರು" ಎಂದರು.

ಶಾಂತಿ ಪ್ರಕಾಶನದ ವ್ಯವಸ್ಥಾಪಕರಾದ ಮುಹಮ್ಮದ್ ಕುಂಞಿ ಪ್ರವಚನ ನೀಡಿ, "ಮಾನವ ಹಕ್ಕುಗಳು 20ನೇ ಶತಮಾನದಲ್ಲಿ ಪ್ರಚಲಿತವಾಯಿತು. ಆದರೆ, ಕುರ್‌ಆನ್‌ನ 7ನೇ ಶತಮಾನದಲ್ಲೇ ಅದನ್ನು ಪ್ರಬಲವಾಗಿ ಪ್ರತಿಪಾದಿಸಿತ್ತು. ಪ್ರವಾದಿ ಮುಹಮ್ಮದ್‌ರು(ಸ) ಎಲ್ಲರನ್ನೂ ಸಮಾನವಾಗಿ ಕಂಡರು. ಯಾವ ರಾಷ್ಟ್ರದಲ್ಲಿ ಮಾನವ ಹಕ್ಕುಗಳ ಉಲ್ಲಂಘನೆ ಜರುಗು ತ್ತದೆಯೋ ಆ ರಾಷ್ಟ್ರ ಅಶಾಂತಿ ಮತ್ತು ಅಸಹನೆಯಿಂದ ಕೂಡಿರುತ್ತದೆ" ಎಂದರು.

ಜಮಾಅತ್ ನಗರಾಧ್ಯಕ್ಷ ಅಬ್ದುಲ್ ರಹ್ಮಾನ್ ನಾಸರ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಅಖಿಲ ಭಾರತ ವೀರಶೈವ ಮಹಾಸಭಾದ ಅಧ್ಯಕ್ಷ ಸಿದ್ರಾಮಪ್ಪ ಉಪ್ಪಿನ ಸಂದರ್ಭೋಚಿತವಾಗಿ ಮಾತನಾಡಿದರು. ರಾಜ್ಯ ಮಾನವ ಹಕ್ಕುಗಳ ಮಂಡಳಿಯ ಅಧ್ಯಕ್ಷ ಹಾಸಿಂಪೀರ ವಾಲಿಕಾರ ಅಧ್ಯಕ್ಷತೆ ವಹಿಸಿದ್ದರು.

# ಇಫ್ತಾರ್ ಕೂಟ



**ಅಬುಧಾಬಿ:** ಬ್ಯಾರಿ ವೆಲ್‌ಫೇರ್ ಅಸೋಸಿಯೇಶನ್ ಅಬುಧಾಬಿಯು ಇಲ್ಲಿನ ಇಂಡಿಯನ್ ಸೋಶಿಯಲ್ ಸೆಂಟರ್‌ನ ಮುಖ್ಯ ಮಂಟಪದಲ್ಲಿ ಆಗಸ್ಟ್ 20ರಂದು ಇಫ್ತಾರ್ ಕೂಟ ಆಯೋಜಿಸಿತ್ತು. ಅಸೋಸಿಯೇಶನ್ ಅಧ್ಯಕ್ಷ ಮುಹಮ್ಮದ್ ಅಲಿ ಉಚ್ಚಿಲ್, ಪ್ರಧಾನ ಕಾರ್ಯದರ್ಶಿ ಅಬ್ದುಲ್ಲಾ ಮದುಮೂಲೆ ದಿಕ್ಸೂಚಿ ಭಾಷಣ ಮಾಡಿದರು. ಹಂಝಾ ಅಬ್ದುಲ್ ಖಾದರ್, ಶೈಖ್ ಬಾವ, ಡಾ| ವಕಾರ್ ಅಝೀಮ್, ಸಿರಾಜ್ ಅಹ್ಮದ್, ಮೊಯ್ದು ಸಾಹೇಬ್, ಅಬ್ದುಸ್ಸಲಾಮ್ ಮುಂತಾದವರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

# ಹೆಚ್.ಆರ್.ಎಸ್. ಸೇವೆಗಳು

ಶಿವಮೊಗ್ಗ: ಹ್ಯುಮಾನಿಟೇರಿಯನ್ ರಿಲೀಫ್ ಸೊಸೈಟಿ, ಶಿವಮೊಗ್ಗ ಶಾಖೆಯು 2009 ಆಗಸ್ಟ್ 23ರಿಂದ 2010 ಆಗಸ್ಟ್ 6ರ ವರೆಗೆ 70,28,334 ರೂಪಾಯಿಗಳ ಸೇವಾ ಚಟುವಟಿಕೆಗಳನ್ನು ಕೈಗೊಂಡಿದೆ. ಕಳೆದ ಹತ್ತು ವರ್ಷಗಳಿಂದ ಹೆಚ್.ಆರ್.ಎಸ್. ಶಿವಮೊಗ್ಗ ಶಾಖೆಯು ಬಡ್ಡಿರಹಿತ ಸಾಲ ಒದಗಿಸುವ ಮೂಲಕ ಸಾವಿರಾರು ಮಂದಿಯನ್ನು ಬಡ್ಡಿಯ ಜಾಲದಿಂದ ಮುಕ್ತಗೊಳಿಸಿದೆ. ಹಾಗಾಗಿ ಪ್ರತಿ ವರ್ಷದಂತೆ ಈ ವರ್ಷವೂ ಹೆಚ್.ಆರ್.ಎಸ್. ಶಿವಮೊಗ್ಗ ಶಾಖೆಯು ಝಕಾತ್, ಫಿತ್ರ್‌ಗಳನ್ನು ಆಹ್ವಾನಿಸುತ್ತದೆ. ಈ ಧಾರ್ಮಿಕ ಕಾರ್ಯದಲ್ಲಿ ಸಹಕರಿಸಲಿಚ್ಛಿಸುವವರು ತಮ್ಮ ಝಕಾತ್, ಸದಕಾ(ದಾನ)ಗಳನ್ನು ಜಮಾಅತೆ ಇಸ್ಲಾಮಿ ಹಿಂದ್, ಶಿವಮೊಗ್ಗ ಶಾಖೆಗೆ ತಲುಪಿಸ ಬಹುದು.

# ಜಿ.ಐ.ಓ. ತರಬೇತಿ ಸಭೆ

**ಮಂಗಳೂರು:** ಜಿ.ಐ.ಓ. ಸ್ಥಳೀಯ ಶಾಖೆಯ ವತಿಯಿಂದ ಸೆ. 5ರಂದು ಬೆಳಿಗ್ಗೆ ಗಂಟೆ 11ರಿಂದ 12ರ ವರೆಗೆ ನೆಲ್ಲಿಕಾಯಿ ರಸ್ತೆಯಲ್ಲಿರುವ ನಲಪಾಡ್ ಕಮ್ಯುನಿಟಿ ಹಾಲ್‌ನಲ್ಲಿ ತರಬೇತಿ ಸಭೆಯನ್ನು ಏರ್ಪಡಿಸಲಾಗಿದೆ. ಝಕಾತ್, ತೌಬಾ ಮುಂತಾದ ವಿಷಯಗಳ ಕುರಿತು ಮರ್ಯಮ್ ಶಹೀರಾ, ಮುಮ್ತಾಝ್ ಮತ್ತು ಕನೀಝ್ ಫಾತಿಮಾ ಕನ್ನಡ ಹಾಗೂ ಇಂಗ್ಲಿಷ್ ಭಾಷೆಗಳಲ್ಲಿ ಮಾತನಾಡಲಿರುವರು. 13ರಿಂದ 28ರೊಳಗಿನ ವಯೋಮಿತಿಯ ಎಲ್ಲಾ ಯುವತಿಯರು ಇದರ ಸಂಪೂರ್ಣ ಸದುಪಯೋಗ ಪಡೆಯಬೇಕೆಂದು ಪ್ರಕಟಣೆಯಲ್ಲಿ ಕೋರಲಾಗಿದೆ.

# ನಿಧನ

ಮಂಗಳೂರು: ಇಲ್ಲಿನ ಜೋಕಟ್ಟೆ ನಿವಾಸಿ ಅಬ್ದುಲ್ ರಝಾಕ್ ಎಂಬವರ ಪತ್ನಿ ಮುಮ್ತಾಝ್(35) ಬೆಂಕಿ ಆಕಸ್ಮಿಕದಿಂದ ನಿಧನರಾಗಿದ್ದರು. ಮೃತರು ಪತಿ ಮತ್ತು ನಾಲ್ವರು ಮಕ್ಕಳನ್ನು ಅಗಲಿದ್ದಾರೆ. ಅಲ್ಲಾಹ್ ಮೃತರಿಗೆ ಮಗ್‌ಫಿರತ್ ಮತ್ತು ಮರ್ಹಮತ್ ನೀಡಿ ಅನುಗ್ರಹಿಸಲಿ.

# ಇಫ್ತಾರ್ ಸೌಹಾರ್ದ ಕೂಟ



**ಸಂತೆಕಟ್ಟೆ (ಉಡುಪಿ):** "ನಮ್ಮ ರಕ್ತ, ಮೈ ಬಣ್ಣ, ನಾವು ಉಪಯೋಗಿಸುವ ಪ್ರಾಕೃತಿಕ ವಸ್ತುಗಳು ಎಲ್ಲವೂ ಒಂದೇ ರೀತಿಯದ್ದಾಗಿವೆ. ನಮ್ಮೆಲ್ಲರನ್ನೂ ಸೃಷ್ಟಿಸಿದವನು ಒಬ್ಬನೇ. ನಮ್ಮ ಸೃಷ್ಟಿ ಒಂದೇ ತಂದೆ ತಾಯಿಯಿಂದಾಗಿರುತ್ತದೆ. ಹೀಗಿರುವಾಗ ಅನೇಕ ಧರ್ಮಗಳು ಇರಲು, ಅನೇಕ ದೇವರುಗಳು ಇರಲು ಹೇಗೆ ಸಾಧ್ಯ? ನಾವು ಧರ್ಮವನ್ನು ಸರಿಯಾಗಿ ಅರಿತಿಲ್ಲದ ಕಾರಣದಿಂದ ಹೀಗಾಗಿದೆ. ನಾವೆಲ್ಲರೂ ಸಮಾನರು, ನಮ್ಮೆಲ್ಲರ ದೇವನು ಒಬ್ಬನೇ ಆಗಿರುವಾಗ ಧರ್ಮ ಕೂಡ ಒಂದೇ ಆಗಿರಬೇಕು" ಎಂದು ಉಡುಪಿ ಜಿಲ್ಲಾ ಶಾಮಿಯಾನ ಸಂಯೋಜಕರ ಒಕ್ಕೂಟದ ಅಧ್ಯಕ್ಷರಾದ ಅಕ್ಬರ್ ಅಲಿಯವರು ಸಂತೆಕಟ್ಟೆಯಲ್ಲಿ ಜಮಾಅತೆ ಇಸ್ಲಾಮಿ ಹಿಂದ್ ಉಡುಪಿ ಆಯೋಜಿಸಿದ ಸೌಹಾರ್ದ ಇಫ್ತಾರ್ ಕೂಟದಲ್ಲಿ ಹೇಳಿದರು.

ಮುಂದುವರಿದು ಅವರು, "ನಾವು ಧರ್ಮವನ್ನು ಕೆಲವು ಆಚಾರಗಳಿಗೆ ಸೀಮಿತಗೊಳಿಸಿದ್ದೇವೆ. ನಿಜವಾಗಿ ಧರ್ಮವು ಜನರನ್ನು ಒಗ್ಗೂಡಿಸುವ, ಸಂಸ್ಕರಿಸುವ, ಸುಂದರ ಸಮಾಜವನ್ನು ಕಟ್ಟುವ ಕೆಲಸ ಮಾಡುತ್ತದೆ. ಯಾವ ಧರ್ಮವೂ ಕೂಡ ಜನರನ್ನು ಒಡೆಯುವ ಕೆಲಸ ಮಾಡಲಾರದು. ಹಾಗೆ ಮಾಡಿದರೆ ಅದು ಧರ್ಮವೇ ಅಲ್ಲ. ಅದುದರಿಂದ ನಾವು ಧರ್ಮವನ್ನು ಸರಿಯಾಗಿ ಅಧ್ಯಯನ ನಡೆಸಿ, ನಾವು ಎಲ್ಲಿ ತಪ್ಪಿದ್ದೇವೆ ಎಂಬುದರ ಬಗ್ಗೆ ಅವಲೋಕನ ನಡೆಸಬೇಕಾಗಿದೆ" ಎಂದರು.

ಪ್ರಾಸ್ತಾವಿಕ ನುಡಿಗಳನ್ನಾಡಿದ ಒಕ್ಕೂಟದ ಪ್ರಧಾನ ಕಾರ್ಯದರ್ಶಿ ವಿಜಯ ಕಲ್ಯಾಣಪುರ ಇವರು, "ಎಲ್ಲ ಧರ್ಮಿಯರು ಸಮಾಜದಲ್ಲಿ ಒಂದಾಗಿ ಬಾಳಲು ಇಂದಿನ ರಾಜಕೀಯ ಪಕ್ಷಗಳು ತಡೆಯುಂಟು ಮಾಡುತ್ತಿರುವ ಈ ಸಂದರ್ಭದಲ್ಲಿ ಜಮಾಅತ್‌ನವರು ಸೌಹಾರ್ದ ಇಫ್ತಾರ್ ಕೂಟವನ್ನು ಆಯೋಜಿಸಿ ಎಲ್ಲ ಧರ್ಮಿಯರನ್ನು ಒಂದುಗೂಡಿಸಲು ಪ್ರಯತ್ನಿಸುತ್ತಿರುವುದು ಶ್ಲಾಘನೀಯ" ಎಂದರು. ಜ.ಇ. ಹಿಂದ್ ಉಡುಪಿ ಶಾಖೆಯ ಅಧ್ಯಕ್ಷ ಮುಹಮ್ಮದ್ ಮರಕಡ ಸ್ವಾಗತಿಸಿದರು.

# ಸಾಮೂಹಿಕ ಫಿತ್ರ್ ಝಕಾತ್

ನಾವು ಮಾತ್ರ ಹಬ್ಬ ಆಚರಿಸಿದರೆ ಸಾಕೇ?



ಪ್ರತಿ ವರ್ಷದಂತೆ ಈ ವರ್ಷವೂ ಸಾಮೂಹಿಕ ಫಿತ್ರ್ ಝಕಾತ್‌ನ ಸಂಗ್ರಹ ಹಾಗೂ ವಿತರಣೆಯ ವ್ಯವಸ್ಥೆ ಹಮ್ಮಿಕೊಂಡಿದ್ದೇವೆ.

ಕಳೆದ ವರ್ಷ 2,065 ಕುಟುಂಬಗಳಿಗೆ ರೂ. 2,77,215 ಫಿತ್ರ್ ಝಕಾತ್ ಸಂಗ್ರಹಿಸಿ ತೀರಾ ಬಡ ಪ್ರದೇಶಗಳಿಗೆ ವಿತರಿಸಲಾಯಿತು.

ಸಂಪರ್ಕಿಸಿರಿ

**ಸಮಾಜ ಸೇವಾ ಘಟಕ ಜಮಾಅತೆ ಇಸ್ಲಾಮಿ ಹಿಂದ್**

ಹಿದಾಯತ್ ಸೆಂಟರ್, ಬೀಬಿ ಅಲಾಬಿ ರಸ್ತೆ, ಮಂಗಳೂರು–575001

ದೂರವಾಣಿ: 9945923640, 9901318820, 9448696481

AIT Aysha INTERNATIONAL TRAVELS
K.M. Haris
Abdul Samad
HAJ & UMRAH
(Mangalore to Mangalore)
NORMAL CLASS Rs. 1,65,000.00 | ECONOMY CLASS Rs. 1,85,000.00 | DELUXE CLASS Rs. 1,95,000.00
Domestic & International Air Tickets, Passport Service, Emigration,
Visa Stamping, Visit Visa Saudi & Dubai, Umrah Stamping, Certificate Attestation

WAKALA
جاكتى تراويلس
المستشارون الايد العاملة المعترف لدى الحكومة الهندية وزارة العمل
ترخص: ٠٣٤٠/موم/بر/١٠٠٠٤/٣٤/٨١٥٣/٢٠٠٨
سعودى كونصليت رقم البطاقة: ٢٩١/١٠
Jakti travels
Approved by Govt. of India, Ministry of Overseas Indian Affairs
Regd. No. 0340/Mum/Per/10004¾/8153/2008
Saudi Consulate I. Card No. 291/10

SADANANDA TOWERS ANNEX, 1ST FLOOR, D-NO. 2-2-62B7, CITY BUS STAND UDUPI-576101.
Ph : 0820-4294313 Fax : 0820-4294313 Mob: 9620441544, 9880172472, 9900380336 E-mail : haris_yachi@yahoo.com




To.____________________

SANMARGA KANNADA WEEKLY
Post Box No. 16, Hidayath Centre, Mangalore - 575 001 ☎: 2422786
2010 ಸೆಪ್ಟೆಂಬರ್ 05 – 11 / 1431 ರಮಝಾನ್ 25 – ಶವ್ವಾಲ್ 01




'Registered' R.No. KA/SK/MNG/129/2009-11 Licenced to post without pre payment L No. SK/MNG/WPP-10/09-11 Posted at R.M.S. Mangalore on 31-08-2010 (Tuesday) & 02-09-2010 (Thursday)

# ರೋಗ ಪತ್ತೆಯಾಗಿದೆ, ಇನ್ನಾದರೂ ಮದ್ದು ಮಾಡಿ

(ಮುಖಪುಟದಿಂದ)

ಅವರು ನರಸಿಂಹರಾವ್ ಸಂಪುಟದಲ್ಲಿ ಅರ್ಥ ಸಚಿವರಾಗಿ ದೇಶದ ಆರ್ಥಿಕ ರಂಗವನ್ನು ಪುನರ್ನಿರ್ಮಿಸಿದರು. ಕೇವಲ ಅಭಿವೃದ್ಧಿಯ ಗುರಿಯಾಗಿರಿಸಿದ ಈ ಹೊಸತಂತ್ರವು ಬೃಹತ್ ಶಕ್ತಿಗಳು ಮತ್ತು ಶ್ರೀಮಂತರಿಗೆ ಅನುಕೂಲ ವಾತಾವರಣ ಒದಗಿಸಿತು. ಅವರನ್ನು ನಿಯಂತ್ರಿಸ ಬೇಕಾದ ಸರಕಾರವೇ ಅವರ ದಲ್ಲಾಳಿಯಾಯಿತು. ಕಳೆದ ತಿಂಗಳು ರಾಷ್ಟ್ರೀಯ ಅಭಿವೃದ್ಧಿ ನಿಗಮದ ಸಭೆಯಲ್ಲಿ ಆಂಶಿಕ ಅಭಿವೃದ್ಧಿಯ ಬದಲಾಗಿ, ಸಾರ್ವಜನಿಕ ಅಭಿವೃದ್ಧಿಯ ಅಗತ್ಯವಿದೆಯೆಂದು ಅವರು ಒಪ್ಪಬೇಕಾಯಿತು. ನಮ್ಮ ಪಾರ್ಲಿಮೆಂಟ್ ಬಂಡವಾಳಶಾಹಿ ಅಭಿವೃದ್ಧಿಯ ರಕ್ಷಣಾಗಾರ ವಾಗಿದೆ. ಮನಮೋಹನ್ ಸಿಂಗ್ ಸಂಪುಟದಲ್ಲಿ 47 ಮಂದಿ ಕೋಟ್ಯಾಧಿಪತಿಗಳಿದ್ದಾರೆ. ಓರ್ವ ಎನ್.ಸಿ.ಪಿ. ಸಂಸದನಿಗೆ 90 ಕೋಟಿ ಆಸ್ತಿಯಿದೆ. ಅತಿ ಶ್ರೀಮಂತರಾದ 10 ಕೇಂದ್ರ ಸಚಿವರಲ್ಲಿ ಎಂಟು ಮಂದಿ ಮನಮೋಹನ್ ಸಿಂಗ್‌ರ ಪಕ್ಷ ದವರು. ಲೋಕಸಭೆಯ 315 ಸದಸ್ಯರು ಮಿಲಿಯಾಧಿ ಪತಿಗಳು. ರಾಜ್ಯಸಭೆಯ ಹೊಸ ಸದಸ್ಯರಲ್ಲಿ 43 ಸಂಸದರ ಸರಾಸರಿ ಸಂಪತ್ತು 25 ಕೋಟಿ ರೂ.ಗಿಂತ ಅಧಿಕ. ಈ ರೀತಿಯ ಸಮಾಜ ಸೇವಕರು ಮತ್ತು ಸಚಿವರು ಆಳುವಾಗ ಬಡವರನ್ನು ಮರೆಯುತ್ತಾರೆ. ಆದ್ದರಿಂದಲೇ ಸಂಸದರಿಗೆ ಮಾಸಿಕ ಒಂದು ಲಕ್ಷ ಕ್ಕಿಂತ ಅಧಿಕ ಪಗಾರ ದೊರೆತರೂ ಸಾಕಾಗುವುದಿಲ್ಲ ಮತ್ತು ಅದನ್ನು ಬಹಿರಂಗವಾಗಿ ಹೇಳಲೂ ಹೇಸುವು ದಿಲ್ಲ. ಆದ್ದರಿಂದಲೇ ಎಲ್ಲ ಕಾನೂನು ನಿರ್ಮಾಣ ಗಳು ಶ್ರೀಮಂತರ ಪರವಾಗುತ್ತಿವೆ.

ದೇಶದ ಅಶಾಂತಿ ಮತ್ತು ಅಪರಾಧ ಕೃತ್ಯಗಳ ಕಾರಣವನ್ನು ಪ್ರಧಾನಿಯವರು ಸರಿಯಾಗಿಯೇ ಗುರುತಿಸಿದ್ದಾರೆ. ಅನ್ಯಾಯ ಮತ್ತು ಅಸಮಾನತೆಯು ದೇಶದಾದ್ಯಂತ ಹರಡಿದೆ. ದೌರ್ಭಾಗ್ಯವಶಾತ್, ಆಡಳಿತಗಾರರು ಈ ಕಾರಣಗಳಿಗೆ ಮದ್ದು ಮಾಡದೆ, ಅವುಗಳ ಲಕ್ಷಣಗಳಾಗಿರುವ ಅಕ್ರಮ ಮತ್ತು ಪ್ರತಿಭಟನೆಗಳನ್ನು ಅಣಗಿಸಲು ಶ್ರಮಿಸುತ್ತಿದ್ದಾರೆ. ಹೀಗೆ ಕಾರಣವು ಸ್ಪಷ್ಟವಾಗಿರುವುದರಿಂದ, ಇನ್ನು ಮನಮೋಹನ್ ಸಿಂಗ್‌ರು ಅದರ ಪರಿಹಾರದ ಬಗ್ಗೆ ಆಲೋಚಿಸಬೇಕು. ಸರಕಾರವು ಬಡವರ ಹಾಗೂ ಅವರ ಕಲ್ಯಾಣಕ್ಕೆ ಕ್ರಮ ಕೈಗೊಳ್ಳಬೇಕು. ಬಂಡವಾಳಶಾಹೀ ಶೈಲಿ ತೊರೆದು ಪುನಃ ರಾಷ್ಟ್ರೀಯ ಅರ್ಥವ್ಯವಸ್ಥೆಗೆ ಮರಳಬೇಕು. ಆದರೆ ಅದು ನಡೆದೀತೇ? 21 ವರ್ಷಗಳ ಸಂಪ್ರದಾಯವನ್ನು ತಿದ್ದಲು ಮನಮೋಹನ್ ಸಿಂಗ್ ಸಿದ್ಧರಾಗುವರೇ? ಸಂಪತ್ತಿನ ಉತ್ಪಾದನೆಯಂತೆಯೇ ಅದರ ವಿತರಣೆಯೂ ನ್ಯಾಯೋಚಿತ ವಾಗಬೇಕು. ಈ ಮೂಲನೀತಿಯನ್ನು ಅಂಗೀಕರಿಸಿರುವ ಹಿನ್ನೆಲೆಯಲ್ಲಿ ಆ ಪ್ರಕಾರ ಮುಂದಿನ ಹೆಜ್ಜೆಗೆ ಪ್ರಧಾನಿ ಯವರು ಸಿದ್ಧರಾಗುವರೇ?

# ಸಂಬಳ ಹೆಚ್ಚಳಕ್ಕೆ ಅರ್ಹತೆ ಬೇಡವೇ?

(ಮುಖಪುಟದಿಂದ)

ಇವರ ಕಿರುಕುಳದಿಂದ ದಕ್ಷ ಅಧಿಕಾರಿಗಳು ತೊಂದರೆ ಅನುಭವಿಸುತ್ತಿದ್ದಾರೆ. ಹೆಚ್ಚಿನ ಶಾಸಕ ಮಹಾಶಯರು ಗಳು ನುಂಗಣ್ಣಗಳೇ ಆಗಿದ್ದಾರೆ. ರಾಜಕೀಯ ಎಂಬುದು ಹೊಲಸು ಎನ್ನುವಷ್ಟು ಗಬ್ಬು ನಾರುತ್ತಿದೆ. ತಮ್ಮ ಕ್ಷೇತ್ರದ ಬಗ್ಗೆ ಕಾಳಜಿ ವಹಿಸಿ ಸ್ಪಂದಿಸುವ ಶಾಸಕರೂ ನಮ್ಮಲ್ಲಿದ್ದಾರೆ. ಆದರೆ ದುರುಳರಿಂದಾಗಿ ಸ್ವಚ್ಛ ರಾಜಕಾರಣಿಗಳು ತಲೆ ಎತ್ತದಂತಾಗಿದೆ.

ಚಿಕ್ಕಮಗಳೂರು ಜಿಲ್ಲೆಯ ನರಸಿಂಹ ರಾಜಪುರ ತಾಲೂಕಿನಲ್ಲಿ ಬಗರ್ ಹುಕುಂ ಸಾಗುವಳಿ ಸಕ್ರಮ ಪ್ರಕ್ರಿಯೆಯಲ್ಲಿ ನಡೆದ ಅಕ್ರಮಗಳು ಗರಿಗೆದರಿಕೊಂಡಿದೆ. ಈ ಬಗರ್ ಹುಕುಮ್ ಸಕ್ರಮ ಸಮಿತಿಯ ಅಧ್ಯಕ್ಷರು ಸ್ಥಳೀಯ ಶಾಸಕರು ಎಂಬುದು ಗಮನಾರ್ಹ. ಅರ್ಜಿಯನ್ನು ಸಲ್ಲಿಸಿದವರ ಹೆಸರನ್ನು ಅಳಿಸಿ ಹಾಕಿ ತಮಗೆ ಬೇಕಾದವರ ಹೆಸರುಗಳನ್ನು ಸೇರಿಸಿ ಮಂಜೂರು ಮಾಡಿರುವುದಲ್ಲದೆ, ಹಲವು ವರ್ಷಗಳ ಹಿಂದೆ ವಜಾ ಆದ ಅರ್ಜಿಗಳನ್ನು ಇಲ್ಲಿ ಮಾನ್ಯ ಮಾಡಿದ್ದಾರೆ. ತಾಲೂಕೊಂದರಲ್ಲೇ 147 ಪ್ರಕರಣ ಗಳಲ್ಲಿ 300 ಎಕರೆಗೂ ಹೆಚ್ಚು ಭೂಮಿಯನ್ನು ಅಕ್ರಮ ವಾಗಿ ಮಂಜೂರು ಮಾಡಿ ಕಬಳಿಸಲಾಗಿದೆ. ಅರ್ಜಿಗಳಿಗೆ ತಹಶೀಲ್ದಾರ್‌ರವರ ದೃಢೀಕರಣ ಪತ್ರ ಬೇಕಾಗಿತ್ತು. ಅದೂ ಕೂಡಾ ಇಲ್ಲಿ ನಡೆದಿಲ್ಲ. ಹಸ್ತಾಕ್ಷರಗಳನ್ನು ಬದಲಾಯಿಸಲಾಗಿದೆ. ಇದೆಲ್ಲದಕ್ಕೂ ದಾಖಲೆಗಳಿವೆ ಯೆಂದು ಮಾಧ್ಯಮಗಳು ವರದಿ ಮಾಡಿವೆ.

ಇಲ್ಲಿ ಕೂಲಿ ಕಾರ್ಮಿಕನಿಗೆ ಕೂಡಾ ತನ್ನ ವೃತ್ತಿಯ ಕುರಿತು ನಿಯ್ಯತ್ತಿದೆ. ನಮ್ಮ ಜನಪ್ರತಿನಿಧಿಗಳು ತಾವು ಸರಕಾರದಿಂದ ಪಡೆಯುತ್ತಿರುವ ವೇತನಕ್ಕೆ ನ್ಯಾಯ ಒದಗಿಸುತ್ತಿದ್ದೇವೆಯೇ ಎಂದು ಆತ್ಮಾವಲೋಕನ ನಡೆಸ ಬೇಕಾಗಿದೆ. ಇನ್ನು ಸಂಬಳ ಹೆಚ್ಚು ಮಾಡಿಸಲು ನಾವು ನೈತಿಕವಾಗಿ ಅರ್ಹರೇ ಎಂದು ಸ್ವಯಂ ಚಿಂತನೆಗೆ ಹಚ್ಚುವ ಕೆಲಸ ಮಾಡಬೇಕು. ಇದು ಶಾಸಕರಿಗೆ ಮಾತ್ರ ಸೀಮಿತವಾಗಬಾರದು. ಸರಕಾರದ ಉನ್ನತ ಹುದ್ದೆಯಲ್ಲಿರುವವರೂ ಈ ನಿಟ್ಟಿನಲ್ಲಿ ಆಲೋಚಿಸುವ ಅನಿವಾರ್ಯತೆ ಇದೆ. ರಾಜಕೀಯವೆಂಬುದು ಹಣ ಗಳಿಸುವ ಉದ್ಯಮವೆಂದು ಜನಜನಿತವಾಗಿರುವಾಗ ಆ ಭಾವನೆಯನ್ನು ಹುಸಿಗೊಳಿಸಬೇಕು. ಇಲ್ಲಿ ಸ್ವಚ್ಛ ಸಂಸ್ಕೃತಿ, ಸಮಾಜ ನೆಲೆಯೂರಲು ನಮ್ಮ ಜನ ಪ್ರತಿನಿಧಿಗಳು ಮುಂದಾಗಬೇಕು.

## ವಧು ಬೇಕಾಗಿದೆ

ಇಸ್ಲಾಮಿ ಹಿನ್ನೆಲೆಯ, ಖಾಸಗಿ ಕಾಲೇಜಿನಲ್ಲಿ ಉದ್ಯೋಗದಲ್ಲಿರುವ ಯುವಕನಿಗೆ ಸೂಕ್ತ ವಧು ಬೇಕಾಗಿದ್ದಾರೆ. ಉತ್ತರ ಕರ್ನಾಟಕದ ಜಮಾಅತ್ ಹಿನ್ನೆಲೆಯ ಜಿ.ಐ.ಓ. ಕಾರ್ಯಕರ್ತೆಯರಿಗೆ ಆದ್ಯತೆ. ಸಂಪರ್ಕಿಸಿ:

**Box No: 228**
C/o. Sanmarga Weekly,
P.B. No. 16,
Mangalore - 575001




Volume: 33, Issue: 25, Printed & Published by M. Sadullah on behalf of Sanmarga Publication Trust, Printed at Comprint, Hidayath Centre, Beebi Alabi Road, Mangalore-575001
And Published at Hidayath Centre, Beebi Alabi Road, Mangalore-575001. Editor: Abdul Kader Kukkila, Chief Editor: P. NOOR MUHAMMED
Ph: 2422786. Fax: 91-0824-2426846. E-mail: sanmargamatter@gmail.com Website: www.sanmarga.com (Regd. with RNI No. 29903/78)